ಹಾಡು

ಬಾಳಿನ ಭಾಗ್ಯ

KODAGU KANNADA WEEKLY MERCARA

ವಾರದ ಕಥೆ.

ನಿರಪರಾಧಿ!

ಲೇ:—ಶ್ರೀ ಎಂ. ಎಸ್. ಕೃಷ್ಣಪ್ಪ, ಕಾನೂರು.

ಆವಳು ಆತನ ಹೃದಯ ಭೂಮಿಯಲ್ಲಿ ಪ್ರೇಮದ ಬಿತ್ತನ್ನು ಹೊಟ್ಟ ಮೊದಲು ಬಿತ್ತಿದ್ದಳು; ಅದು ಮಾತ್ರ ಎಷ್ಟು ಕಂಬನಿಯ ನೀರೆರೆದರೂ ಮೊಳೆಯಲಿಲ್ಲ. ಅದು ದುರ್ಭಾಗ್ಯವಾಗಿತ್ತು. ಕಾರಣ, ದೃಷ್ಯ ಕೂಡ ಹಾಕುವ ಭರದಲ್ಲಿ ಆತನ ಹೃದಯದ ಫಲವತ್ತತೆಯು ನಾಶವಾಗಿ, ವಿಶ್ವವ್ಯಾಪಿ ಕಾನೇನ್ ಹೃದಯ ಬಂಜರಾಗಿ, ಎಷ್ಟು ನೀರು ಹೊಯ್ದರೂ ನಾಣ್ಯವು ಮೊಳೆಯಲಾರದ ರೀತಿಯಲ್ಲಿ ಆತನ ಹೃದಯ ಭೂಮಿಯಲ್ಲಿ ಆಕೆಯ ಪ್ರೇಮದ ಬಿತ್ತವು ಮೊಳಕೆಯಾಲಿಲ್ಲ. ಪ್ರಾಯದ ಮುದುಕನು ನೆಪಿಸುವ ಹುಡುಗಿಯನ್ನು ರೂಢಿಯ ಕುರುಡುತನದಿಂದ ಲಗ್ನ ಮಾಡಿಕೊಂಡಿದ್ದನು. ಬೀದಿಯಲ್ಲಿ ಗೊಂಬೆಯೊಡನೆ ಮದುವೆಯಾಟವಾಡುತಿದ್ದ ಎಳೆ ಹುಡುಗಿಯನ್ನು ಆತನು ಮಡದಿಯೆಂದು ಮನೆಗೆ ಕರೆತಂದಿದ್ದನು.

ಕೆಲವೇ ತಿಂಗಳುಗಳಲ್ಲಿ ಕಮಲಳು ಋತುಮತಿಯಾಗಿ ಅರಳಿದ ಕಮಲದಂತೆ ಬೆಳೆದು, ಹದಿನಾರು ವಸಂತಗಳ ಸೊಬಗು, ಸೊಂಪು ಪೆಂಪುಗಳು ಒಟ್ಟುಗೂಡಿ ವೈವೆತ್ತ ಮನಮೋಹಕ ಮೂರ್ತಿಯಾದಳು. ಅವಳ ಕೇಶಕಿಯು ವೈಬಣ್ಣ, ಜೆಂದುಟಿಗಳ ಚಿರಮಂದಹಾಸ, ಮುಂಗುರುಳ ಲೀಲೆ, ವಿಶಾಲವಾದ ಸುಂದರ ಹಣೆ, ಅದರ ಮೇಲೆ ನೋಟವನ್ನು ಹಿಡಿದು ನಿಲ್ಲಿಸುವ ಕುಂಕುಮದ ಬೊಟ್ಟು, ಎರಡು ಕಡೆಗೂ ಸಮನಾಗಿ ನೀಳವಾಗಿ ಬಾಗಿದ್ದ ಪುಬ್ಬಿನ ರೇಖೆಗಳು, ಆದರಡಿಯಲ್ಲಿ ಕಪ್ಪನ್ನ ಕಾಡಿಗೆ ತೀಡಿದ ಬೊಗಸೆ ಕಣ್ಣುಗಳು, ಅವುಗಳಲ್ಲಿ ಮರಿವಿಂಚುಗಳ ಚಂಚಲ ನರ್ತನ, ಇವುಗಳೆಲ್ಲವೂ ಸೃಷ್ಟಿಕರ್ತನ ಕಲಾವೈಶಿಷ್ಟ್ಯವನ್ನು ಎತ್ತಿ ತೋರಿಸುತಿತ್ತು. ಆವಳ ಸೌಂದರ್ಯವು ವರಕೃತಿಯಾಗಿತ್ತೆ ವಿನಃ ನರಕೃತಿಯಾಗಿರಲಿಲ್ಲ. ಆಧುನಿಕ ವಿಲಾಸ ಸಾಮಗ್ರಿಗಳು ಆವಳಿಗೆ ಅವಶ್ಯವಿರಲಿಲ್ಲ. ಆವಳ ರೂಪು ಲಾವಣ್ಯಗಳ ವಿಕೀಕರಣ ಆಧುನಿಕ ಸ್ತ್ರೀಯರ ವೈಸಿರಿ, ನಡೆಯ ಬೆಡಗು, ನಡಲ ಬಳಕು, ಕಣ್ಣ ಜೆಲುವು, ನಗೆಯ ಅಂದ, ಮೊಗದ ಚಂದ, ಅವಳಿಂದ ಪಡೆದ ದಾನವೆಂದೇ ಹೇಳಬೇಕು. ಆದರೂ ಬಡತನದ ಬೇಗೆಯಿಂದ ಆಕೆಯ ಬಾಳು ಹಾಳಾಯಿತು. ಋತುಮತಿಯಾದ ಕಮಲಳು ಪತಿಯ ಸನಿಹವನ್ನು ಬಯಸಿ ತಾನಾಗಿ ಬಳಿ ಸೇರಿದರೂ ಪತಿಯೆನಿಸಿಕೊಂಡ ಪ್ರಾಣಿ ಹಣವೆಣಿಸುವುದರಲ್ಲೇ ತಲ್ಲೀನವಾಗುತಿತ್ತು.

ಕಮಲಳ ತಂದೆಯು ಹುಟ್ಟು ಬಡವ. ತಿರಿದುಣ್ಣುವ ತಿರುಕನೆಂದೂ ಮುಟ್ಟಿಮೂದಲಿಸಬಹುದಿತ್ತು. ಅಂತಹವನ ಪುತ್ರಿಯನ್ನು ವಿವಾಹ ಮಾಡಿಕೊಳ್ಳಲು ಕನ್ಯಾಶುಲ್ಕವಿಲ್ಲದೆ ಯಾರೂ ಒಪ್ಪಲಿಲ್ಲ. ಆವರ ಸಮಾಜದಲ್ಲಿ ಬಾಲ್ಯವಿವಾಹ ಪದ್ಧತಿ. ಸುಧಾರಿಸಿದ ಯುವಕರಾರೂ ವರದಕ್ಷಿಣೆಯಿಲ್ಲದೆ ಆಕೆಯನ್ನು ಲಗ್ನ ಮಾಡಿಕೊಳ್ಳಲು ಒಪ್ಪಲಿಲ್ಲ. ಆದ್ದರಿಂದ ಧನವಂತ ಸುಬ್ಬರಾಯರಿಗೆ ಮೂರನೇ ಸಂಬಂಧವಾಗಿ ಕಮಲಳನ್ನು ಕೊಟ್ಟು ಲಗ್ನದ ನಾಟಕವಾಗಿತ್ತು. "ಕೊಟ್ಟ ಹೆಣ್ಣು ಕುಲಕ್ಕೆ ಹೊರಗೆ" ಎಂಬ ಗಾದೆಯಂತೆ ತಂದೆ ತಾಯಿಗಳು ಸಮಾಜದ ಕ್ರೂರ ಬಡಿತದಿಂದ ಬದುಕಿಕೊಂಡರು.

ಮುಮ್ಮೆಮ್ಮೊಗಿ ವರ್ಷಗಳು ಉರುಳಿದರೂ ಗಂಡನು 'ಕಮಲೂ' ಎನ್ನುವ ಸವಿನುಡಿಯನ್ನು ಆಕೆಯು ಕೇಳಲಿಲ್ಲ. ಚಿಕ್ಕುಂದದ ಮಾತುಕತೆ ನಡೆಯಲಿಲ್ಲ. ಅವರು ಒಂದು ದಿನವಾದರೂ ತಾನು ಕಟ್ಟಿಕೊಂಡ ಹೆಣ್ಣು, ತನ್ನ ಜೀವನದ ಸಂಗಾತಿಯೆಂಬ ಭಾವನೆಯಿಂದ ಅವಳೊಡನೆ ವರ್ತಿಸಲಿಲ್ಲ. ಕೆಲಸದಾಳಾಗಿಯಂತೆ ದುಡಿಸಿಕೊಂಡನು. ಬೆಳಕು ಹರಡಿ ಕತ್ತಲು ಕವಿಯುವ ವರೆಗೂ ಒಂದೇ ತೆರನಾಗಿ ಕೆಲಸ. ಒಂದು ನಿಮಿಷವೂ ಆಕೆಗೆ ವಿಶ್ರಾಂತಿಯಿಲ್ಲ. ಆವಳಿಗೆ ಸುಖವೆಂಬುವುದು ಕನ್ನಡಿಯೊಳಗಿನ ಗಂಟು. ಇಂದಲ್ಲ ನಾಳೆ ಅದು ದೊರೆಯಬಹುದೆಂಬುದು ಬರಿಯ ಬಯಕೆಯಾಗಿಯೇ ಉಳಿಯಿತು. ಕಮಲಳು ನೀರಿಗೆ ಹೋದಾಗಲೆಲ್ಲ ಪ್ರಕೃತಿಯ ನೇಮದಂತೆ ವೃಗಪಕ್ಷಿಗಳಲ್ಲಿ ಪ್ರಣಯ ಪ್ರಸಂಗಗಳನ್ನು ನೋಡಿದಾಗಲೆಲ್ಲಾ ಭಾವನಾಲೋಕದಲ್ಲಿ ತಲ್ಲೀನಳಾಗುತಿದ್ದಳು. ತನ್ನ ಮೇಲೆ 'ಇನರಿಗ" ಕಿಷ್ಟು ಪ್ರೇಸರ? ಅಂಥ ಅಪರಾಧನನ್ನಾದರೂ ನಾನು ಮಾಡಿದ್ದೇನು' ಎಂಬದಾಗಿ ಚಿಂತಿಸಿ ಕೊರಗುತಿದ್ದಳು. ಕೊನೆಗೆ ತನ್ನ ವಿಧಿಯನ್ನೇ ಹಳಿದುಕೊಂಡು ಮನೆ ಸೇರುತಿದ್ದಳು.

ಮಿಂಚಿನಂತೆ ಹಿಂದಿನ ದಿನಗಳ ನೆನಪು ಮನದ ಕಣ್ಣುಗಳ ಮುಂದೆ ಹಾದು ಹೋಗುತಿದ್ದವು. ತಂದೆ ತಾಯಿಗಳು ತನ್ನನ್ನು ಗಂಡನೆಂಬ ಈ ಜಂತುವಿನೊಡನೆ ಬೀಳ್ಕೊಟ್ಟಾಗ "ಹೋಗಿ ಬಾ ಮಗಳೆ, ಸುಖಸಂತೋಷದಿಂದಿದ್ದು ಎಂಟು ಮಕ್ಕಳ ತಾಯಿಯಾಗು" ಎಂದು ತಂದೆ ಹರಸಿದ್ದು, ತಾಯಿಯ ಬಾಯಿಂದ ಮಾತುಗಳೇ ಹೊರಡದೆ ಮಗಳನ್ನು ಅಪ್ಪಿಕೊಂಡು ಅಳಹತ್ತಿದ್ದೂ ಆವಳ ಕಣ್ಣಿಗೆ ಕಟ್ಟಿದಂತೆ ತೋರುತಿತ್ತು. ಆ ಮುಗ್ಧೆ ತಾಯಿಯ ಕಣ್ಣೀರಿಂದ ನೀರು ಹರಿದಾಗ ತಂದೆ ಅಪರಾಧಿಯಂತೆ ತಲೆತಗ್ಗಿಸಿದ್ದೂ ಈಗವಳಿಗೆ ಅರ್ಥವಾಗುತಿತ್ತು. ಕಮಲಳು ಸೇರಿದ್ದ ಕೊಳದ ಅಂತರಾಳದಲ್ಲೂ ಕೂಡ ಪ್ರೇಮದ ಹನಿಯಿಲ್ಲದೆ ಬತ್ತಿ ಬರಡಾಗಿತ್ತು ಪತಿಯು ಪರಿಮಳವಿಲ್ಲದ ಪದ್ಮವಾಗಿದ್ದನು. ಕಮಲಳ ಒಳದನಿಯೊಂದು "ನಿನಗಿನ್ನು ಬಿಡುಗಡೆಯಿಲ್ಲ"ವೆಂದು ಹೇಳುತಿತ್ತು. ಪತಿಯು ಸಿರಿವಂತನಾದರೂ ಆವಳಿಗೆ ಸುಖ ಶಾಂತಿ ದೊರೆತ್ತುಳಿಲ್ಲ. ಉಂಡುಟ್ಟು ಸುಖವಾಗಿರುವುದೇ ಮೇಲೆಂದು ತಿಳಿದು ತನ್ನನ್ನೆ ಶೃಂಗರಿಸಿಕೊಳ್ಳುವುದರಲ್ಲಿದ್ದ ಕಮಲಳನ್ನು ನೋಡಿದ ಗಂಡನು ಆವಳ ವಿಷಯದಲ್ಲಿ ಸಂದೇಹಗೊಂಡು ದಂಡಿಸಿ ಇಲ್ಲಸಲ್ಲದ ಮಾತುಗಳನ್ನು ಆಡಿದನು. ಬೆಲೆವೆಣ್ಣುಗಳಂತೆ ಶೃಂಗರಿಸಿಕೊಂಡು ಬೀದಿ ಬೀದಿ ಆಲೆಯಬೇಕೆ? ಎಂದು ಗದ್ದರಿಸಿ ಹಾ....ಗಿತ್ತಿ ಶಬ್ದ ಉಪಯೋಗಿಸುತಿದ್ದನು. ಇದೆಲ್ಲವೂ ಕಮಲಳಿಗೆ ಕರ್ಣಕರ್ಕಷವಾಗಿರುತಿದ್ದರೂ, ಎದುರು ನುಡಿಯುತ್ತಿರಲಿಲ್ಲ. ಶೃಂಗಾರಗಳನ್ನು ಬದಿಗೊತ್ತಿದಳು. ಇದರಿಂದೊಂದು ಹೊಸ ಅಧ್ಯಾಯನೇ ಪ್ರಾರಂಭಿಸುವುದೆಂದು ತಿಳಿದಳು. ಆವಳು ನುಡಿದ ನುಡಿ, ನಡೆದದೆಲ್ಲವೂ ಆತನಿಗೆ ತಪ್ಪಾಗಿ ತೋರುತಿತ್ತು. ಒಮ್ಮೊಮ್ಮೆ ಆಕೆಯ ದುಃಖದ ಕಟ್ಟೆ ಯೊಡೆದು ಕಂಬನಿಯೂಗಿ ಹರಿಯ ತೊಡಗಿ ಶಾಂತಿಗೊಳ್ಳುತಿತ್ತು. ಗಂಡನಿಗೆ ಎಲ್ಲಿಗಾದರೂ ಹೋಗಬೇಕೆಂದಾಗ ಹೆಂಡತಿಯನ್ನು ಮನೆಯೊಳಗಿಟ್ಟು ಬೀಗ ಜಡಿದು ಹೋಗುವಂತಾಯಿತು. ಅದರೊಳಗೆ ಕಮಲಳು ತನ್ನ ತಂದೆ ತಾಯಿಗಳನ್ನು ಶಪಿಸುತ್ತಿದ್ದಳು. ಕಡೆಗೆ ತನ್ನ ಹಣೆಯ ಬರಹವೆಂದು ಸುಮ್ಮನಾಗುತ್ತಿದ್ದಳು. ಗಂಡನೆಂಬ ಗಾಣಿಗನ ಗಾಣದಲ್ಲಿ ಕಮಲಳೆಂಬ ಕಬ್ಬು ಹಿಂಡಿ ಹಿಪ್ಪೆಯಾಗಿ ಭಕ್ತಿಯೆಂಬ ರಸವು ಹೊರ ಬರತೊಡಗುತಿತ್ತು. 'ಪತಿಯೇ ಪ್ರತ್ಯಕ್ಷ ದೇವತಾ' ಎಂಬದನ್ನು ನಂಬಿ ದೇವರನ್ನು ಪ್ರಾರ್ಥಿಸಿ ಸಮೂಧಾನಗೊಳ್ಳುತ್ತಿದ್ದಳು.

ಇಷ್ಟು ಪರಿಶುದ್ಧವಾಗಿದ್ದರೂ ತನ್ನ ಮೇಲೆ ತನ್ನ ಪತಿಯು ಹೊರಿಸುತ್ತಿದ್ದ ಅಪರಾಧಗಳನ್ನು ಆಕೆಯು ತಡೆಯದಾದಳು. ಈಗವಳು ಹದಿನಾರು ಹದಿನೇಳು ವರ್ಷದ ಹರೆಯದ ಹೊಸ ಹುಡುಗಿ. ತುಂಬಾ ಸುಂದರವಾಗಿ ಬೆಳೆದಿದ್ದು ಅಂಗಾಂಗಗಳಲ್ಲಿ ಲಾವಣ್ಯ ಹೊರಸೂಸುತ್ತಿತ್ತು. ಆವಳ ಯೌವನದ ಆಶೆ ಆಕಾಂಕ್ಷೆಗಳೆಲ್ಲವೂ ಹೊರಳುಕಾಡಿನಲ್ಲಿಯ ಕುಸುಮದಂತಾಗಿದ್ದವು. ತಂದೆ ತಾಯಿಗಳು ಸಮೂಜದ ತಿವಿತವನ್ನು ತಪ್ಪಿಸಲೆಂದು ಸೌಂದರ್ಯವತಿಯೂದ ತಮ್ಮ ಮಗಳನ್ನು ಮನೆಯಿಂದ ಮೂರಾಟ ಮಾಡಿರುವರೆಂಬುದನ್ನು ಕಮಲಳು ಈಗ ತಿಳಿದುಕೊಂಡಳು. ಕಮಲಳ ಗಂಡನು ಆಕೆಗೆ ಕೊಡುತ್ತಿದ್ದ ಶಿಕ್ಷೆಯನ್ನು ನೋಡಿ ಸಮೂಜವೂ ನಕ್ಕಿತಲ್ಲದೆ ನರಳಲೂ ಇಲ್ಲ. ನಾಶವಾಗಲೂ ಇಲ್ಲ. ಆದರ ಬದಲು ಒಂದಕ್ಕೆ ಎರಡಾಗಿ ಆವರ ವಿಷಯದಲ್ಲಿ ಕಥೆ ಕಟ್ಟಿ ಗಾಳಿಯಲ್ಲಿ ತೂರಾಡಿಸಿತು. ಆಕೆಯ ಪತಿಯ ಪಾಶವೀತನವನ್ನು ತಡೆಯಲು ಯಾವದೊಂದು ಕಟ್ಟನ್ನು ಆ ಸಮೂಜವು ತಯೂರಿಸಲಿಲ್ಲ. ಒಮ್ಮೊಮ್ಮೆ ಕಮಲಳ ಮನಸ್ಸಿನಲ್ಲೂ ಕೀಳುಭಾವನೆಯು ತಲೆದೋರುತ್ತಿತ್ತು. ಆದರೂ ಪಾತಿವೃತ್ಯಕ್ಕೆ ಚ್ಯುತಿ ಬರಬಾರದೆಂದು ತನ್ನ ಮನವನ್ನು ಅದುಮಿ ಹಿಡಿಯುತ್ತಿದ್ದಳು. ಆವಳೂ ಮನುಷ್ಯಳಲ್ಲವೇ? ಎಲ್ಲರಂತೆಯೇ ಆವಳಿಗೂ ಆಶೆ ಆಕಾಂಕ್ಷೆಗಳಿಲ್ಲವೆ? ಯೌವನ ಸಹಜವಾದ ಹಲವು ಕನಸುಗಳು ಆವಳನ್ನೂ ಕೆಣಕುತ್ತಿದ್ದವು.

ಈಗವಳು ಹುಡುಗಾಟಿಕೆಯ ಹುಡುಗಿಯಾಗಿರಲಿಲ್ಲ. ದಾಂಪತ್ಯ ಜೀವನಕ್ಕೆ ಹಾತೊರೆಯುತ್ತಿದ್ದರೂ ಆಕೆಯ ಹೃದಯದ ಸಂದೇಶ ಆತನ ಹೃದಯಕ್ಕೆ ಮುಟ್ಟಲಿಲ್ಲ. ಮನೆಯ ಸುತ್ತಲಿನ ಗಿಡ ಬಳ್ಳಿಗಳು ದನಕರುಗಳು ಆವಳನ್ನು ನೋಡಿ ಸೊರಗುತ್ತಿದ್ದವಲ್ಲದೆ ನಿಷ್ಕರುಣೆ ಗಂಡನ ಹೃದಯವು ಕರಗುತ್ತಿಲಿಲ್ಲ. ಪ್ರೇಮದ ಪ್ರಳಯವು ಉಂಟಾಗಲಿಲ್ಲ. ಇದ್ದದ್ದು ಮರೆಯೋಣ, ಇಲ್ಲದ್ದು ತೆರೆಯೋಣ. ಹಾಲ್ಜೇನು ಸುರಿಸೋಣ ಎನ್ನುವ ಆಶೆಯೂಗುವುದು. ಆದರೆ ಈ ಹೆಣ್ಣು ಜೀವನಿಗೆ ಹಣೆಯಲ್ಲಿ ಆದಾವುದೂ ಬ್ರಹ್ಮ ಬರೆಯಲಿಲ್ಲ. ಸೌಂದರ್ಯವನ್ನು ಕೆತ್ತುವುದರಲ್ಲಿಯೇ ಇದನ್ನೆಲ್ಲಾ ಬರೆಯಲು ಆತ ಮರೆತ್ತಿದ್ದ. ಆವಳ ಹಣೆಯಲ್ಲಿ ಬರೆದದ್ದು ಬರೇ ಬಡತನ! ಕಷ್ಟ! ದುಃಖ! ಸುಖ ಸಂತೋಷವನ್ನು ಕೊಡದೆ ಆನ್ಯಾಯ ಮಾಡಿ ತನ್ನ ಸೌಂದರ್ಯದ ಕಲಾವೈಶಿಷ್ಟ್ಯವನ್ನು ನಾಶ ಪಡಿಸಿಕೊಂಡ ಆಕೆಯು ತನ್ನ ದುಃಖ ಕಳೆದುಕೊಂಡು ಆವಳು ಹಸಿವು ಕಳೆಯಬೇಕು. ತಾನೇ ಆತ್ಮ ಹಾಡಿಕೊಂಡು ತನ್ನನ್ನು ತಾನೇ ರಮಿಸಬೇಕು. ತನ್ನ ಸೌಂದರ್ಯವನ್ನು ಕನ್ನಡಿಯಲ್ಲಿ ತಾನೇ ನೋಡಿಕೊಂಡು ತಾನೇ ಮುತ್ತಿಡಬೇಕು. ತನ್ನ ದುಃಖವನ್ನು ನೋಡಿಕೊಳ್ಳಲು ನೆರೆಮನೆಗೆ ಹೋಗಲು ಆಸ್ಪದವಿಲ್ಲ. ತಂದೆತಾಯಿಗಳಿಗೆ ಇದಾವುದರ ಅರಿವೂ ಹತ್ತದು. ಗಂಡ ಬಂಡೆ ಕಲ್ಲಿಗಿಂತಲೂ ಕಠಿಣನಾಗಿದ್ದನು.

ಒಂದು ದಿನ ಕಮಲೆಯ ಗಂಡನು ಆವಳನ್ನು ಮನೆಯೊಳಗೆ ಸೇರಿಸಿ ಬೀಗ ಜಡಿದು ಹೋಗಿದ್ದನು. ಆವಳು ತನ್ನ ದುರ್ದೈವಕ್ಕೆ ಹಳಿದುಕೊಂಡು ದೇವರ ಕೋಣೆಗೆ ಬಂದು ಪ್ರಾರ್ಥಿಸಿದಳು. ದೇವರ ಬಿಂಬವನ್ನು ನೋಡಿ 'ತನ್ನ ಕಷಟವನ್ನು ನೋಡಿಕ್ಕಣ್ಣು ತೆರೆಯಬಾರದೆ ಕರುಣಾ ಮೂರ್ತಿ' ಯೆಂದು ಕಂಬನಿಗೆರೆದಳು. ಆ ಮನೆಯೊಳಗೆ ದೇವನಿರನೆಂದು ಆಕೆಗೆ ತಿಳಿಯಿತು. ಕಲ್ಲು ಮೂರ್ತಿಗೆ ಕರುಣೆಬರಲಾರದೆಂದು ನೊಂದ ಹೃದಯ ಬೆಂದನುಡಿಗಳನ್ನಾಡಿತು. ಆಗಲೇ ಕತ್ತಲೆ ಕವಿಯಿತು. ಆವಳ ಬಾಳಿನಲ್ಲೂ ಕತ್ತಲೆ ಕವಿಯುವದಿತ್ತು. 'ಇಲ್ಲಿ ನಿಲ್ಲಬೇಡ ಕಮಲೂ, ಈ ಲೋಕವಲ್ಲಿ ನೀನು ಬಯಸಿದ ಸುಖ ದೊರೆಯದು ಓಡು ಕಮಲೂ, ಆದಷ್ಟು ಬೇಗ ಓಡು. ಈ ನರಕದಲ್ಲಿ ಒಂದು ಕ್ಷಣವೂ ನಿಲ್ಲಬೇಡ, ಹೊರಟು ಹೋಗು' ಎಂದು ಆತ್ಮವಾಣಿ ನುಡಿಯಿತು.

ಕಮಲಳು ತನ್ನ ಗಂಡನು ಮುದುಮೆಯ ಕಾಣಿಕೆಯಾಗಿ ಕೊಟ್ಟಿದ್ದ ವಜ್ರದ ಉಂಗುರವನ್ನೇ ನುಂಗಿಕೊಂಡಳು. ಆಕೆಯ ಗಂಡನು ವೈದ್ಯರಿಗೆ ಲಂಚ ಕೊಟ್ಟು 'ಹೃದಯ ಕ್ರಿಯೆ ನಿಂತು ಮಡಿದಳೆ'ಂದು ಬರೆಸಿ ನಿರಪರಾಧಿಯೆನಿಸಿಕೊಂಡನು. ಆತನ ದುಡ್ಡಿನ ವ್ಯಾಪಾರ ನಡೆಯುತ್ತಲೇ ಇದೆ. ಸಮೂಜವೂ ಹೆಡೆಯೆತ್ತಿ ನಿಂತೇ ಇದೆ.

ಕೊಡ್ಲಿಪೇಟೆಗೆ
'ಕೊಡಗು' ವಿಜೇತರು,
ಶ್ರೀ ಕೆ. ಸಿ. ಪೀತಾಂಬರನವರು

ಬಾಣೆ ಕಂದಾಯ.

[ಲೇ:—ರೈತ]

ಕೊಡಗಿನಲ್ಲಿ, ನಮ್ಮ ಕಾಂಗ್ರೆಸು ಸರಕಾರವು ರೈತರ ಅನುಭವದಲ್ಲಿರುವ ಬಾಣೆ ಜಾಗಕ್ಕೆ ಕಂದಾಯ ಹಾಕಲು ಮಾಡಿದ ತೀರ್ಮಾನದಿಂದ ನಮ್ಮ ಕಾಂಗ್ರೆಸು ಸರಕಾರದ ತತ್ವವೇನೆಂದೇ ತಿಳಿಯಲಸಾಧ್ಯವಾಗಿದೆ.

ವಾಡಿಕೆಯೊಗಿ ಕಾಂಗ್ರೆಸಿಗನೆಂದರೆ ಸತ್ಯವಾದಿ, ತ್ಯಾಗಿ, ಬಡವರ ಮಿತ್ರ. ಆಂಥಾವರಿಂದ ಕೂಡಿದ ಸರಕಾರಕ್ಕಾದರೂ ಬಡವರನ್ನು ಮೇಲಕ್ಕೆತ್ತುವದು, ಬರೇ ಒಂದು ಟೊಳ್ಳಿನ ಮಾತಲ್ಲ. ಅದೊಂದು ಜೀವನದ ತತ್ವ; ಅಲ್ಲ, ಅದಕ್ಕಿಂತಲೂ ಮೇಲು, ಅದೊಂದು Faith. ಹೀಗಿರುವಾಗ, ೩–೪ ವರ್ಷಗಳ ಹಿಂದೆ ಸಮರಿ ಕಂದಾಯದ ಒಂದು ಅಭಿಪ್ರಾಯವು ಬಂದಿದ್ದಾಗ ಇಂದು ಅಧಿಕಾರದಲ್ಲಿರುವ ಕಾಂಗ್ರೆಸಿನವರ ಮಿತ್ರರು ಹೂಡಿದ ಚಳವಳವನ್ನೂ, ಕಳೆದ ಚುನಾವಣೆಗೆ ಮೊದಲು ಬರೇ ಐಶ್ವರ್ಯವಂತರಿಗೆ ಅನ್ವಯಿಸುವ ವ್ಯವಸಾಯ ಆದಾಯ ತೆರಿಗೆಯ ವಿಶಯದಲ್ಲಿ ಇವರ ವರ್ತನೆಯನ್ನೂ ಇಂದು ಬಡವರ ಮೇಲೆ ಇವರು ಹಾಕಲು ಹೊರಟಿರುವ ಬಾಣೆ ಕಂದಾಯವನ್ನೂ, ಕಂದಾಯವಿಲ್ಲದೆ ಅನುಭವದಲ್ಲಿರುವ ಜಹಗೀರು ಭೂಮಿಗಳಿಗೆ ತಮ್ಮ ಆಶೀರ್ವಾದವನ್ನು ಇನ್ನೂ ಕೊಡುತ್ತಿರುವದನ್ನೂ ನೋಡುವಾಗ, ಈ ಸರಕಾರವು ಯಾವುದಾದರು ತತ್ವವನ್ನು ಪರಿಪಾಲಿಸಲಿರುವದೇ ಎಂಬ ಸಂಶಯವು ಯಾರಿಗೂ ಹುಟ್ಟದಿರದು. ಕಾಣುವದನ್ನು ಹೇಳುವದಾದರೆ ಇದರಲ್ಲಿ ತತ್ವವಿಲ್ಲ, ನ್ಯಾಯವಿಲ್ಲ; ಸಂಧರ್ಭಕ್ಕೆ ಸರಿಯಾಗಿ ನಡೆಯುವಂತೆ ತೋರುತ್ತೆ.

"There are usually two ways of doing things; the politically expedient way, or the right way. Some times they do not coincide, but in the long run, the right way is the best"

ಇದು ಒಬ್ಬ ದೊಡ್ಡ ವ್ಯಕ್ತಿಯ ಮಾತು. ಇದನ್ನು ನಮ್ಮ ಸರಕಾರದವರು ಆ ತಿಳುಕೊಳ್ಳಲಿರುವರೇ?

ದೇಶದಲ್ಲಿ ಹೆಚ್ಚು ಕಮ್ಮಿ ಐದು ತರಗತಿಯ ಜನರಿದ್ದಾರೆ. ಕೂಲಿಗಾರರು ಮಜದೂರರು, ರೈತಾಪಿ ಜನರು, ವ್ಯಾಪಾರಿಗಳು, ಕೈಗಾರಿಕೆಯವರು ಮತ್ತು ಸರಕಾರಿ ಮತ್ತಿತರ ಹುದ್ದೆಗಾರರು, ಇವರಿಂದ ಕೂಡಿದ್ದೇ ದೇಶವು. ಇವರಿಂದಲೇ ದೇಶದ ಬೊಕ್ಕಸಕ್ಕೆ ಹಣವು ಬರಬೇಕಿದೆ

ಇವರಲ್ಲಿ ಮೊದಲನೆಯ ಪಂಗಡವನ್ನು ಬಿಡೋಣ, ಐದನೆಯ ಪಂಗಡವನ್ನೂ ಸದ್ಯಕ್ಕೆ ಬಿಡೋಣ ಬಾಕಿಯ ಮೂರು, ರೈತಾಪಿ, ವ್ಯಾಪಾರಿ ಮತ್ತು ಕೈಗಾರಿಕೋದ್ಯಮ ಪಂಗಡದವರು ಪ್ರಾಂತೀಕ ಸರಕಾರದ ಹೊರೆಯನ್ನು ಅವರ ಶಕ್ತಿಗೆ ಮತ್ತು ಸರಕಾರದಿಂದ ಅವರು ಪಡೆಯುವ ಪ್ರಯೋಜನಕ್ಕೆ ಸರಿಯಾಗಿ ಹೊತ್ತಿರುವರೆ?

ಕಾಲೇಜುಗಳು, ಪಟ್ಟಣಗಳಲ್ಲಿ ಹೈಸ್ಕೂಲುಗಳು, ಆಸ್ಪತ್ರೆಗಳು, ಸಿನೇಮಾ, ನಾಟಕಗಳು, ತಾರು ರಸ್ತೆಗಳು, ಪೋಲೀಸು ಬಂದೋಬಸ್ತು ಮತ್ತು ವಿದ್ಯುಚ್ಛಕ್ತಿ ಮುಂತಾದ ಸಲಕರಣೆಗಳು ಪುರವಾಸಿಗಳಾದ ವ್ಯಾಪಾರಿಗಳಿಗೆ ಮತ್ತು ಕೈಗಾರಿಕಾ ವೃತ್ತಿಯವರಿಗೆ. ಇದಕ್ಕೆ ಪ್ರತ್ಯುತ್ತರವಾಗಿ ಇವರು ಸರಕಾರಕ್ಕೆ ಕೊಡುತ್ತಿರುವದು ಸರಕಾರಿ ಉತ್ಪತ್ತಿಯ ಎಷ್ಟಂಶ? ಇವರು ನ್ಯಾಯವಾಗಿಯೂ ಕೊಡಬೇಕಾದದ್ದು ಇವರಿಂದ ಸರಕಾರಕ್ಕೆ ಸಿಕ್ಕುವದಿಲ್ಲವಲ್ಲದೆ, ಇವರ ಸುಖ ಜೀವನಕ್ಕೆ ಗ್ರಾಮವಾಸಿಗಳು ಆದಿಷ್ಟೋ ಹಣವನ್ನು ಆಕ್ಟ್ರಾದಾಯ ಕೊಡುವದು ಸಾಲದೆ ಈಗ ಬಾಣೆಗೂ ಕಂದಾಯ ಕೊಡಬೇಕೆ?

"Incomes must be taxed on the basis of ability to pay", is a fundamental principele of taxation. ಈ ತತ್ವಕ್ಕನುಸಾರವಾಗಿ ರೈತಾಪಿ ಜನರು ಇನ್ನೂ ಕಂದಾವನ್ನು ತೆರಲಿರುವ ಸ್ಥಿತಿಯಲ್ಲಿರುವರೆ?

ಬದಲಾಗಿ ಚಿಕ್ಕ ಭೂಮೂಲಿಕರಿಗೆ ಕಂದಾಯದ ಹೊರೆಯನ್ನು ಕಮ್ಮಿ ಮಾಡಿಯಿ ಮತ್ತಿತರ ಕಂದಾಯ ರೂಪದಲ್ಲಿ ತೆರುವರು.

ಗ್ರಾಮವಾಸಿಯೂದ ರೈತನು ಶಾಲೆ, ಕಾಲೇಜು, ಆಸ್ಪತ್ರೆಗಳಿಗೆ ಅದೆಷ್ಟೊ ಮೈಲು ನಡೆಯಬೇಕು. ಪೋಲೀಸು ಬಂದೊಬಸ್ತು ಇಲ್ಲ, ತಾರು ರಸ್ತೆ, ವಿದ್ಯುಚ್ಛಕ್ತಿ, ಮುಂತಾದುವುಗಳನ್ನು ಸಂತೆಯಲ್ಲಿ ನೋಡಿಕೊಳ್ಳುತ್ತಾನೆ. ಆದರೂ, ಐದು ರೂಪಾಯಿ ಉತ್ಪತ್ತಿ ಇರುವ ರೈತನು ಸರಕಾರದ ಬೊಕ್ಕಸಕ್ಕೆ ಒಂದು ಕಾಸನ್ನಾದರೂ ತೆರುವವನಾಗಿದ್ದಾನೆ. ರೈತನ ಸ್ಥಿತಿಯಾದರೂ ಏನು? ಮೈಗೆ ಸರಿಯಾದ ಬಟ್ಟೆಯಿಲ್ಲ, ಮಕ್ಕಳಿಗೆ ಸರಿಯಾದ ವಿದ್ಯೆಯಿಲ್ಲ, ಆರೋಗ್ಯವಿಲ್ಲ, ಹೊಟ್ಟೆ ತುಂಬ ಅನ್ನವಿಲ್ಲ. ಇಂತಹ ರೈತನು ಹೆಚ್ಚಿನ ದರದ ಭೂಕಂದಾಯ ಕೊಡಬೇಕೆಂದು ಕಾಂಗ್ರೆಸ್ ಸರಕಾರವನ್ನು ಜನರು ನೋಡುತ್ತಿರುವರು. ಪ್ರಪಂಚವೇ ಈ ದಾರಿಯಲ್ಲಿ ನಡೆಯುತ್ತಿದೆ.

"To seek to increase slowly the standard of the less well paid section of the community, by stepping up production and productivity and by some measure of redistribution of wealth thro taxation and the welfare services."

ಈ ದಾರಿಯಲ್ಲಿ ನಡೆಯಬೇಕಾದರೆ, ದೇಶದ ಹೆಮ್ಮೆಯಾಗಿರುವ, ಬೆನ್ನೆಲುಬು ಆಗಿರುವ ರೈತಾಪಿ ವರ್ಗವನ್ನು ಕಾಪಾಡಬೇಕಿದೆ. ದೇಶದ ಏಳಿಗೆಯು, ಸುಂದರವಾದ ಪಟ್ಟಣದಲ್ಲಿಯೂಗಲೀ, ಸಂತುಷ್ಟರಾದ ಪುರನಿವಾಸಿಗಳಲ್ಲಾಗಲೀ, ಯಾ ಕೆಲವು ದೊಡ್ಡ ಸೇತುವೆ, ರಸ್ತೆ ಮುತ್ತಿತರ ಕಟ್ಟಡಗಳಲ್ಲಾಗಲೀ ಇರುವದಿಲ್ಲ. ಬದಲಾಗಿ ದೇಶದ ಏಳಿಗೆಯು, ಸರಕಾರದ ಕೀರ್ತಿಯು ದೇಶದಲ್ಲಿ ಸುಭಿಕ್ಷರಾಗಿ ಜೀವಿಸುವ ರೈತಾಪಿ ಜನರಲ್ಲಿದೆ. ಈ ರೈತಾಪಿ ಜನರನ್ನು ಹಾಳುಮಾಡಿದ್ದಲ್ಲಿ ಸರಕಾರವು ಕೂಡ ಅದರೊಂದಿಗೆ ಹಾಳಾಗುವದರಲ್ಲಿ ಸಂದೇಹವಿಲ್ಲ.

ಸರಕಾರಕ್ಕೆ ಹಣದ ಅವಶ್ಯಕತೆಯು ಇರಬಹುದು. ಆದರೆ ಈ ಹಣವು ತೆರಲಾರದ ರೈತನಿಂದ ಬರಬೇಕಾದುದಲ್ಲ. ಕೊಡಗಿನಲ್ಲಿರುವಂತಹ ಚಿಕ್ಕ ಪಟ್ಟಣಗಳ ಮಟ್ಟಿಗೆ, ಪುರಗಳ ಸಂಪೂರ್ಣ ಆಕ್ಟ್ರಾಯಿ ಉತ್ಪತ್ತಿಯು ಪುರಗಳಿಗೆ ಆಗುವದರಲ್ಲಿಯೂವ ನ್ಯಾಯವೂ ಇಲ್ಲ; ಎಂದರೆ ದುಡಿಯುವ ಗ್ರಾಮವಾಸಿಗಳು ಪುರನಿವಾಸಿಗಳ ಸುಖ ಜೀವನಕ್ಕೋಸ್ಕರವಾಗಿ ಆಕ್ಟ್ರಾಯಿಯನ್ನು ಯಾತಕ್ಕೆ ಕೊಡಬೇಕು? ಈ ವಿಷಯವಾಗಿ, ಸರಕಾರದವರು ಒಂದು ಕಮಿಟಿಯನ್ನು ಏರ್ಪಡಿಸಿ, ಮುನಿಸಿಪಾಲಿಟಿಗಳ ಎಷ್ಟರಷ್ಟು ಉತ್ಪತ್ತಿಯು ಪುರನಿವಾಸಿಗಳೇ ತೆರುತ್ತಿರುವರೆಂದು ಕಂಡುಹಿಡಿದು ಅಷ್ಟನ್ನು ಮಾತ್ರ ಮುನಿಸಿಪಾಲಿಟಿಗಳಿಗೆ ಬಿಟ್ಟು ಬಾಕಿಯನ್ನು ಸರಕಾರಕ್ಕೆ ತೆಗೆದು ಕೊಳ್ಳುವದು ನ್ಯಾಯವು.

ಎರಡನೆಯದಾಗಿ ವಾಣಿಜ್ಯ ವರ್ಗದವರು ಅವರ ನ್ಯಾಯವಾದ ಹೊರೆಯನ್ನು ಹೊತ್ತಿರುವದಿಲ್ಲ. ಬರೇ ಐದು ರೂಪಾಯಿಯ ಉತ್ಪತ್ತಿಯನ್ನು ದುಡಿದು ಸಂಪಾದಿಸಿದ ರೈತನು ಸರಕಾರಕ್ಕೆ ಕಂದಾಯ ಕೊಡುವಾಗ, ಅದೆಷ್ಟೊ ಚಿಕ್ಕ ವ್ಯಾಪಾರಿಗಳು, ದೊಡ್ಡ ವ್ಯಾಪಾರಿಗಳು, ಲಕ್ಷಗಟ್ಟಿ ವ್ಯಾಪಾರ ಮಾಡುವ ಕಿತ್ತಳೆ, ಮೆಣಸು ಏಲಕ್ಕಿ, ಕಾಫಿ ಮುತ್ತು ಮರ್ತ ವ್ಯಾಪಾರಿಗಳು ಸರಕಾರಕ್ಕೆ ಏನು ಕೊಡುತ್ತಿರುವರು?. ಹೊಟೇಲು ಮಡಗಲು ಲೈಸೆನ್ಸು ಬೇಕು. ಆಗ ಬೇರೆ ವ್ಯಾಪಾರಗಳನ್ನು ಲೈಸೆನ್ಸಿನಿಂದ ಯಾಕೆ ವಿನಾಯಿಸಬೇಕು? ಈ ವ್ಯಾಪಾರ ಜನಾಂಗದ ಸಂರಕ್ಷಣೆಗೂ, ಮುತ್ತಿತರ ಅನೇಕ ಅನುಕೂಲತೆಗಳಿಗೂ ಸರಕಾರವು ಅದೆಷ್ಟು ಹಣ ಖರ್ಚು ಮಾಡುತ್ತೆ. ಅವನ್ನು ಆ ವರ್ಗದವರು ಕೊಡಬೇಡವೆ?

ಸರಕಾರವು ಹೆಚ್ಚೆಚ್ಚಾಗಿ ಹಣವನ್ನು ಗಿಸಿಕೊಂಡು ಅವನ್ನು ದೇಶದ ಏಳಿಗೆಗಾಗಿ ಖರ್ಚುಮಾಡಬೇಕು. ಆದರೆ, ಈ ಹಣ ಸೇರಿಸುವದರಲ್ಲಿ ಬಡವನ ಮಣ್ಣಿನ ಮಡಿಕೆಯಲ್ಲಿರುವ ತಂಗಳು ಅನ್ನಕ್ಕೆ ಕೈ ಹಾಕುವದರ ಬದಲು, ಚಿನ್ನದ ಪದಕವನ್ನು ಧರಿಸಿರುವ ಶ್ರೀಮಂತನನ್ನು ಓರೆಗಣ್ಣಿನಿಂದ ನೋಡುವದು ಉತ್ತಮ.

—

ಶನಿವಾರಸಂತೆಗೆ
'ಕೊಡಗು' ವಿಜೆಂಟರು,
ಶ್ರೀ ಎಸ್. ಎನ್. ಸಿದ್ದಪ್ಪನವರು

—

ಗಾಂಧಿ ವಿಚಾರದೋಹನ.

ನಾನು 'ಮಹಾತ್ಮ'ನಲ್ಲ.

ಸತ್ಯದ ಉಪಾಸಕನು ಅಹಂಕಾರಿಯಾಗಿ ನಾನೇ ತಾನೆಂದು ಇರಲು ಸಾಧ್ಯವಿಲ್ಲ. ಇನ್ನೊಬ್ಬರಿಗಾಗಿ ತನ್ನ ಪ್ರಾಣವನ್ನು ಧಾರೆ ಎರೆಯಲು ಸಿದ್ಧನಿರುವವನಿಗೆ ಪ್ರಪಂಚದಲ್ಲಿ ತನಗಾಗಿ ಒಂದು ಸ್ಥಳ ಪ್ರತ್ಯೇಕ ನಿಕ್ಷೇಪಿಸಿಕೊಳ್ಳುವದು ಸಾಧ್ಯವಿಲ್ಲ.

ನಮ್ಮ ರಾಜಕೀಯ, ಧರ್ಮ, ಅರ್ಥ ಶಾಸ್ತ್ರಗಳಿಂದ 'ನಾನು' ಮತ್ತು 'ನನ್ನದು' ಎಂಬುದನ್ನು ಕಿತ್ತೆಸೆಯ ಬಲ್ಲೆವಾದರೆ ನಾವು ಭೂಲೋಕದಲ್ಲಿ ಆ ಕ್ಷಣ ಸ್ವರ್ಗವನ್ನು ನೆಲೆಸಲು ಶಕ್ತರಾಗುವೆವು.

ನಾನು ನನ್ನ ತಪ್ಪುಗಳನ್ನು ಒಪ್ಪಿಕೊಳ್ಳುವದರಿಂದ ಆ ತಪ್ಪುಗಳ ಭಾರವು ನನ್ನ ಹೆಗಲೇರಿ ನಿಲ್ಲದು. ನಾನು ದೇವರೆಡೆಗೆ ನಾನು ನಂಬಿರುವಂತೆ ಪ್ರಯಾಣ ಬೆಳೆಸುತ್ತಿರುವದಾದರೆ ಹಾಗೆ ಭಾರವನ್ನು ತ್ಯಜಿಸುವದೇ ನನಗೆ ಸುಖಕರ.

ನನಗೆ ವಿಶ್ವವಿದ್ಯಾಲಯದ ಪ್ರಶಸ್ತಿ ಗೌರವಗಳಿಲ್ಲ. ನನ್ನ ಮಿತಿ ನನಗೆ ಗೊತ್ತಿದೆ. ನನ್ನ ಹೈಸ್ಕೂಲು ಜೀವನವೂ ಕೂಡ ಆಕರ್ಶಕವಾಗಿರಲಿಲ್ಲ. ಏನೋ ಪ್ರಯಾಸದಿಂದ ಪರೀಕ್ಷೆಗಳಲ್ಲಿ ಪಾಸಾಗುತ್ತಿದ್ದೆ ಅಷ್ಟೆ. ಯಾವುದರಲ್ಲೂ ನಾನು ಖ್ಯಾತಿ ಪಡೆದವನಲ್ಲ. ನಾನು ಸಾಮಾನ್ಯನಾದ ಒಬ್ಬ ವ್ಯಕ್ತಿ.

ನನ್ನನ್ನು ಜನರು 'ಮಹಾತ್ಮಾ' ಎನ್ನುತ್ತಾರೆ. ಆದರೆ ನಾನು ಮಹಾತ್ಮನೆಂದು ನನಗನಿಸುವದಿಲ್ಲ. ಆದರೆ ದೇವರ ಅತೀ ನಿಕೃಷ್ಟ ಜೀವಿಗಳಲ್ಲಿ ನಾನೊಬ್ಬನೆಂಬುದು ನನಗೆ ತಿಳಿದಿದೆ.

ಜನರು ನನ್ನನ್ನು 'ಮಹಾತ್ಮಾ' ಎನ್ನುವದು ನನ್ನ ರಾಜಕೀಯಕ್ಕಾಗಿ, ನನ್ನ ಅಲ್ಪ ಸೇವೆಗಾಗಿ. ಆದರೆ ಅವು ನನ್ನೆ ಅಮೂಲ್ಯ ವಸ್ತುಗಳಲ್ಲ. ಸತ್ಯ, ಅಹಿಂಸೆ ಬ್ರಹ್ಮಚರ್ಯಗಳಲ್ಲಿರುವ ವಿಶ್ವಾಸವೇ ನನ್ನ ಜೀವನದ ಜೀವಾಳ.

—ಎಂ. ಕೆ. ಗಾಂಧಿ.

ಉಪಾಧ್ಯಾಯರು ರಾಷ್ಟ್ರ ನಿರ್ಮಾಪಕರು

ದೆಹಲಿ ಪಟ್ಟಣದ ಶ್ರೀ ರಾಮಕೃಷ್ಣಾ ಯದ ಅಧ್ಯಕ್ಷರಾದ ಸ್ವಾಮಿ ಶ್ರೀ ರಂಗ ಥಾನಂದರನರು ಕಳೆದ ಗುರುವಾರ ತಃಕಾಲ ವಿದ್ಯಾನಗರದ ಶಿಕ್ಷಣ ಕೇಂ ಸಂಸ್ಕೃತಿ ಶಾಖೆಯ ಈ ವರ್ಷದ ಆ ಭ ಭಾಷಣ ಮಾಡಿದರು. "ಇದುವರೆ ಉಪಾಧ್ಯಾಯರು ಬರೇ ಶಿಕ್ಷಕರಾಗಿ ರು. ಶಾಲೆಗಳು ವಿಷಯಗ್ರಹಣಕ್ಕೆ ತ್ರ ತಕ್ಕ ಕಾರ್ಖಾನೆಗಳಾಗಿ ಜೈತನ್ಯವಿ ಜಡವಸ್ತುಗಳಾಗಿದ್ದವು. ಯಾವ ಹ ಪುರುಷನೂ ಈ ಶಾಲೆಗಳಲ್ಲಿ ಸ್ಫೂ ಪಡೆಯಲು ಸಾಧ್ಯವಾಗಿರಲಿಲ್ಲ. ಉ ಧ್ಯಾಯರ ವ್ಯಕ್ತಿತ್ವ ದ್ವಿಮುಖವಾದ ಆತನು ಶಿಕ್ಷಕನೂ, ಗುರುವೂ ಆ ೇಕು. ಬರೇ ಸಂಬಳಕ್ಕಾಗಿ ಕೆಲಸ ಡುವನನ ದೃಷ್ಟಿ ಸಂಕುಚಿತ, ಮನಶ್ಯ ಯೂ ಆಲ್ಲ. ಉಪಾಧ್ಯಾಯರು ರಾ ನರ್ಮಾಪಕರು. ಸಮಾಜದ ಮಿಕ್ಕೆಲ್ಲ ಸ್ತೋಗದವರಿಗಿಂತ ಅಧ್ಯಾಪಕರ ವ್ಯಕ್ತಿ ತ ಪರಿಣಾಮ ಸಮಾಜದ ಮೇಲೆ ವಿಶೇ ಾಗಿ ಬೀಳುತ್ತದೆ.

ಸ್ವತಂತ್ರವಾಗಿರುವ ನಮ್ಮ ನಾಡು ನ್ನತ ಪ್ರಗತಿಯನ್ನು ಹೊಂದಲು ತಾ ಕಾರಣರೆಂಬ ಭಾವನೆಯಿಂದ ಉಪಾ ಯರು ಕೆಲಸ ಮಾಡಬೇಕು. ಆಗ ರ ಆತ್ಮಶಕ್ತಿ ವಿಶೇಷವಾಗಿ ವಿದ್ಯಾರ್ಥಿ ಲ್ಲಿ ಜೈತನ್ಯವನ್ನೂ, ಸ್ಫೂರ್ತಿಯನ್ನೂ ಬಲ್ಲುದು. ಆಗಲೇ ಅವರು ವಿದ್ಯಾ ಯ ಸಕಲ ಶೃಂಖಲೆಗಳನ್ನು ಬಿಡಿಸು ಗುರುಗಳಾಗುವರು ಇಂತಹ ಶಿಕ್ಷಣ ನ್ನ ಕೊಡಲು ತಕ್ಕ ಯೋಗ್ಯತೆಯನ್ನು ಯಲು ಈ ಶಿಕ್ಷಣ ಕೇಂದ್ರವೇರ್ಪ ತಿ. ಇಂತಹ ಕೇಂದ್ರಗಳು ಹೇರಳವಾ ೀಶದಲ್ಲಿ ಏರ್ಪಟ್ಟು ವಿಸ್ತಾರವಾಗು ುವ ವಿದ್ಯಾ ಕ್ಷೇತ್ರದಲ್ಲಿ ಕೆಲಸ ಮಾಡ ಅರ್ಹರಾದ ಅಧ್ಯಾಪಕರ ಪಡೆಗಳನ್ನು ೂರಿಸಬೇಕು. ಜೀವನಕ್ಕೆ ಉಪಯು ಾದ ಎಲ್ಲಾ ವಿಚಾರಗಳಲ್ಲೂ ಈ ದ್ರದಲ್ಲಿ ಶಿಕ್ಷಣ ದೊರೆಯುತ್ತದೆ. ನನವೇ ಶಿಕ್ಷಣ ಎಂಬ ತತ್ವದ ಆಚರಣೆ ಂದ ಹೆಳ್ಳಿಗಳಿಗೆ ನಾಯಕರಾಗಿರಲು ೀಗ್ಯರಾದ ವ್ಯಕ್ತಿಗಳಾಗಿ ನೀವು ಈ ದ್ರದಿಂದ ಹೋಗುತ್ತೀರೆಂದು ನನ್ನ ಪೂ ನಂಬಿಕೆಯಿದೆ. ಇಲ್ಲಿ ನೀವಿರುವ ತ್ತ ತಿಂಗಳಲ್ಲಿ ನಿಮ್ಮ ವ್ಯಕ್ತಿತ್ವವನ್ನು ಸಗೊಳಿಸುವ ಮಾರ್ಗವನ್ನರಿತು, ಂದೆ ತಪ್ಪದೆ ಶ್ರದ್ಧೆಯಿಂದ, ಸಾಧನೆ ಂದ ಆತ್ಮೋದ್ಧಾರವನ್ನೂ, ದೇಶೋ ್ಧಾರವನ್ನೂ ಮಾಡುವಿರೆಂದು ಹಾರೈಸು ತ್ತೇನೆ" ಎಂದು ಹೇಳಿ ಸ್ವಾಮಿಗಳವರು ಉಪಾಧ್ಯಾಯ ವಿದ್ಯಾರ್ಥಿಗಳನ್ನೂ ಶಿಕ್ಷಕ ವೃಂದವನ್ನೂ ಆಶೀರ್ವದಿಸಿದರು.

ಶ್ರೀ ಶಂಕರಲಾಲರ ನಿಧನ

ಫಾರ್ವರ್ಡ್ ಬ್ಲಾಕ್ ಮುಖಂಡರಾ ಗಿ ಮುಂಬೈಯಲ್ಲಿ ಷೈಲಿನಲ್ಲಿ ಶರ್ತಾಚು ದ್ಯಬೋಸರೊತನಿನ್ನ ಲಾಲಾ ಶಂಕರಲಾ ಲ್‌ರವರು ಈ ತಾ. ೪ರಲ್ಲಿ ದೆಹಲಿಯಲ್ಲಿ ಮೃತಪಟ್ಟರು.

ನೂತನ ಧರ್ಮವೊಂದು ಅಗತ್ಯವಾಗಿದೆ.

ಆಧುನಿಕ ಜಗತ್ತಿಗೆ ಆಧುನಿಕ ಧರ್ಮ ವೊಂದರ ಅವಶ್ಯಕತೆ ಇದೆಯೆಂದು ಭಾರತ ದ ಉಪರಾಷ್ಟ್ರಪತಿ ಡಾ ಸರ್ವಪಲ್ಲಿ ರಾಧಾ ಕೃಷ್ಣನ್ ಅಭಿಪ್ರಾಯಪಡುತ್ತಾರೆ

"ವಿಶ್ವದ ಸಮಸ್ಯೆಗಳಿಗೆ ಇರುವ ಏಕ ಮಾತ್ರ ಉತ್ತರವೆಂದರೆ ವಿಶ್ವಧರ್ಮ. ಇ ಭ್ರಾತೃತ್ವದ ಮೂಲಕ ಸಾಧಿಸಲ್ಪಡಬೇಕಲ್ಲದೆ ಸಂಯೋಜನೆಯ ಮೂಲಕವಲ್ಲ" ಎಂ ಬುದಾಗಿ ಈ ವಾರ ಪ್ರಸಿದ್ಧ ತತ್ವಜ್ಞಾ ನಿ ರಾಜಕಾರಣಿ ರಾಧಾಕೃಷ್ಣನ್ ಚಿಕಾ ಗೋದಲ್ಲಿ ಹೇಳಿದರು.

ಮಂಗಳವಾರ ರಾತ್ರಿ ಚಿಕಾಗೋ ವಿ ಶ್ವವಿದ್ಯಾಲಯದಲ್ಲೂ, ಬುಧವಾರ ಇಲ್ಲಿ ನಾಯ್ಸ್ ವಿಶ್ವವಿದ್ಯಾಲಯದಲ್ಲೂ ಡಾ. ರಾಧಾಕೃಷ್ಣನ್ ಭಾಷಣ ಮಾಡಿದರು.

ವಿಶ್ವದ ಪ್ರಮುಖ ಸಂಘಟಿತ ಧರ್ಮಗ ಳು ಈಗಿನಂತೆಯೇ ಮುಂದುವರಿದರೆ ಅವು ಗಳಿಂದ ಜಗತ್ತಿನ ಐಕ್ಯ ಸಾಧಿಸಲ್ಪಡಲಾರ ದೆಂದೂ ಅದು ಸಾಧ್ಯವಾಗಬೇಕಾದರೆ ಸ ತ್ಯ, ಪ್ರೇಮಗಳ ತಳಹದಿಯಿರುವ ಸಂಪ್ರ ದಾಯ ಅವಶ್ಯವೆಂದೂ ಡಾ. ರಾಧಾಕೃ ಷ್ಣನ್ ಹೇಳಿದರು.

---

೮೨ ಸಾವಿರ ಜರ್ಮನ್ ಯುದ್ಧ ಕೈದಿಗಳು

ಎರಡನೇ ಮಹಾಯುದ್ಧ ಮುಗಿದು ಎಂಟು ವರ್ಷಗಳಾಗಿ ಹೋಗಿದ್ದರೂ ಸೋ ವಿಯಟ್ ರಷ್ಯ ಇನ್ನೂ ೮೨ ಸಾವಿರ ಮಂದಿ ಜರ್ಮನ್ ಯುದ್ಧ ಕೈದಿಗಳನ್ನು ಯೂರೋಪಿನಲ್ಲಿ ಬಂಧನದಲ್ಲಿಟ್ಟಿದೆಯೆಂ ದು ಜರ್ಮನ್ ಜೂನಿಯರ್ ರೆಡ್‌ಕ್ರಾಸಿನ ರಾಷ್ಟ್ರೀಯ ಡೈರೆಕ್ಟರ್ ಗೊಯೆಟ್ಜ್ ಫೆಹ್ರ ರವರು ಇತ್ತೀಚೆಗೆ ಅಮೇರಿಕನ್ ರೆಡ್ ಕ್ರಾಸಿಗೆ ತಿಳಿಸಿದರು.

ಜರ್ಮನ್ ರೆಡ್‌ಕ್ರಾಸ್ ಸೊಸೈಟಿ ಈ ಕೈದಿಗಳಿಗೆ ಆಹಾರ ಪಾರ್ಸಲುಗಳನ್ನು ಕಳಿಸುತ್ತಿದೆಯೆಂದೂ, ಅನೇಕ ಪಾರ್ಸಲ್ಲು ಗಳು ಸ್ವೀಕೃತವಾದ ದಾಖಲೆಗಳು ಬರುತ್ತಿ ವೆಯೆಂದೂ ಅವರು ನುಡಿದರು.

ರಷ್ಯಾದಲ್ಲಿ ಪ್ರಗತಿ ಏಕೆ?

ರಷ್ಯಾ ದೇಶದಲ್ಲಿ ಹೆಚ್ಚು ಹೆಚ್ಚು ಉ ತ್ಪನ್ನ ಮಾಡುವವರಿಗೂ, ನಿರ್ದಿಷ್ಟ ಅವಧಿಗೆ ಮುನ್ನವೇ ನಾನಾ ಅಭಿವೃದ್ಧಿ ಯೋಜನೆ ಗಳನ್ನು ಕಾರ್ಯಗತ ಮಾಡುತ್ತಿರುವುದಕೂ ಕಾರಣವೆಂದರೆ ಎಲ್ಲರಲ್ಲೂ ಇರುವ ಸಹ ಕಾರ ಬುದ್ಧಿ ಎಂಬುದಾಗಿ ಇತ್ತೀಚೆಗೆ ತಾ ನೇ ರಷ್ಯಾ ಮತ್ತು ಚೀನಾ ದೇಶಗಳಲ್ಲಿ ಪ್ರವಾಸ ಮಾಡಿ ಬಂದ ಕಮ್ಯೂನಿಸ್ಟ್ ಪಾ ರ್ಲಿಮೆಂಟರಿ ಗುಂಪಿನ ಮುಖಂಡ ಶ್ರೀ ಎ. ಕೆ. ಗೋಪಾಲನ್ ಹೇಳಿದ್ದಾರೆ.

ರಷ್ಯಾದಲ್ಲಿ ಕಾರ್ಮಿಕರಿಗೂ ಕಾರ್ಖಾನೆ ಗಳಿಗೂ, ಸಾಮೂಹಿಕ ಫಾರ್ಮ್‌ಗಳಿಗೂ ಪರಸ್ಪರ ಸಹಕಾರ ಮನೋಭಾವವು ತುಂ ಬಾ ಚೆನ್ನಾಗಿದೆಯೆಂದೂ, ಆದ್ದರಿಂದಲೇ ಈ ಪ್ರಗತಿಗೆ ಕಾರಣವಾಗಿದೆಯೆಂದೂ ಶ್ರೀ ಗೋಪಾಲನ್ ನುಡಿದರು.

ರಷ್ಯಾ ಸರಕಾರವೂ ಜನತೆಯೂ ಪ್ರವೀಣ ಕಾರ್ಮಿಕನನ್ನು ಗೌರವಿಸುವುದೆಂ ದೂ ಪೂಜ್ಯಭಾವನೆ ತೋರಿಸುವುದೆಂದೂ ಆತನಿಗೆ ಎಲ್ಲಾ ಬಗೆಯ ಉತ್ತೇಜನವನ್ನೂ ಕೊಡುವುದೆಂದೂ ಆತನ ಬುದ್ಧಿಶಕ್ತಿಯ ನ್ನು ವೃತ್ತಿಯ ಪ್ರಗತಿಗಾಗಿ ಉಪಯೋಗಿ ಸಿಕೊಳ್ಳುವುದೆಂದೂ ಶ್ರೀ ಗೋಪಾಲನ್ ತಿಳಿಸಿದರು. ಅಲ್ಲಿನ ಜನತೆಯು ತೋರಿ ಸುತ್ತಿರುವ ಉತ್ಸಾಹವನ್ನು ಗಮನಿಸಿದರೆ ಆ ಜನರಿಗೆ ತನ್ನ ಸರಕಾರದಲ್ಲೂ ತಮ್ಮ ಭವಿಷ್ಯದಲ್ಲೂ ಇರುವ ಅಪಾರ ಶ್ರದ್ಧೆ ಗೋಚರವಾಗುವುದೆಂದೂ ಶ್ರೀ ಗೋಪಾಲ ನ್ ಹೇಳಿದರು.

ರಷ್ಯಾದಲ್ಲಿ ವೈದ್ಯಕೀಯ ವ್ಯವಸ್ಥೆಗಳ ಗುರಿಯು ಕಾಯಿಲೆಯನ್ನು ವಾಸಿ ಮಾಡು ವುದಷ್ಟೇ ಅಲ್ಲ. ಕಾಯಿಲೆಗಳು ಬಾರದಂ ತೆಯೇ ತಡೆಗಟ್ಟುವುದಾಗಿದೆ ಎಂದು ಗೋ ಪಾಲನ್ ತಿಳಿಸಿದರು. ರಾಷ್ಟ್ರದ ನರ್ಸರಿ ಗಳಿಗೂ ಕಿಂಡರ್‌ಗಾರ್ಟನ್ ಕೇಂದ್ರಗಳಲ್ಲೂ ಮಕ್ಕಳ ಆಹಾರ, ವಿದ್ಯಾಭ್ಯಾಸ ಮತ್ತು ಆರೋಗ್ಯದ ಬಗ್ಗೆ ವಿಶೇಷ ಎಚ್ಚರಿಕೆ ವಹಿ ಸುವುದೆಂದೂ ಶ್ರೀ ಗೋಪಾಲನ್ ನುಡಿ ದರು.

ರಷ್ಯಾದಲ್ಲಿ ವ್ಯವಸಾಯ ಕೆಲಸವನ್ನೆಲ್ಲಾ ಸಂಪೂರ್ಣವಾಗಿ ಯಾಂತ್ರೀಕರಣ ಮಾಡಲಾಗಿದೆಯೆಂದೂ, ಆದರೆ ಚೀನಾದ ಲ್ಲಿನ್ನೂ ಆ ಕೆಲಸ ಆಗಬೇಕಾಗಿದೆಯೆಂದೂ ಶ್ರೀ ಗೋಪಾಲನ್ ಹೇಳಿದರು. ರಷ್ಯಾ ದಲ್ಲಿ ಭಾರಿ ಮತ್ತು ಸಣ್ಣ ಪುಟ್ಟ ಕೈಗಾರಿ ಕೆಗಳೆಲ್ಲಾ ರಾಷ್ಟ್ರದ ಸ್ವತ್ತಾಗಿವೆಯೆಂದೂ ಆದರೆ ಚೀನಾದಲ್ಲಿ ಸದ್ಯಕ್ಕೆ ಭಾರೀ ಕೈಗಾ ರಿಕೆಗಳನ್ನು ಮಾತ್ರ ರಾಷ್ಟ್ರೀಕರಣ ಮಾಡ ಲಾಗಿದೆಯೆಂದೂ ಶ್ರೀ ಗೋಪಾಲನ್ ತಿಳಿಸಿ ದರು.

Government of India. Ministry of Labour.

TRAINING SCHEME FOR ADULT CIVILIANS.

ADMISSION FOR VOCATIONAL TRADES.

1. Industrial Training Institute, Kakinada. (Men and Women.)
   (1) Manufacture of footwear (2) Cutting and Tailoring (3) Hand weaving etc.
2. Industrial Training Centre for Women, Andhra Mahila Sabha, Mylapore, Madras (Women only).
   (1) Bleaching, Dyeing and Printing.
3. Industrial Training Centre for Women Sterlinig Road, Madras. (Women only)
   (1) Cutting and Tailoring. (2) Hand Weaving etc. (3) knitting.
4. Industrial Training Institute, Virajpet. (Men & Women)
   (1) Cutting and Tailoring (2) Cane and Willow work.
5. Industrial Training Institute, Jalahalli. (Men & Women).
   (1) Bleaching, Dyeing & Printing. (2) Cutting and Tailoring.
6. Industrial Training Centre, School of Arts, Trivandrum. (Men & Women)
   (1) Fretwork and wooden toys (2) Wood Turning and Lacquering (3) Clay Modelling & Plaster of Paris Moulding.

The next session of Training will commence from 1st week of August. Both Men and Women are entitled to admission. This year Defence Ministry has offered Rs. 25/- per month to Ex-servicemen and Women who undertake the training These awards are besides the 50% scholarships awarded by the Ministry of Labour to deserving candidates. Application forms and other particulars can be had direct from the Principals of the Centres/Institutes concerned on requisition, with a Stamped and self addressed envelope. Further particulars can be had by contacting the nearest Employment Exchange.

Last date for the receipt by the Principal of the Institute concerned of applications duly filled in by the applicant is 20th July 1953 Candidates called for interview will have to attend at their own expense.

ಬಾಣೆ ಕಂದಾಯದ ಭಾರ.

ಲೇ:—ಶ್ರೀ. ಎ. ಕೆ. ಎನ್. ಮೈಸೂರು.

ಇಂಡಿಯಾ ದೇಶಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಕಾಂಗ್ರೆಸ್ ಆಡಳಿತವು ಅನೇಕ ವಿಧದ ಸಲಕರಣೆ, ರಿಯಾಯಿತಿಗಳನ್ನು ಒಪ್ಪಿಗಿಸಿಕೊಡಬಹುದೆಂದು ಜನರೆಲ್ಲರೂ ಆಶೆಯಿಂದ ಯೋಚಿಸಿದ್ದಾಯಿತು. ಆದರೆ ಆ ಮೇ ಮೂದರಿಯ ಅಸುಧಾರಿತ ಸಲಕರಣೆಗಳು ಈಗೀಗ ನಮ್ಮ ಕೊಡಗಿನ ಕಾಂಗ್ರೆಸ್ ಆಡಳಿತದಲ್ಲಿ ಕಾಣುತ್ತಿವೆ. ಸರಕಾರದ ಕಾರ್ಯಕಲಾಪಗಳನ್ನು ಆಡಂಬರದಲ್ಲಿ ನಡೆಸಲಿಕ್ಕಾಗಿ ಅಸಾಧ್ಯವಾದ ತಲೆ ಹೊರೆಗಳನ್ನು ಜನರ ಮೇಲೆ ಹೊರಿಸುತ್ತಿದ್ದಾರೆ. ಅದೇ ಈ ಬಾಣೆ ಕಂದಾಯ. ಕ್ರಮೇಣ ಮೂರಾಟ ತೆರಿಗೆ, ಕುಡಿತ ಕಂದಾಯ ಮತ್ತೂ ಸಾಲದಿದ್ದರೆ ತಲೆ ಕುದಾಯ ಸಹ ಹಾಕಬಹುದೇನೋ?

ಗಳಲ್ ನೇ ಇಸವಿ ತನಕ ನಿಜವಾಗಿಯೂ ಸರಿಯಾದ ಮಳೆ ಬೆಳೆ, ಪದಾರ್ಥಗಳ ಧಾರಣೆವಾಸಿ ಸರಿಯಾಗಿದ್ದ ಕಾಲದಲ್ಲಿ ಅನೇಕ ಜನರಿಗೆ ತಮ್ಮ ಜೀವನ ಸಾಗಿಸಲು ಸಾಧ್ಯವಿಲ್ಲದೆ ತಮ್ಮ ಭೂಮಿ ಕಂದಾಯ ಕಟ್ಟದೆ ಎಷ್ಟೋ ಜನರು ತಮ್ಮ ಆಸ್ತಿ ಸಹ ಕಳಕೊಂಡದಿದೆ. ಈಗಲಂತೂ ಮಳೆ ಬೆಳೆ ಸರಿ ಇಲ್ಲದೆ ಬರಗಾಲದ ಕಷ್ಟದಲ್ಲಿ ಪ್ರಾಣಿ ಜೀವನ ಸಾಗಿಸತಕ್ಕ ಸಮಯದಲ್ಲಿ ಹೆಣಕ್ಕೆ ತಲೆಗಂದಾಯ ವಿಧಿಸಿದ ಮೂದರಿಯಲ್ಲಿ ಬಾಣೆ ಕಂದಾಯ ಬರುವ ಸೂಚನೆ ಇದೆ. ಈಗಲೇ ತಡವಾಗಿ ಪ್ರಾರಂಭಿಸಿದ ಮಳೆಗಾಳಿಯಿಂದ ಅದೆಷ್ಟೋ ನಷ್ಟ ಕಷ್ಟ ಸಂಭವಿಸಿ ದುಃಖಿಸುವ ವೇಳೆಯಲ್ಲಿ ಇದು ಸರಿಯಲ್ಲ. ಬಡವರ ಕಷ್ಟದ ಸಮಯವು ಲಾಭ ಬಡಕರ ಸಂಪಾದನೆಯ ಕಾಲ. ಆ ಕಾಲದಲ್ಲೇ ಆಸ್ತಿ, ಆಭರಣಸಂಗ್ರಹಿಸಲು ಬಂಡವಾಳದಾರರು ಸಮಯ ಕಾದಿರುವರು. ಇಂದು ಬಂಡವಾಳದಾರರು ಕಾಂಗ್ರೆಸಿನ ಹಿತಸಾಧಕರು. ಅವರಿಗೆ ಈ ಸರಕಾರ ತಕ್ಕದಾದ ಸಹಾಯ ಸಲಕರಣೆ ನೀಡುತ್ತಿದೆ. ಮಧ್ಯಮ ತರಗತಿಯ ಬಡ ಜನರ ಸ್ಥಿತಿ ಮಾತ್ರ ಹಾಳಾಗುತ್ತಿದೆ. ಅವರಿಗೆ ಈ ಬಾಣೆ ಕಂದಾಯ ಹೊರಲಾರದ ಹೊರೆ.

ಈ ಕಾಂಗ್ರೆಸ್ ಆಡಳಿತದಲ್ಲಿ ವರ್ಷ ವರ್ಷ ದೇಶದಲ್ಲಿ ಉತ್ಪತ್ತಿಗಿಂತ ಖರ್ಚು ಹೆಚ್ಚಾಗುತ್ತಿರುವ ಕಾರಣ ಈ ತರಹದ ಒಣ ಕಂದಾಯದಿಂದ ಭರ್ತಿ ಮಾಡುವ ಸುಧಾರಿತ ಕ್ರಮಗಳನ್ನು ಅನುಸರಿಸಬೇಕಾಗಿ ಬಂದಿದೆ. ಆದರೆ ಇದು ಆಸ್ಪತ್ರೆಗೆ ಬಂದ ರೋಗಿಯು ಶರೀರದಿಂದ ಅಲ್ಪ ಸ್ವಲ್ಪ ಇರತಕ್ಕ ರಕ್ತವನ್ನು ಬ್ಲಡ್ ಬೇಂಕಿನಲ್ಲಿ ಶೇಖರಿಸಿ ಆರಮನೆಯಲ್ಲಿ ನಲಿದಾಡುವ ಯೌವನಸ್ತರಿಗೆ ಕೊಡುವಂತಾಗಬಾರದು. ಓಟು ಸಿಕ್ಕಿ ಅಧಿಕಾರಕ್ಕೆ ಬರುವ ತನಕ ಆಡಿದ ಆ ರಾಮರಾಜ್ಯಭಾರ ಕ್ರಮದ ಗಿತೋಪದೇಶದ ಪ್ರತಿಫಲವೇ ಇದು? ನಿಜವಾಗಿಯೂ ಮಹಾತ್ಮ ಗಾಂಧೀಜಿಯ ಕಾಂಗ್ರೆಸಿನ ತತ್ವಕ್ಕನುಗುಣವಾಗಿ ಸತ್ಯ, ಧರ್ಮ ಮತ್ತು ನ್ಯಾಯದಿಂದ ಅಧಿಕಾರ ನಡೆಸತಕ್ಕ ಸರಕಾರವಾದರೆ ಬಡವರಿಗೆ ತೊಂದರೆ ತರುವ ಕಂದಾಯ ಹಾಕುತ್ತಿತ್ತಿಲ್ಲ. ಅಂಥಾ ಸಹೃದಯ ಗಾಂಧೀವಾದಿ ಸರಕಾರವಾಗಿದ್ದರೆ ದೇಶದಲ್ಲಿ ಈಗಿರುವಂಥಾ ಪಕ್ಷ ಪಾರ್ಟಿಗಳೂ ಇರುತ್ತಿರಲಿಲ್ಲ. ಸರಿಯಾದ ಹಿತಸರಕಾರವಾದರೆ ತಮ್ಮ ಆಡಳಿತ ವರ್ಗದಲ್ಲಿರತಕ್ಕ ಲೋಪದೋಷಗಳನ್ನು ಸರಿಪಡಿಸಿಕೊಂಡು ಅನಾವಶ್ಯದ ಖರ್ಚು, ಹೆಚ್ಚಿನ ವೇತನ, ಅನಶ್ಯವಿಲ್ಲದ ಅಧಿಕಾರಿಗಳನ್ನೆಲ್ಲಾ ತೆಗೆದುಹಾಕಿ ಉಳಿತಾಯ ಮೂಡಿ ಬಡ್ಜೆಟ್ ಸರಿತೂಗಿಸಬಹುದು. ಉದಾಹರಣೆಗಾಗಿ ಈ ಪ್ರಜಾಸರಕಾರದ ಚುನಾಯಿತ ಮಂತ್ರಿವರ್ಯರ ವೇತನ ಗಾಂಧಿ ಅನುಯಾಯಿಗಳಿಗೆ ಸಲ್ಲತಕ್ಕದ್ದೇ? ಅದರೊಂದಿಗೆ ಪ್ರಯಾಣ ಭತ್ಯ, ವಸತಿ, ಮುಂತಾದ ಖರ್ಚು ಮೊದಲಾದುವು. ಇವುಗಳಲ್ಲಿ ಖೋತೆಮೂಡಿ ಮೂದರಿ ಸುಧಾರಣೆಯ ಆಡಳಿತ ತರಬಹುದಿತ್ತು. ಅಲ್ಲದೆ ಶಾಸನ ಸಭೆಯ ಚುನಾಯಿತ ಮೆಂಬರುಗಳಿಗೆಲ್ಲಾ ಬ್ರಿಟಿಷರ ಆಡಳಿತದಲ್ಲಿ ತಿಂಗಳ ಸಂಬಳವಿಲ್ಲದಿದ್ದರೂ 'ರಾಮರಾಜ್ಯ'ದಲ್ಲಿ ಇದೆ. ಅಂದು ಏಲ್ಲರೂ ಧರ್ಮಾರ್ಥಕೆಲಸ ಮಾಡುವವರಾಗಿದ್ದರೆ ಇಂದು ಹಣಕ್ಕಾಗಿ! ಹೀಗೆ ಇನ್ನೂ ಅನೇಕ ವಿಧದ ಅನಾವಶ್ಯದ ಖರ್ಚಿನ ಬಾಬುಗಳಿವೆ. ಈ ಚುನಾಯಿತ ಮೆಂಬರುಗಳಲ್ಲಾಗಲೀ, ಜವಾಬ್ದಾರಿ ಹೊತ್ತವರಲ್ಲಾಗಲೀ ಚುನಾಯಿತರಾಗುವುದಕ್ಕೆ ಮೊದಲು ಈ ಆಡಂಭರ ಜೀವನ, ಅಧಿಕಾರದರ್ಪ ಇತ್ತೇ ಎಂಬದನ್ನು ಅವರೇ ಯೋಚಿಸಿಕೊಳ್ಳಲಿ. ಜನಸಾಮಾನ್ಯರಾಗಿದ್ದ ಇವರೆಲ್ಲಾ ಚುನಾಯಿತರಾದ ಗೌರವಕ್ಕೆ ತೃಪ್ತಿಪಟ್ಟು ಸರಳ ಜೀವನದ ದೇಶಸೇವೆ ಸಲ್ಲಿಸಿದ್ದರೆ ನಾಡಿಗೂ ಹಿತವಿತ್ತು. ಇವರಿಗೂ ಕೀರ್ತಿ ಇತ್ತು. ಕಾಂಗ್ರೆಸಿನ ಆಡಳಿತದಲ್ಲಿ ಅರಸರನ್ನು ಸಾಮಾನ್ಯರ ಅಂತಸ್ಥಿಗೆ ಇಳಿಸಿರುವಾಗ ಅಧಿಕಾರಕ್ಕೇರಿದ ಸಾಮಾನ್ಯರು ಅರಸರಂತೆ ಜೀವನ ನಡೆಸಲು ಯತ್ನಿಸಲೇಕೆ? ಸೃಷ್ಟಿಕರ್ತನು ಪ್ರಪಂಚದ ಎಲ್ಲಾ ಜೀವ ಜಂತುಗಳಿಗೆ ಅವಶ್ಯವಾದ ಗಾಳಿ ಬೆಳಕು, ನೀರು ಮುಂತಾದ ವಸ್ತುವನ್ನು ಬೇಧವಿಲ್ಲದೆ ಎಲ್ಲರಿಗೂ ಒಂದೇಯೂಗಿ ಉಂಟುಮಾಡಿದ್ದಾನೆ. ಆಡಳಿತ ವರ್ಗಕ್ಕೆ, ಬಂಡವಾಳ ಶಾಹಿಗಳಿಗೆ ಬೇರೆ ಮಾಡಿಲ್ಲ. ಹಾಗಿರುವಾಗ ಮಂತ್ರಿಗಳು ಅಧಿಕಾರಿಗಳು ಇತರರು ಹೆಚ್ಚಿನ ಅಂತಸ್ತನ್ನು ಬಯಸಲೇಕೆ? ಸರ್ವರನ್ನು ಒಂದೇ ದೃಷ್ಟಿಯಿಂದ ನೋಡಬೇಕಾದ ಸರಕಾರದಲ್ಲಿ ಜಾಗಿರು ಭೂಮಿಗಳ ಬಾಣೆ ಜಾಗಕ್ಕೆ ಕಂದಾಯವಿಲ್ಲದಿರಲು ಕಾರಣವೇನು? ಈ ಭೂಮಾಲಿಕರು ಕಾಂಗ್ರೆಸ್ ಸರಕಾರದ ಹಿತ ಸಾಧಕರಿರಬಹುದೇ? ಉಳಿದವರು ಅಹಿತ ಸಾಧಕರೇ?

ಕೊಡಗಿನಲ್ಲಿ ಈ ತನಕ ಇಲ್ಲದ ಈ ತರದ ಇಲ್ಲದ ಸಲ್ಲದ ಈ ತಲೆ ಬಾರ ಕಂದಾಯ ನಾಡಿನ ಜನರಿಗೆ ಹೊರಿಸುವದೇ ನಮ್ಮ ಒಟಿಗೆ ಪ್ರತಿಫಲವೇ? ಅನ್ಯವಸ್ಥೆಯ ಆಡಳಿತವಾದಕೆ ಜನರ ಪ್ರೀತಿ ವಿಶ್ವಾಸ ಬೇಗ ಕಳೆದು ಹೋಗುವದು. ಜನರೆಲ್ಲರೂ ಪತ್ರಿಕೆಗಳಲ್ಲಿ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ. ಇದೇ ಸುಸಮಯವೆಂದು ತಮ್ಮ ದರ್ಪದ ಆಡಳಿತದಿಂದ ಎದುರಾಳಿಗಳ ಬಲ ಗುರಿದು ತಮ್ಮದೇ ಆದ ಬಂಡವಾಳ ಶಾಹಿ ಪಾರ್ಟಿಯ ಹಿತಸಾಧಿಸಲಿರುವ ಅಭಿಪ್ರಾಯಕ್ಕೆ ವಿರೋಧ ಮೂಡಲೇಬೇಕು. ಇದಕ್ಕೋಸ್ಕರ ನಾವೆಲ್ಲ ಉದಾಸಿನ ಮೂಡದೆ ಆರಂಭ ಕಾಲವಾದರೂ ಸಹ ಒಂದೆರಡು ದಿನಗಳ ಮಟ್ಟಿಗೆ ಪ್ರಯತ್ನ ಪಟ್ಟು ಊರು ನಾಡಿನ ಜನರೆಲ್ಲ ಸೇರಿ ತಕ್ಕುದಾದ ತಮ್ಮ ತಮ್ಮ ಹವಾಲುಗಳನ್ನು ಘನ ಸರಕಾರದಲ್ಲಿ ಮುಂದಿಟ್ಟು ಈ ರೀತಿಯ ಒಂದು ಕಂದಾಯ ಜಾರಿಯಲ್ಲಿ ಬಾರದಂತೆ ನೋಡುವದು ಕರ್ತವ್ಯವಾಗಿದೆ.

ಬಾಣೆ ಕಂದಾಯ ಕೂಡದು

ಸಾರ್ವಜನಿಕ ಸಭೆಗಳು

ಕಡಂಗ ಮುರೂರು

ತಾರೀಕು ೨೯ರಲ್ಲಿ ಕಡಂಗ ಮುರೂರು ಗ್ರಾಮಸ್ಥರು ಊರು ಮಂದಿನಲ್ಲಿ ಶ್ರೀ ಪಳಂಗಂಡ ನಂಜಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗು ಸರಕಾರವು ರೈತರ ಮೇಲೆ ಬಾಣೆ ಕಂದಾಯ ವಿಧಿಸುವುದನ್ನು ಸಭೆಯು ನಿಷೇಧಿಸುವುದೆಂದೂ ಈ ತರದ ಕಂದಾಯ ಹಾಕಕೂಡದೆಂದು ಸರಕಾರವನ್ನು ಕೇಳಿಕೊಳ್ಳುವಂತೆಯೂ ಠರಾವುಗಳಾದವು.

ಬೆಳ್ಳೂರು

ತಾ. ೩೦ರಲ್ಲಿ ಶ್ರೀಮಂಗಲ ನಾಡಿನ ಬೆಳ್ಳೂರು ಗ್ರಾಮಸ್ಥರು ಶ್ರೀ ಬಿ. ಐ. ಅಚ್ಚಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಭೂಮಿ ಕಂದಾಯವನ್ನೇ ಕಟ್ಟಲು ಅಶಕ್ತನಾಗಿರುವ ರೈತನ ಮೇಲೆ ಬಾಣೆ ಕಂದಾಯವನ್ನೂ ಹಾಕಿರುವುದು ತೀರಾ ವ್ಯಸನಕರವೆಂದೂ, ಸರಕಾರವು ಈ ಕಂದಾಯ ಹಾಕಕೂಡದೆಂದೂ ಠರಾವು ಮೂಡಲಾಯಿತು.

ಕಂಡಂಗಾಲ

ತಾ. ೨೮ರಲ್ಲಿ ಕಂಡಂಗಾಲ, ರುದ್ರಗುಪ್ಪೆ ಗ್ರಾಮಸ್ಥರು ಶ್ರೀ ಮೂಂಗೆರ ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈಗ ಸೂಚಿತವಾಗಿರುವ ಏಕರೆಗೆ ನಾಲ್ಕಾಣೆ ದರದ ಬಾಣೆ ಕಂದಾಯ ಹಾಕಕೂಡದೆಂದು ಸರಕಾರವನ್ನು ಕೇಳಿಕೊಳ್ಳುವ ಠರಾವು ಪಾಸಾಯಿತು.

ನೆಹರೂರವರ ತೂಕ

೧೪೦ ರಾತ್ಲು.

ಲಂಡನ್‌ನಿಂದ ಭಾರತಕ್ಕೆ ಮೆರಳುವ ಕಾಲದಲ್ಲಿ ಭಾರತ ಪ್ರಧಾನ. ನೆಹರೂರವರು ಮುಂಬಾಯಿಯ ಸಾಂತಾಕ್ರೂಜ್ ವಿಮಾನ ನಿಲ್ದಾಣದಲ್ಲಿ ತಂಗಿದಾಗ ತೂಕ ತೋರಿಸುವ ಯಂತ್ರದ ಮೇಲೊಮ್ಮೆ ನಿಂತಿದ್ದರು. ಯಂತ್ರದ ಮುಳ್ಳು ೧೪೦ ರಾತ್ಲು ತೋರಿಸುವುದನ್ನು ಬಳಿಯಲ್ಲೇ ನಿಂತಿದ್ದ ಮುಂಬಾಯಿಯ ಮುಖ್ಯಾಮಾತ್ಯ ಶ್ರೀ. ಮೊರಾರ್ಜಿ ದೇಸಾಯಿಯವರು ಕೆಂಡರು. ಆ ಮೇಲೆ ಸ್ವತಹ ಮೊರಾರ್ಜಿಯವರೇ ಯಂತ್ರದ ಮೇಲೆ ನಿಂತಾಗ ಮುಳ್ಳು ೧೫೮ ರಾತ್ಲು ತೋರಿಸಿತು. ತೂಕ ನೋಡುವ ಈ ವಿನೋದವನ್ನು ಮೊದಲು ಹೂಡಿದವರು ಮುಂಬಾಯಿಯ ಗವರ್ನರ್ ಮಾನ್ಯ ಜಿ. ಎಸ್. ಬಾಜಪೇಯರವರು. ಬೀಗ ಹಾಕಿದ್ದ ಯಂತ್ರದ ಬೀಗ ತೆಗೆದು ವೊಪಲು ಅವರು ತಮ್ಮ ತೂಕ ಪರೀಕ್ಷಿಸಿದರು. ಅದು ೧೪೦ ರಾತ್ಲುಗಳಷ್ಟಿತ್ತು. ಯೂನಿಯನ್ ಕೆಬಿನೆಟ್ ಸೆಕ್ರೆಟರಿ ಶ್ರೀ. ವೈ. ಎನ್. ಸುಕ್ಟಂಕರ್‌ರವರು ಯಂತ್ರದ ಮೇಲೆ ನಿಂತಾಗ ಮುಳ್ಳು ೨೧೦ ರಾತ್ಲಿನ ಗುರುತು ದಾಟಿತ್ತು.

ಪಾಕಿಸ್ಥಾನಕ್ಕೆ ಜಾತ್ಯಾತೀತ ಮಧ್ಯವರ್ತಿ ಘಟನೆ.

ಲಂಡನ್ ಸಮ್ಮೇಳನದಿಂದ ಕರಾಚಿಗೆ ಮರಳಿದ ಪಾಕಿಸ್ತಾನ ಪ್ರಧಾನ ಮಿ. ಮಹಮ್ಮದ ಅಲಿಯವರು ಪಾಕಿಸ್ತಾನದಲ್ಲಿ ಶೀಘ್ರ ಗಣರಾಜ್ಯ ರಚಿಸುವ ಕಾರ್ಯದಲ್ಲಿ ಮಗ್ನರಾಗಿದ್ದಾರೆ. ಕರಾಚಿಯಲ್ಲಿ ಬಂದಿಳಿದ ೧೨ ತಾಸುಗಳೊಳಗೆ, ಕಾನೂನು ಮಂತ್ರಿ ಮಿ. ಎ. ಕೆ. ಬ್ರೋಹಿರವರನ್ನು ಕರೆಸಿ ಅವರೊಡನೆ ಮಧ್ಯವರ್ತಿ ರಾಜ್ಯಾಂಗ ಘಟನೆಯನ್ನು ತಯ್ಯಾರಿಸುವುದರ ಕುರಿತು ಸಮಾಲೋಚನೆ ನಡೆಸಿದರು. ಆ ಮೇಲೆ ಪಾಕಿಸ್ತಾನದ ಗವರ್ನರರನ್ನು ಕಂಡು ಅವರೊಡನೆಯೂ ತಾತ್ಕಾಲಿಕ ಘಟನೆಯ ಕುರಿತು ಚರ್ಚಿಸಿದರು. ಮುಖ್ಯವಾಗಿ ಪಾಕಿಸ್ತಾನದ ಈಗಿನ ಘಟನೆಯಲ್ಲಿ ಈ ಎರಡು ಬದಲಾವಣೆಗಳು ಸದ್ಯದಲ್ಲೇ ಜಾರಿಗೆ ಬರಲಿವೆ. ೧, ನ್ಯಾಯವಿಧಾಯಕ ಸಭೆಗಳ ಮೇಲೆ ಮುಲ್ಲಾರವರ ಮಂಡಲವೆಂಬುದು ಪ್ರತ್ಯೇಕ ಇರಲಾರದು. ೨ ಪಾಕಿಸ್ತಾನ ಸಂಸ್ಥಾನದ ಮುಖ್ಯಾಧಿಕಾರಿ ಮುಸ್ಲೀಮನಾಗಿರತಕ್ಕದ್ದು ಎಂಬ ಶರ್ತ ತೆಗೆದು ಹಾಕಲಾಗುವುದು. ಈಗಿನ ಯೋಜನೆಯಂತೆ ಕಾರ್ಯಕ್ರಮ ಶೀಘ್ರಗತಿಯಲ್ಲಿ ಮುಂದುವರಿದರೆ ಪಾಕಿಸ್ತಾನದಲ್ಲಿ ಗಣರಾಜ್ಯದ ಉದಯವು ಬರುವ ಸ್ವಾತಂತ್ರ್ಯ ದಿನದಂದು (ಆಗಸ್ಟ್ ೧೫) ಆಗಬಹುದೆಂದು ನಿರೀಕ್ಷಿಸಲಾಗಿದೆ.

ಕರ್ನಾಟಕ ಪ್ರಾಂತಕ್ಕಾಗಿ ಸತ್ಯಾಗ್ರಹ

ಮೈಸೂರು ಮತ್ತು ಕರ್ನಾಟಕದ ಪ್ರಮುಖ ಕಾಂಗ್ರೆಸ್ ಮುಖಂಡರು ಇತ್ತೀಚೆಗೆ ಬೆಂಗಳೂರಿನ 'ಕ್ರಿಸೆಂಟ್ ಹೌಸ್' ದಲ್ಲಿ ಶ್ರೀ. ಕೆ. ಆರ್. ಕಾರಂತ ಅವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಕರ್ನಾಟಕ ಪ್ರಾಂತ ನಿರ್ಮಾಣದ ಬಗ್ಗೆ ಕೇಂದ್ರ ಸರ್ಕಾರವು ತನ್ನ ಈಗಿನ ಧೋರಣೆಯನ್ನು ಬದಲಾಯಿಸದಿದ್ದರೆ ಸತ್ಯಾಗ್ರಹ ಹೂಡುವುದೆಂದು ನಿರ್ಣಯಕ್ಕೆ ಬಂದಿರುವರು. ಈ ತಿಂಗಳ ಅಂತ್ಯದಲ್ಲಿ ಸತ್ಯಾಗ್ರಹ ಕಾರ್ಯಕ್ರಮವನ್ನು ಆರಂಭಿಸುವುದೆಂದು ತಾತ್ಕಾಲಿಕವಾಗಿ ನಿರ್ಣಯಿಸಿಯೂ ಆಗಿದೆ. ಈ ಬಗ್ಗೆ ಅವಶ್ಯವಿರುವ ಕಾರ್ಯಕ್ರಮಗಳನ್ನು ನಿರ್ಣಯಿಸುವಲ್ಲಿ ಕ್ರಿಯಾಸಮಿತಿಯು ಶೀಘ್ರ ಹುಬ್ಬಳ್ಳಿಯಲ್ಲಿ ಸಭೆ ಸೇರಲಿದೆ.

ಕೊ ಡ ಗು

ತಾರೀಕು ೧೦ ಜುಲೈ ೧೯೫೩ನೇ ಶುಕ್ರವಾರ

ಸ ರ ಕಾ ರಿ ಉ ದ್ಯೋ ಗ ಸ್ಥ ರು .

ಅಖಿಲ ಭಾರತ ಕಾಂಗ್ರೆಸಿನ ಕಾರ್ಯದರ್ಶಿಯವರಾದ ಶ್ರೀ ಎಸ್. ಎನ್. ಜಗ ರವಾಲರವರು ಒಂದು ಲೇಖನವನ್ನು ಬರೆಯುತ್ತಾ ಸರಕಾರಿ ಅಧಿಕಾರಿಗಳ ದೃಷ್ಟಿ, ಅವರ ಕೆಲಸ ಕಾರ್ಯಗಳ ಪುನರ್ಘಟನೆ ಹೇಗಾಗಬೇಕೆಂಬುದನ್ನು ಸೂಚಿಸಿರುವರು. ಬ್ರಿಟಿಷರ ಆಡಳಿತ ನಡೆಯುತ್ತಿದ್ದ ಕಾಲಕ್ಕೆ ಸರಕಾರಿ ಕೆಲಸಗಾರರಿಗೆ ಇದ್ದ ಕೆಲಸ ಕಾರ್ಯಗಳೆಂದರೆ ಕೇವಲ ಕಂದಾಯ ವಸೂಲ್ಮಾಡುವದು ಮತ್ತು ದೇಶದಲ್ಲಿ ಶಿಸ್ತು ನ್ಯಾಯಗಳನ್ನು ಪರಿಪಾಲಿಸುವದಾಗಿತ್ತು. ಆದ್ದರಿಂದ ಅಂದು ಸರಕಾರಿ ನೌಕರರೆಂದರೆ ಅಧಿಕಾರ ಚಲಾಯಿಸಿ, ಜನರನ್ನು ಗದರಿಸಿ, ವಿರೋಧವನ್ನು ಬಗ್ಗುಬಡಿಯುವವರ ಗುಂಪಾಗಿತ್ತು. ಅಂದಿನ ಕಾಲಕ್ಕೆ ಅತೀ ನಿಕೃಷ್ಟ ಸರಕಾರಿ ನೌಕರನೂ ಕೂಡ ಸರಕಾರದ ದೃಷ್ಟಿಯಲ್ಲಿ ಅತ್ಯುಚ್ಚ ನಾಗರಿಕನಿಗಿಂಥಾ ಮಿಗಿಲೆಂದಿತ್ತು. ಇಂಥಾ ಸರಕಾರಿ ಉದ್ಯೋಗಿಗಳೆಂದರೆ ತನಗೆ ವಿರೋಧವಿರುವ ಪ್ರತ್ಯೇಕ ಪಂಗಡ, ಸರಕಾರವೆಂದರೆ ತಮಗೆ ಸಂಬಂಧವಿಲ್ಲದ ಒಂದು ಸಂಸ್ಥೆ ಎಂಬ ಭಾವನೆ ಜನತೆಯಲ್ಲಿ ಮೂಡಿ ಸರಕಾರಕ್ಕೂ ಜನತೆಗೂ ಸಂಬಂಧ ತಪ್ಪಿಹೋಗಿತ್ತು. ಪರಿಣಾಮವಾಗಿ ಸರಕಾರವು ಹೇಳಿದುದನ್ನು ಮಾಡಿದುದನ್ನು ವಿರೋಧಿಸುವದೇ ತಮ್ಮ ಕರ್ತವ್ಯವೆಂದು ಜನತೆ ಭಾವಿಸಿತ್ತು.

ಈಗ ಹಿಂದೂದೇಶಕ್ಕೆ ಸ್ವರಾಜ್ಯದೊರೆತು ಆರು ವರ್ಷಗಳಾದರೂ ಕೂಡ ಇಂದಿನದು ಜನತಾ ಸರಕಾರವೆಂದರೂ ಕೂಡ ಬ್ರಿಟಿಷ್ ಕಾಲದ ಆ ಮನೋವೃತ್ತಿಯೇ ಇಂದಿನ ಹಲವು ಅಧಿಕಾರಿಗಳಲ್ಲಿಪ್ಪುದು ಜನತೆಯ ಮತ್ತು ಸರಕಾರದ ಸಂಬಂಧ ಇರಬೇಕಿರುವಷ್ಟು ಅನ್ಯೋನ್ಯವಾಗಿರುವದಿಲ್ಲ. ಈ ವಿಚಾರವಾಗಿ ತಾರೀಕು ೭ರಲ್ಲಿ ಆಗ್ರಾದಲ್ಲಿ ನಡೆದ ಅಖಿಲ ಭಾರತ ಕಾಂಗ್ರೆಸಿನ ಸಭೆಯಲ್ಲಿ ತಮ್ಮೊಂದು ಠರಾವನ್ನು ಮಂಡಿಸುತ್ತಾ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಗಳು ಈ ರೀತಿ ಹೇಳಿರುವರು. "ಸರಕಾರಿ ನೌಕರರು ತಮ್ಮ ಕೆಲಸ ಹಾಗೂ ತಮ್ಮ ದೇಶದಲ್ಲಿ ತಮಗಿರುವ ಜವಾಬ್ದಾರಿಯ ಬಗ್ಗೆ ತಮ್ಮ ದೃಷ್ಟಿಯನ್ನು ಬದಲಾಯಿಸಬೇಕು. ಕೆಲವು ಸರಕಾರಿ ನೌಕರರು ಈಗಿನ ಪರಿವರ್ತಿತ ಸನ್ನಿವೇಶಕ್ಕೆ ಸರಿಯಾಗಿ ಹೊಂದಿಕೊಂಡಿರುವರಾದರೂ ಹಲವರು ತಮ್ಮ ದೃಷ್ಟಿಯನ್ನು ಬದಲಾಯಿಸದೆ ಹಳೇ ಕಾಲದ ರೀತಿಯಲ್ಲಿಯೇ ಅಧಿಕಾರ ನಡೆಸುತ್ತಿರುವರು" ಶಾಸ್ತ್ರಿಗಳ ಈ ಮಾತು ಅಕ್ಷರಶಃ ನಿಜವಾದುದು. ಅದು ಕೊಡಗಿನಲ್ಲೇ ಇರಲೀ ಯಾ ಹೊರಸಾಂತ್ಯಗಳಲ್ಲೆ ಇರಲೀ ಸರಕಾರಿ ನೌಕರರಲ್ಲಿ ಹಲವರು ತಾವು ಅಧಿಕಾರ ನಡೆಸಲಿರುವೆನೆಂಬ ದರ್ಪದಲ್ಲೇ ಇಂದೂ ಇದ್ದಾರೆ. ಜನತೆಯ ನಂಜನ್ನುಣ್ಣುತ್ತಿರುವನೆಂಬ ಭಾವನೆ ಬಂದಿರುವದಿಲ್ಲ. ಈ ಭಾವನೆ ಬಾರದೆ ಸರಕಾರವು ಜನಾನುರಾಗಿಯಾಗಲಾರದು.

ಮತ್ತೆ ಯೋಗ್ಯ ಆಡಳಿತ ನಿರ್ವಹಣೆಗೆ ಇರುವ ದೊಡ್ಡ ಎಡರನ್ನು ಅಗರ್ವಾಲಾರು ಎತ್ತಿ ಹೇಳಿರುವರು. ಆಡಳಿತ ಅಧಿಕಾರ ವಹಿಸಿದ ರಾಜಕೀಯ ಪಕ್ಷದ ಮುಂದಾಳುಗಳು ಆಡಳಿತದಲ್ಲಿ ಆಗಾಗ್ಗೆ ಮಾಡುವ ಹಸ್ತಕ್ಷೇಪ. ರಾಜಕೀಯ ಮುಂದಾಳುಗಳು ತಮ್ಮವರು ಮಂತ್ರಿಗಳಾಗಿರುವರು, ಅಧಿಕಾರದಲ್ಲಿರುವರೆಂದು ಆಡಳಿತದಲ್ಲಿ ಕೈ ಹಾಕಿ ಸರಕಾರಿ ಉದ್ಯೋಗಿಯು ನ್ಯಾಯ ಮತ್ತು ದಕ್ಷ ರೀತಿಯಿಂದ ತನ್ನ ಜವಾಬ್ದಾರಿ ನಿರ್ವಹಿಸುವವನನ್ನು ದುಃಸ್ಸಾಧ್ಯವಾಗಿ ಮಾಡುತ್ತಾರೆ. ಇವರ ಅನುಭವ ಪ್ರತಿ ಆಡಳಿತದಲ್ಲಿಯೂ ಕಂಡು ಬರುತ್ತಿದೆ. ಈ ರೀತಿ ಹೊರಗಿನ ಶಕ್ತಿಗಳು ಆಡಳಿತದಲ್ಲಿ ಕೈಹಾಕುವುದು ಅಧಿಕಾರಿಗಳ ನೈತಿಕ ಶಿಥಿಲತೆಗೂ, ಕರ್ತವ್ಯ ನ್ಯೂನತೆಗೂ ಕಾರಣಗಳಾಗಿವೆ. ಇವನ್ನು ಪರಿಹರಿಸಲು ರಾಜಕೀಯ ಮುಂದಾಳುಗಳೂ ತಮ್ಮ ಜವಾಬ್ದಾರಿಯನ್ನರಿತು ವರ್ತಿಸಬೇಕು. ಹಾಗಾದರೆ ಮಾತ್ರ ಆಡಳಿತವು ಜನರಿಗೆ ಹಿತಕರವಾಗಿ, ಜನಾನುರಾಗಿಯಾಗುವುದು.

ವ ರ್ತ ಮಾ ನ .

ತಾ. ೪-೭-೫೩ನೇ ಶನಿವಾರ ಸೋಮವಾರಪೇಟೆ ಪ್ರೌಢಶಾಲೆಯಲ್ಲಿ ನೂತನ ಮತದಾನ ಪದ್ಧತಿಯಂತೆ ಹರಗದ ಯಂ. ತಮ್ಮಯ್ಯನವರನ್ನು ಶಾಲಾ ನಾಯಕನಾಗಿಯೂ, ಎ. ಸಿ. ಬಸಪ್ಪನವರನ್ನು ಉಪ ಶಾಲಾ ನಾಯಕನಾಗಿಯೂ, ಮಿಸ್. ನೆರವಂಡ ಕೆ. ವೀರ ಇವರನ್ನು ಶಾರದ ಸಮೂಜದ ಸೆಕ್ರೆಟರಿಯೂಗಿಯೂ, ಬಿ. ಎಸ್. ಲಕ್ಷ್ಮಮ್ಮಯ್ಯನವರನ್ನು ಕ್ರೀಡಾರಂಗದ ನಾಯಕನಾಗಿಯೂ ಮತ್ತು ಕೆ. ಕನ್ನಂಬ ಮ್ಮನವರನ್ನು ಹುಡುಗಿಯರ ಕ್ರೀಡಾರಂಗದನಾಯಕಿಯೂಗಿಯೂ ಮತ್ತು ಹೈಯರ್ ಎಲಿಮೆಂಟರಿ ಶಾಲೆಗೆ ಬಿ. ಪಿ. ನಾರಾಯಣನವರನ್ನು ಶಾರದ ಸಮೂಜದ ಸೆಕ್ರೆಟರಿಯೂಗಿಯೂ ಆರಿಸಲಾಯಿತು.

ಮಂಗಳೂರಿನಲ್ಲಿ ಸೀನಿಯರ್ ಇಂಟರಿನಲ್ಲಿ ಕಲಿಯುತ್ತಿದ್ದ ಮಡಿಕೇರಿ ತಾಳತಮನೆ ರಘುನಾಥರೈಯವರ ಪ್ರಥಮ ಪುತ್ರ ಜಾನುರಾಜ ರೈಯವರು ಇಂಡಿಯನ್ ನೇವಿಗೆ ಟ್ರೈನಿಂಗಿಗೆ ಹೋಗಿರುವರು. ಮುಂದಿನ ನವಂಬರಿನಲ್ಲಿ ಹೆಚ್ಚಿನ ಟ್ರೈನಿಂಗಿಗೆ ಇಂಗ್ಲೆಂಡಿನ "ಡೆವನ್‌ಶಯರ್"ಗೆ ಕಳುಹಲ್ಪಡುವರು

ಕೊಡಗು ಕರ್ನಾಟಕ ಸಂಘದ ವಾರ್ಷಿಕ ಮಹಾ ಸಭೆಯು ಜುಲೈ ೫ ರಂದು ಮಡಿಕೇರಿಯಲ್ಲಿ ಶ್ರೀ ಬಿ. ಎಸ್. ಕುಶಾಲಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀಯುತರು ಬರಲು ತಡವಾದುದರಿಂದ ಶ್ರೀ ಸಿ. ಎಂ. ರಾಮರಾಯರು ತಾತ್ಕಾಲಿಕವಾಗಿ ಅಧ್ಯಕ್ಷತೆ ವಹಿಸಿದ್ದರು. ಮುಂದಿನ ವರ್ಷದಲ್ಲಿ ಕಾರ್ಯ ನಿರ್ವಹಿಸಲು ಇವರುಗಳನ್ನು ಆರಿಸಲಾಯಿತು. ಶ್ರೀ ಬಿ. ಎಸ್. ಕುಶಾಲಪ್ಪನವರು (ಅಧ್ಯಕ್ಷ) ಶ್ರೀ ಸಿ. ಎಂ. ರಾಮರಾಯರು (ಉಪಾಧ್ಯಕ್ಷ) ಶ್ರೀ ಜಿ. ಎಸ್. ಕೇಶವಾಚಾರ್ಯರು ಮತ್ತು ಶ್ರೀ ಜಿ. ಟಿ. ನಾರಾಯಣರಾಯರು (ಸಹಕಾರ್ಯದರ್ಶಿಗಳು). ಶ್ರೀಗಳಾದ ಎಂ ಎಸ್. ಅನಂತಪದ್ಮನಾಭರಾವ್, ಡಿ. ವೆಂಕೋಬರಾವ್, ಎನ್. ಸುಬ್ರಹ್ಮಣ್ಯಂ, ಡಿ. ಎನ್. ಕೃಷ್ಣಯ್ಯ, ಹೆಚ್. ಎಸ್. ವೆಂಕಟಸುಬ್ಬಯ್ಯ (ಸಮಿತಿಯ ಸದಸ್ಯರು) ಶ್ರೀ ಗೋಪಾಲಕೃಷ್ಣರಾಯರು (ಲೈಬ್ರೇರಿಯನ್).

ಕಾನೂರು ಗ್ರಾಮದ ಶ್ರೀ ಎಚ್. ಎಂ. ನಂಜುಂಡಮ್ಮಯ್ಯನವರ ದನಗಳ ಜೊತೆಯಲ್ಲಿ ಕಳೆದ ೩ ವಾರಗಳಿಂದ ಒಂದು ಕೋಣ ಸೇರಿಕೊಂಡಿದೆಯೆಂದೂ ಮೂಲೀಕರು ತಕ್ಕ ರುಜುವಾತಿನಿಂದ ಅದನ್ನು ಹೊಡಕೊಂಡು ಹೋಗಬಹುದಾಗಿಯೂ ತಿಳಿಸುತ್ತಾರೆ.

ಮಡಿಕೇರಿಗೆ ಈ ವಾರ ಅಂದರೆ ತಾ. ೩ರಿಂದ ೮ರ ವರೆಗೆ ೨೭ ಇಂಚು ೩೮ ಸೆಂಟು ಮಳೆಯಾಗಿದೆ. ಹೆಚ್ಚು ಮಳೆಯಾದ ತಾ. ೫ರಲ್ಲಿ ೯ ಇಂಚು ೧೬ ಸೆಂಟು ಮಳೆ ಬಿತ್ತು. ಈ ವರೆಗೆ ಅಂದರೆ ತಾ. ೮ಕ್ಕೆ ಮಡಿಕೇರಿಗೆ ಒಟ್ಟು ೬೩ ಇಂಚು ೯೯ ಸೆಂಟು ಮಳೆಯಾಗಿದೆ. ಕಳೆದ ವರ್ಷ ಇದೇ ತಾರೀಕಿಗೆ ೩೨ ಇಂಚು ೩೩ ಸೆಂಟು ಮಳೆಯಾಗಿತ್ತು. ಈ ವರ್ಷ ಈ ವರೆಗೆ ಕಳೆದ ವರ್ಷಕ್ಕಿಂಥಾ ೩೧ ಇಂಚು ೬೬ ಸೆಂಟು ಮಳೆ ಹೆಚ್ಚಾಗಿದೆ.

ಡೆರಾಡೂನಿನ ಡಿಫೆನ್ಸ್ ಎಕೆಡೆಮಿ ಜಾಯಿಂಟ್ ಸರ್ವಿಸಸ್ ಕೋರ್ಸಿಗೆ ನಡೆದ ಪ್ರವೇಶ ಪರೀಕ್ಷೆಯಲ್ಲಿ ಶ್ರೀಗಳಾದ ಕೋಟೆರ ಭೀಮಯ್ಯ ಮತ್ತು ಕೊಂಗಾಂಡ ಮುತ್ತಣ್ಣ ಇವರುಗಳು ಉತ್ತೀರ್ಣರಾಗಿರುವರು.

ಮಡಿಕೇರಿಯಲ್ಲಿ ಮೆಕ್‌ಲೆಕ್ ಇಂಜಿನಿಯರಿಂಗ್ ಕಂಪೆನಿಯವರು ನಡೆಸುತ್ತಿದ್ದ ಇಲೆಕ್ಟ್ರಿಕ್ ಕಂಪೆನಿಯನ್ನು ರೂ. ೭೫ ಸಾವಿರಕ್ಕೆ ಪಡಕೊಂಡು ಅದನ್ನು ಉತ್ತಮಗೊಳಿಸಲು ಕೇಂದ್ರ ಸರಕಾರವು ಸ್ಥಳೀಯ ಸರಕಾರಕ್ಕೆ ಅನುಮತಿ ಇತ್ತಿರುವದೆಂದು ವರ್ತಮಾನ.

'ಸಿ' ಪ್ರಾಂತಗಳ ಆಕ್ಟಿನ ಮೇರೆ ಅಜ್ಮೀರ್, ಭೋಪಾಲ್, ಡೆಲ್ಲಿ, ಕೊಡಗು, ಹಿಮಾಚಲ ಮತ್ತು ವಿಂದ್ಯಾ ಪ್ರದೇಶಗಳ ಕನ್ಸಲಿಡೇಟೆಡ್ ಫಂಡುಗಳಲ್ಲಿ ಯಾವ ಕಾಲಕ್ಕೂ ರೂ. ೫ ಲಕ್ಷಕ್ಕಿಂಥಾ ಕಡಿಮೆ ಶಿಲ್ಕು ಇರಲಿಕ್ಕೂಡದೆಂದು ಒಕ್ಕೂಟದ ಪ್ರೆಸಿಡೆಂಟರು ವಿಧಿಸಿರುವರು.

ಕೊಡಗಿನ ಸ್ಕಾಫ್ ಸಿಲೆಕ್ಷನ್ ಬೋರ್ಡಾಗಿ ಒಂದು ವರ್ಷದ ವರೆಗೆ ಕೊಡಗಿನ ಚೀಫ್ ಸೆಕ್ರೆಟರಿ (ಅಧ್ಯಕ್ಷ), ಶ್ರೀ ಐ. ಸಿ. ಸುಬ್ಬಯ್ಯ, ಶ್ರೀ ಎನ್. ತಿರುಮೂರ್ತಿ ಮತ್ತು ಎಂ. ಎಸ್. ಅನಂತಪದ್ಮನಾಭರಾವ್ (ಸೆಕ್ರೆಟರಿ) ಇವರುಗಳನ್ನು ಆರಿಸ

ಕೊಡಗಿನಲ್ಲಿ ಏಪ್ರಿಲ್ ತಿಂಗಳಲ್ಲಿ ೩೭೬ ಜನನಗಳೂ ೧೩೫ ಮರಣಗಳೂ ಸಂಭವಿಸಿವೆ.

ಫ್ರೇಜರ್‌ಪೇಟೆ ನೋಟಿಫೈಡ್ ಏರಿಯಾದ ಸದಸ್ಯರಾಗಿ ಶ್ರೀಗಳಾದ-ಇಸ್ಮೈಲ್ ಲಬ್ಬೆ, ಜವರಪ್ಪ ಶಿರಂಗಾಲ, ಲಕ್ಷ್ಮಣ ಶೆಟ್ಟಿ, ಡಿ. ಎಸ್. ಮಲ್ಲಪ್ಪ, ಕೆ. ಡಿ. ರಾಜ್ಗೋಪಾಲ ಮತ್ತು ಎಂ. ಆರ್. ವೆಂಕಟ್ಟರಮಣ ಶೆಟ್ಟಿಯವರುಗಳನ್ನು ೧-೮-೫೩ರಿಂದ ಮೂರು ವರ್ಷಗಳ ವರೆಗೆ ಆರಿಸಲಾಗಿದೆ.

ಸಂಯುಕ್ತ ರಾಷ್ಟ್ರ ಸಂಘದ ಮಕ್ಕಳ ಸಂಸ್ಥೆಯ ಆಶ್ರಯದಲ್ಲಿ ಕೆಲಸ ಮಾಡುತ್ತಿರುವ ಕೊಡಗು ಸಂಸ್ಥಾನದ ಮಕ್ಕಳ ಹಿತಬಯಸುವ ಸಮಿತಿಯ ವಿಚಿಟೆಂಗು ತಾ. ೧೭ನೇ ಶುಕ್ರವಾರ ಕೊಡಗು ಎಸೆಂಬ್ಲಿ ಹಾಲ್‌ನಲ್ಲಿ ಚೀಫ್ ಕಮಿಷನರ ಅಧ್ಯಕ್ಷತೆಯಲ್ಲಿ ನಡೆಯುವದು.

ತಾ. ೭ರಲ್ಲಿ ಕೊಡಗು ಜಿಲ್ಲಾ ಕಾಂಗ್ರೆಸಿನ ಸಭೆಯು ಶ್ರೀ ಎನ್. ಸೋಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಎನ್. ಎಸ್. ಕೆಲ್ಲೆಯನವರ ನಿಧನಕ್ಕೆ ಸಂತಾಪ ಸೂಚಿಸುವ ಠರಾವು ಮಾಡಿದುದಲ್ಲದೆ ಕಾಂಗ್ರೆಸ್ ಆಫೀಸಿನಲ್ಲಿ ಅವರದೊಂದು ಭಾವಚಿತ್ರವನ್ನಿಡಲು ನಿರ್ಣಯಿಸಿರುವರು.

ತಾ. ೮ರಲ್ಲಿ ಬೇಂಗೂರು ಗ್ರಾಮಸ್ಥರು ಒಂದು ಸಭೆ ಸೇರಿ ಸಹಕಾರ ಇನ್ಸ್‌ಪೆಕ್ಟರಾಗಿ ನಿವೃತ್ತರಾಗಿರುವ ಶ್ರೀ ಕಟ್ಟಮನೆ ಪೊನ್ನಪ್ಪನವರು ಗ್ರಾಮಕ್ಕೂ, ನಾಡಿಗೂ ಮಾಡಿರುವ ಮತ್ತು ಮಾಡುತ್ತಿರುವ ಅನೂಲ್ಯ ಸೇವೆಗಾಗಿ ಅವರ ಹೆಸರಿನಲ್ಲಿ ಕಡೆಸಾಲಪ್ಪ ದೇವಸ್ಥಾನದಲ್ಲಿ ಪೂಜೆ ನಡೆಸಿ ಅವರನ್ನು ಒಡ್ಡೋಲಗ, ಪುಷ್ಪಹಾರ, ಭೋಜನಕೂಟದಿಂದ ಸತ್ಕರಿಸಿದರು.

ರುದ್ರಗುಪ್ಪೆ ಗ್ರಾಮದ ಬಲ್ಲಡಿಚಂಡ ಕುಟುಂಬದ ಪಟ್ಟೆದಾರ ಶ್ರೀ ಬಿದ್ದ ಯ್ಯನವರು ತಾ. ೩ ರಲ್ಲಿ ತಮ್ಮ ೮೫ನೇ ವಯಸ್ಸಿನಲ್ಲಿ ಶಿವಾಧೀನರಾದರು.

ಮೈಸೂರು ವಿಶ್ವವಿದ್ಯಾಲಯದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಶ್ರೀಗಳಾದ ಮುರುವಂಡ ಎ. ಜಿಮ್ಮಿ, ಕೊರವಂಡ ಮುತ್ತಣ್ಣ ಮತ್ತು ಕೊಂಗಾಂಡ ಮಿಸ್ ವೀಣಾ ಚಿಟ್ಟಣ್ಣನವರು ತೇರ್ಗಡೆಯಾಗಿರುವರು.

ಕೊಡಗಿನಲ್ಲಿ ಈ ವಾರ ಮಳೆಯಿಂದಾಗಿ ವಿಪರೀತ ಹಾನಿಯಾಗಿದೆ. ತಾ. ೫ ರಲ್ಲಿ ಭಾಗಮಂಡ್ಲಕ್ಕೆ ೧೭ ಇಂಚೂ, ನಾಪೋಕ್ಲಿಗೆ ೧೪ ಇಂಚೂ, ವೀರಾಜಪೇಟೆಗೆ ೮೨ ಇಂಚೂ, ಈ ರೀತಿ ಮಳೆ ಬಿದ್ದಿದೆ. ಈ ವಿಪರೀತ ಮಳೆಯಿಂದಾಗಿ ಭಾಗಮಂಡ್ಲದ ಸಂಗಮದಲ್ಲಿ ಕಾವೇರಿ ನದಿಯ ನೀರು ಏರಿ ದೇವಸ್ಥಾನದ ಒಳನುಗ್ಗಿತ್ತೆಂದೂ, ಭಾಗಮಂಡ್ಲ ಟೌನಿಗೂ ನೀರು ನುಗ್ಗಿತ್ತೆಂದೂ, ಕಾವೇರಿ ದೇವಸ್ಥಾನದ ಪೌಳಿಯ ನಾಲ್ಕು ಕೋಣೆಗಳು ಬಿದ್ದು ಹೋಗಿರುವದಾಗಿಯೂ ವರ್ತಮಾನ. ಅನೇಕ ಕಡೆ ಶಾಲಾ ಕಟ್ಟಡಗಳು, ಸೇತುವೆಗಳು, ಪೈಪ್ ನರ್ ಇರಿಗೇಶನ್ ಇಲಾಖೆಯವರು ಕಟ್ಟಿಸಿದ ಕಟ್ಟೆಗಳು ನಿರ್ನಾಮವಾಗಿವೆ. ಹೊಳೆಗಳ ಅನಾಹುತದಿಂದಲೂ, ಕೆರೆ ತೋಡುಗಳ ಪ್ರವಾಹದಿಂದಲೂ ರೈತರಿಗೆ ವಿಪರೀತ ನಷ್ಟವಾಗಿದೆ. ಕೊಡಗು ಸರಕಾರವು ಇಂಥಾ ನಷ್ಟ ಹೊಂದಿದವರಿಗೆ ಟಕಾವಿ ಸಾಲ ಕೊಡುವ ಏರ್ಪಾಡು ಮಾಡಿದೆಯೆಂದು ವರ್ತಮಾನ.

ಜಾತೀಯವಾದಕ್ಕೆ ಬೆಂಬಲ ?

ಕೊಡಗು ಸರಕಾರಿ ಕಾಲೇಜಿನ ವಿದ್ಯಾರ್ಥಿಗಳಿಗೆ ನಿವಾಸಗ್ರಹದ ಏರ್ಪಾಡು ಏನೂ ಚೆನ್ನಾಗಿಲ್ಲ. ಹಿಂದಿನ ಪೊಲೀಸ್ ಟ್ರೈನಿಂಗ್ ಶಾಲೆಯನ್ನು ಈಗ ನಿವಾಸಗ್ರಹವಾಗಿ ಮಾಡಿರುವರು. ಅದರಲ್ಲಿ ಹೆಚ್ಚೆಂದರೆ ೪೦ ವಿದ್ಯಾರ್ಥಿಗಳನ್ನು ತುಂಬಬಹುದು. ಆದೂ ಕೂಡ ಆರೋಗ್ಯಕರ ಕಟ್ಟಡವಲ್ಲ. ಮಳೆಗಾಳಿಗಳ ಈ ಸಮಯದಲ್ಲಿ ವಿದ್ಯಾರ್ಥಿಗಳಿಗೆ ವಿಪರೀತ ತೊಂದರೆ ಇದೆ. ಉಳಿದ ವಿದ್ಯಾರ್ಥಿಗಳು ಏನುಮಾಡಬೇಕು? ಕಳೆದ ವಾರದ ಕೊಡಗು ಪತ್ರಿಕೆಯಲ್ಲಿ ಪತ್ರಗಾರರೊಬ್ಬರು ಗೌಡ ಬೋರ್ಡಿಂಗಿನ ವಿದ್ಯಾರ್ಥಿಗಳನ್ನು ಕೆಳಗಿನ ಬೋರ್ಡಿಂಗಿಗೆ ವರ್ಗಾಯಿಸಿ ಅದನ್ನು ಕಾಲೇಜು ವಿದ್ಯಾರ್ಥಿಗಳಿಗೆ ಬೋರ್ಡಿಂಗ್ ಆಗಿ ಮಾಡಬೇಕೆಂಬ ಅತ್ಯುತ್ತಮ ಸೂಚನೆಯನ್ನು ಕೊಟ್ಟಿದ್ದರು. ಆದರೆ ಬಾಯಲ್ಲಿ ಜಾತ್ಯಾತೀತ ಸರಕಾರವೆಂದು ಕೂಗಿಕೊಂಡರೂ ಜಾತೀಯವಾದದ ಅಡಿಪಾಯದ ಮೇಲೆ ನಿಂತಿರುವವರಿಗೆ ಹಾಗೆ ಮಾಡುವ ಎದೆಗಾರಿಕೆ ಎಲ್ಲಿದೆ? ಬದಲು ಕಾಲೇಜು ವಿದ್ಯಾರ್ಥಿಗಳು ಹೈಸ್ಕೂಲು ಲೋವರ್ ಹಾಸ್ಟೆಲಿನಲ್ಲಿ ಇರಬಹುದೆಂದು ಏರ್ಪಡಿಸಿ ಈಗಾಗಲೇ ಸುಮಾರು ಐವತ್ತು ವಿದ್ಯಾರ್ಥಿಗಳು ಅಲ್ಲಿ ಸೇರಿರುವರು

ಮೇಲಿನ ಬೋರ್ಡಿಂಗಿನಲ್ಲಿ ಕೇವಲ ೧೦ ಜನ ವಿದ್ಯಾರ್ಥಿಗಳಿರುವದಾಗಿದೆ. ಈ ಬೋರ್ಡಿಂಗು ಗೌಡ ಕೋಮಿನವರಿಗೆ ವಿಶಲಾದುದು. ಹಿಂದಿನಿಂದಲೂ ಇದು ಹಾಗೆಯೇ ನಡೆದುಬಂದಿದೆ ಕೆಳಗಿನ ಬೋರ್ಡಿಂಗಿನಲ್ಲಿ ಹೈಸ್ಕೂಲಿನ ಸುಮಾರು ೫೦ ವಿದ್ಯಾರ್ಥಿಗಳಿದ್ದಾರೆ. ಗೌಡ ಬೋರ್ಡಿಂಗಿನಲ್ಲಿರುವ ಹತ್ತು ಹೈಸ್ಕೂಲು ವಿದ್ಯಾರ್ಥಿಗಳನ್ನು ಕೆಳಗಿನ ಬೋರ್ಡಿಂಗಿಗೆ ವರ್ಗಾಯಿಸಿ ಹೈಸ್ಕೂಲು ವಿದ್ಯಾರ್ಥಿಗಳು ಒಂದೆಡೆ ಇರುವಂತೆ ಮಾಡಿ ಕಾಲೇಜು ವಿದ್ಯಾರ್ಥಿಗಳನ್ನು ಪ್ರತ್ಯೇಕವಾಗಿರುವ ಮೇಲಿನ ಬೋರ್ಡಿಂಗಿಗೆ ಕಳಹಿಸಿದ್ದರೆ ಎಲ್ಲವೂ ಸರಿಯಾಗುತ್ತಿತ್ತು. ಹೈಸ್ಕೂಲು ಮತ್ತು ಕಾಲೇಜು ವಿದ್ಯಾರ್ಥಿಗಳನ್ನು ಜೊತೆಯಲ್ಲಿ ಒಂದೇ ಬೋರ್ಡಿಂಗಿನಲ್ಲಿಡುವದು ಎಂದೂ ಸರಿಯಲ್ಲ. ಇದರಿಂದ ಇಬ್ಬರಿಗೂ ಹಾನಿ ಇದೆ. ಆದರೆ ಜಾತೀಯವಾದ, ಒಳಗೊಳಗಿನ ಸೆಳೆತಗಳಿಗೆ ಬೆಲೆ ಕೊಡಬೇಕಾಗಿರುವ ಈ ಕಾಲದಲ್ಲಿ ವಿಶಾಲ ದೃಷ್ಟಿಯಿಂದ ವರ್ತಿಸುವದು ಸಾಧ್ಯವಿಲ್ಲ. ಆದ್ದರಿಂದ ಕೆಳಗಿನ ಬೋರ್ಡಿಂಗಿನಲ್ಲಿರುವ ೫೦ ವಿದ್ಯಾರ್ಥಿಗಳಿಗೆ ತೊಂದರೆ ಆದರೂ ಚಿಂತೆ ಇಲ್ಲ ಅಂಥು ಮೇಲಿನ ಕೋಮುವಾರು ತಳಹದಿಯಲ್ಲಿ ನಿಂತಿರುವ ಬೋರ್ಡಿಂಗಿನ ಹತ್ತು ವಿದ್ಯಾರ್ಥಿಗಳಿಗೆ ತೊಂದರೆಯಾಗಬಾರದೆಂದು ಭಾವಿಸಿದಂತಿದೆ. ಇನ್ನಾದರೂ ಕಾಲ ವಿಳಂಬವಾಗಿಲ್ಲ. ನಮ್ಮ ಸರಕಾರವು ಮೇಲಿನ ಬೋರ್ಡಿಂಗಿನ ಹತ್ತು ವಿದ್ಯಾರ್ಥಿಗಳನ್ನು ಕೆಳಗಿನ ಬೋರ್ಡಿಂಗಿಗೆ ವರ್ಗಾಯಿಸಿ ಅಲ್ಲಿ ಕಾಲೇಜು ವಿದ್ಯಾರ್ಥಿಗಳು ಹೈಸ್ಕೂಲಿನ ಸಂಬಂಧವಿಲ್ಲದೆ ಪ್ರತ್ಯೇಕ ಇರುವಂತೆ ಮಾಡುವದೇ?

ಅಪ್ಪಯ್ಯ.

** ಓದುಗರ ಓಲೆಗಳು. **

ವಿದ್ಯಾಧಿಕಾರಿಗಳ ದಬ್ಬಾಳಿಕೆ.

ವಿದ್ಯಾಧಿಕಾರಿಗಳು ಅಧ್ಯಾಪಕರನ್ನು ತಮ್ಮ ಇಷ್ಟ ಬಂಡಂತೆ ವರ್ಗಾಯಿಸುವುದು ನ್ಯಾಯವೇ? ಯಾವುದಾದರೊಂದು ಉದ್ಯೋಗದಲ್ಲಿ ವಳಿಗಾಲದಲ್ಲಿ ವರ್ಗಾಯಿಸುವ ಹಕ್ಕು ಉತ್ತರ ಕೊಡಗಿನ ಡೆಪ್ಯುಟಿ ಇನ್ಸ್‌ಪೆಕ್ಟರಿಗೆ ವಿಶಲಿರುವಂತೆ ತೋರುತ್ತಿದೆ. ವಿದ್ಯಾಧಿಕಾರಿಗಳ ಬಲಗೈಯಾಗಿ ಅನರಿರುವರು. ದಕ್ಷಿಣ ಕೊಡಗಿನ ಡೆಪ್ಯುಟಿ ಇನ್ಸ್‌ಪೆಕ್ಟರು ಈ ಹಕ್ಕಿಗೆ ಅಯೋಗ್ಯರೇ? ಇವರಿಗೆ ಅವರಷ್ಟೇ ಅಧಿಕಾರವಿಲ್ಲವೇ? ಇವರ ವರ್ತನೆಯಿಂದ ಅಧ್ಯಾಪಕ ವರ್ಗಕ್ಕೆ ಸಾಕೋ ಸಾಕಾಗಿ ಹೋಗಿದೆ. ವಿದ್ಯಾಧಿಕಾರಿಗಳು ಇರುವರು ನಿಜ. ಆದರೆ ಬೇಕಾದವರಿಗೆ ಕೇಳಿದ ಸ್ಥಳದಲ್ಲಿಯೂ ಕೇಳದವರಿಗೆ ಕೊಡಗಿನ ಗಡಿಪ್ರಾಂತದಲ್ಲಿಯೂ ಕೆಲಸ ಕೊಡುವದಾದರೆ ಅತ್ತ ಮಗುವಿಗೆ ಮೂತ್ರ ಹಾಲೆಂಬ ನಾಣ್ಣುಡಿಯುಂಟಾಗದೇ? ಇದು ಪ್ರಜಾ ಸರಕಾರದ ಘೋರಣೆಯೇ? ಈ ರೀತಿ ವರ್ಗಮಾಡಲ್ಪಟ್ಟ ಅಧ್ಯಾಪಕರು ಎಂದಾವರೂ ಮಕ್ಕಳ ಅಭಿವೃದ್ಧಿಗೆಂದು ಪಾಟಮಾಡಬಲ್ಲರೆ? ಅಲ್ಲದೆ ಇಂತಹ ಮಳೆಗಾಲದಲ್ಲಿ ಯಾರಾದರೂ ಸಂಸಾರ ಹಾಗೂ ತನ್ನ ಸಾಮಾನುಗಳನ್ನು ಬೇರೆ ಕಡೆಗೆ ಸಾಗಿಸಬಲ್ಲರೇ? ಆ ಕಾರಣ ಅಧ್ಯಾಪಕರು ರಜೆ ತೆಗೆಯುವುದರಲ್ಲಿ ಅನ್ಯಾಯವಿದೆಯೇ? ಇದರಿಂದ ಮಕ್ಕಳ ಅಭಿವೃದ್ಧಿಯಾಗುವುದೇ? ಈ ರೀತಿ ವರ್ಗಮಾಡುತ್ತಿರುವವರನ್ನು ಕೇಳಲು ಮೇಲಧಿಕಾರಿಗಳಿಲ್ಲವೇ? ಈ ಮಳೆಗಾಲದಲ್ಲಿ ಆರ್ಡರ್ ಮಾಡುತ್ತಿರುವವರಲ್ಲೊಬ್ಬರನ್ನು ಅಂಡಮಾನಿಗೆ ವರ್ಗ ಮಾಡಿದರೆ ಅವರಿಗೆ ಹೇಗಾಗಬಹುದು? ಅಧ್ಯಾಪಕರಿಗೆ ಈ ರೀತಿ ಉಪದ್ರವವಾಗದಂತೆ ವಿದ್ಯಾಮಂತ್ರಿಗಳು ಚೆನ್ನಾಗಿ ಪರಿಶೀಲಿಸಿ ಅಧ್ಯಾಪಕರ ಹಾಗೂ ಮಕ್ಕಳ ಅಭಿವೃದ್ಧಿಯನ್ನು ಬಯಸಲಿ.

ಓ. ಎಲ್. ಕೆ.

ನಾಡುಗುಂಡಿ ಸೇತುವೆ

ತಾರೀಕು ೧೫–೬–೧೯೫೩ರ ಪತ್ರಿಕೆಯಲ್ಲಿ ನಾಡುಗುಂಡಿ ಸೇತುವೆ ಎಂದು ಒಂದು ಬಾತ್ಮಿಯನ್ನು ನೋಡಿದೆನು. ಆದರೆ ಆ ಬಾತ್ಮಿಯಲ್ಲಿ ನಿಜಾಂಶ ಬಿಟ್ಟು ಹೋದುದರಿಂದ ದೇಶದ ಮುಂದಿಡುವುದು ನನ್ನ ಕರ್ತವ್ಯವಾಗಿದೆ. ಈ ಸೇತುವೆಯು ಕುತ್ತುನಾಡಿಗೆ ಸಂಬಂಧಪಟ್ಟದ್ದಾಗಿದೆ. ಕುತ್ತುನಾಡಿನ ಸುತ್ತಲೂ ಹೊಳೆ ಸುತ್ತಿಕೊಂಡು ಮಳೆಗಾಲದಲ್ಲಿ ಜನರು ಪೇಟೆ ಕೋಟೆಗಳಿಗೆ ತಿಂಗಳಾಡಲು ತೊಂದರೆ ಇರುವುದು ದೇಶದ ಮುಂದಾಳುಗಳಿಗೆ ಚೆನ್ನಾಗಿ ಗೊತ್ತಿರುವ ಸಂಗತಿಯಾಗಿದೆ. ೧೯೫೬ನೇ ಇಸವಿಯಲ್ಲೇ ಕೇಂದರೆ ಕಡು ಎಂಬ ಸ್ಥಳಕ್ಕಾಗಿ ಲೋಕಲ್‌ಫಂಡ್ ರೋಡು ಕೈಮುಡಿಕೆಬಾಣೆಗಾಗಿ ಹಾತೂರು, ಪೊನ್ನಂಪೇಟೆ, ಗೋಣಿಕೊಪ್ಪಲುಗಳಿಗೆ ಹೋಗಲು ಸುಲಭವಾಗುವಂತೆ ಈ ಸೇತುವೆ ಮಾಡಿಸಿ ಕೊಡಬೇಕೆಂದು ನಾಡಿನವರ ಹೋರಾಟದಂತೆ ಸರಕಾರದವರು ಅರ್ಧ ಹಣ ಹಾಕುವಂತೆಯೂ ನಾಡಿನವರು ಅರ್ಧ ಹಣ ಹಾಕುವಂತೆಯೂ ಒಪ್ಪಿನಿರ್ಣಯವಾಗಿತ್ತು. ಅದರನಂತರಕೊಂಗಣಗ್ರಾಮದಕಡೇಮನೆಯ ಮನೆಯವರು ಅವರಿಗೆ ಹತ್ತಿರ ಆಗುವ ರೀತಿಯಲ್ಲಿ ನಾಡುಗುಂಡಿಗಾಗಿ ಪಾಲ ಕಟ್ಟಬೇಕೆಂದು ತಕರಾರು ಹೂಡಿದರು. ಇಡೀ ನಾಡಿಗೆ ಅನುಕೂಲ ಆಗುವ ರೀತಿ ರಸ್ತೆಗಾಗಿ ಪಾಲ ಆಗಬೇಕೆಂದು ನಾಡಿನವರು ಹೇಳಿದರು. ಹೇಗೂ ತಕರಾರಿನಲ್ಲೇ ಒಂದು ವರ್ಷ ಕಳೆಯಿತು. ಯುದ್ಧವು ಶುರುವಾಯಿತು. ಪಾಲ ಕಟ್ಟುವುದು ನಿಂತು ಹೋಯಿತು. ಈಚೆಗೆ ೧೯೫೩ನೇ ಇಸವಿಯಲ್ಲಿ ನಾಡಿನವರೇ ಕಲ್ಲಿನ ಕಂಬ ಮಾಡಿ ಪಾಲ ಹಾಕಿಸುವಂತೆ ಕಲ್ಲು ಒಡೆಸಿ ಹಾಕಿದ ಕಲ್ಲು ಈಗಲೂ ಅಲ್ಲೇ ಇದೆ. ಅಷ್ಟರಲ್ಲಿ ನಮ್ಮ ಎಸೆಂಬ್ಲಿ ಚುನಾವಣೆ ಬಂದು ನಮ್ಮ ಪ್ರಜಾಪ್ರಭುತ್ವ ಸರಕಾರ ಬರುತ್ತೆ ಸರಕಾರದವರೇ ಪಾಲ ಮಾಡಿ ಕೊಡುತ್ತಾರೆಂದು ಕಾದಿದ್ದೆವು. ಚುನಾವಣೆ ಮುಗಿಯಿತು. ಚುನಾವಣೆಯಲ್ಲಿ ಕಾಂಗ್ರೆಸ್ ಪಾರ್ಟಿ ಪ್ರತ್ಯೇಕ ಪಾರ್ಟಿಗಳ ಸ್ಪರ್ಧೆ ನಡೆಯಿತು. ಪ್ರತ್ಯೇಕ ಪಾರ್ಟಿಯಲ್ಲಿ ಕಡೇಮನೆ ಬೆಳ್ಯಪ್ಪನವರು ನಿಲ್ಲಬೇಕೆಂದು ಆಶಿಸಿದ್ದರು. ಕಾರಣಾಂತರದಿಂದ ಅವರನ್ನು ನಿಲ್ಲಿಸಲಿಲ್ಲ. ಕಾಂಗ್ರೆಸಿಗೆ ದೇಶದಲ್ಲಿ ಬಹುಮತ ದೊರೆಯಿತು. ಮಂತ್ರಿಮಂಡಳ ಸ್ಥಾಪಿತವಾಯಿತು. ಮಂತ್ರಿಗಳನ್ನು ಕರೆಸಿ ಕಡೇಮನೆ ಕುಟುಂಬದವರು ಮೈದಾನದಲ್ಲಿ ಊಟ ಕೊಟ್ಟರು. ಅಲ್ಲಿ ಅವರಿಗೆ ಅನುಕೂಲವಾಗುವ ನಾಡುಗುಂಡಿಗಾಗಿ ಕಾಂಕ್ರೀಟ್ ಪಾಲ ಹಾಕುವಂತೆ ಭರವಸೆ ತೆಗೆದುಕೊಂಡರು. ಒಂದೇ ತಿಂಗಳಲ್ಲಿ ಪಾಲ ಆಗಿಯೇ ಹೋಯ್ತು. ಪಾಲ ನಾಡುಗುಂಡಿಗಾಗಿ ಕಟ್ಟಲಿಕ್ಕೆ ಭರವಸೆ ಮಂತ್ರಿಗಳು ಕೊಟ್ಟಿದ್ದಾರೆ ಎಂದು ತಿಳಿದ ಕೂಡಲೇ ನಾಡಿನ ಜನರು ಮುಖ್ಯ ಮಂತ್ರಿ ಪೂಣಚ್ಚನವರ ಮನೆಗೆ ಹೋಗಿ ನಾಡುಗುಂಡಿಗಾಗಿ ಪಾಲ ಹಾಕಿದಡೆ ಅಲ್ಲಿಗೆ ಹೋಗಲು ಬೇರೆ ದಾರಿ ಇಲ್ಲ. ಸಣ್ಣತಿವರಿಗಾಗಿ ಗದ್ದೆಗಾಗಿ ಹೋಗಬೇಕು. ಗೋಣಿಕೊಪ್ಪಲಿನಿಂದ ದನಕರ ತರಲಿಕ್ಕೆ ಬಹಳ ತೊಂದರೆಯಾಗುತ್ತೆ. ಇಡೀ ನಾಡಿನ ಜನರಿಗೇ ತೊಂದರೆಯಾಗುತ್ತೆ. ರಸ್ತೆಗಾಗಿ ಮಕ್ಕಳು ಶಾಲೆಗೆ ಹೋಗಲು ಬಹಳ ಅನುಕೂಲವಾಗಿದೆ. ಹಾತೂರು ಹೈಸ್ಕೂಲಿಗೆ ರಸ್ತೆಗಾಗಿ ಪಾಲ ಹಾಕಿದಡೆ ಕುತ್ತುನಾಡಿನ ಜನರಿಗೆ ಅನುಕೂಲ ಆಲ್ಲವೆ ಬೂಡಗ ಗ್ರಾಮಸ್ಥರ ಮಕ್ಕಳು ಹಾತೂರು ಶಾಲೆಗೆಹೋಗಲು ಅನುಕೂಲವಿದೆ ಎಂದು ಬೇಡಿಕೊಂಡರು. ಆ ಬೇಡಿಕೆ ಪ್ರಯೋಜನವಾಗಲಿಲ್ಲ. ನಾಡುಗುಂಡಿಗಾಗಿ ಒಂದು ತಿಂಗಳಲ್ಲಿಯೇ ಪಾಲ ಹಾಕಿಸಿಬಿಟ್ಟರು. ಆ ಪಾಲನನ್ನು ತೆರೆಯಲಿಕ್ಕೆ ಜನರಲ್ ಕಾರ್ಯಪ್ಪನವರು ಒಪ್ಪಿಕೊಂಡದ್ದಕ್ಕೆ ಸಂತೋಷಪಡಬೇಕಾಗಿದೆ. ನಾಡಿನ ಮುಖ್ಯಪಟ್ಟ ಜನರಿಗೆ ಯಾರಿಗೂ ತಿಳಿಯದಂತೆ ಉಪಾಧ್ಯಾಯರಾದಂಥವರೊಬ್ಬರ ಮೂಲಕ ಈ ಏರ್ಪಾಡು ಮಾಡಿದರು. ಎಲ್ಲರಿಗೂ ತಿಳಿಸಿದ್ದ ಪಕ್ಷದಲ್ಲಿ ಜನರಲ್ ಬರುತ್ತಾರೆಂದು ಗೊತ್ತಾಗಿದ್ದರಿಂದ ಅವರ ದರ್ಶನಕ್ಕೆಂದು ಕಾದು ನಿಂತ ನಾಡಿನವರು ಸಹಕರಿಸದೆ ಎಂದೂ ಹಿಂದಕ್ಕೆ ನಿಲ್ಲುತ್ತಿರಲಿಲ್ಲ. ಜ.ಕಾರ್ಯಪ್ಪನವರಲ್ಲಿ ಅಧ್ಯಾಪಕ ಶ್ರೀ ಪೂನಯ್ಯನವರು ಪ್ರತ್ಯೇಕ ಪಕ್ಷದವರು ಬರಲಿಲ್ಲವೆಂದು ಒಡಕು ಹುಟ್ಟಿಸುವ ಸುಳ್ಳು ವರ್ತಮಾನ ಕೊಟ್ಟದ್ದಕ್ಕೆ ವ್ಯಸನ ಪಡುತ್ತೇನೆ. ಇಷ್ಟಾದರೂ ಕೇಂದರೆ ಕಡುವಿಗಾಗಿ ಒಂದು ಸೇತುವೆ ಕಟ್ಟಿಸಿ ಇಡೀ ನಾಡಿಗೆ ಅನುಕೂಲ ಮಾಡಿಕೊಡಬೇಕಾಗಿ ಮಂತ್ರಿಮಂಡಲವನ್ನು ಈ ನಾಡಿನವರು ಪಾರ್ಥಿಸುವದಾಗಿದೆ.

ಕುತ್ತುನಾಡಿನವ.

ಜಪಾನಿನ ವ್ಯವಸಾಯ ಕ್ರಮ.

ಜಪಾನಿನ ವ್ಯವಸಾಯ ಕ್ರಮವು ಇಂಡಿಯಾ ದೇಶದ ಅನೇಕ ಸ್ಥಳಗಳಿಗೆ ಪೂರಾ ನವೀನ ತರದ ವ್ಯವಸಾಯ ಕ್ರಮವಾದರೂ, ಕೊಡಗಿನ ಮಟ್ಟಿಗೆ ಇದು ಪೂರಾ ನವೀನ ತರವಲ್ಲ. ಜಪಾನಿನ ಮುಖ್ಯಾಂಶ ಕ್ರಮಗಳೆಲ್ಲವೂ ಕೊಡಗಿನಲ್ಲಿ ತಕ್ಕ ಮಟ್ಟಿಗೆ ರೂಢಿಯಲ್ಲಿಯೇ ಇವೆ. ಸಂಭವಾಗಿ ಹೇಳುವದಾದರೆ, 'ಹೆಡ್ಡನ ಆರಂಭ ಗೊಬ್ಬರದಲ್ಲಿ' ಎಂಬಂತೆ, ಈ ವ್ಯವಸಾಯ ಕ್ರಮಕ್ಕೂ ಹೆಚ್ಚಾಗಿ ಬೇಕಾದದ್ದು ಗೊಬ್ಬರವೇ.

ಆದುದರಿಂದ ಯಾವ ಬೆಳೆ ಬೆಳೆಸುವ ಕ್ರಮಕ್ಕೂ ಪ್ರಾಮುಖ್ಯವಾದುದ್ದು ನೀರು ಮತ್ತು ಗೊಬ್ಬರ. ಕೊಡಗಿನ ಮಟ್ಟಿಗೆ ಗೊಬ್ಬರದ ಪ್ರಶ್ನೆಗೆ ಪ್ರಾಮುಖ್ಯತೆಯನ್ನು ಕೊಡಬೇಕಿದೆ. ಕೊಡಗಿನ ಗದ್ದೆಗಳಿಗೆ ಬೇಕಾದ ಮುಖ್ಯವಾದ ದನಗಳ ಗೊಬ್ಬರದ ದೊರೆಯುವಿಕೆಯು ಬಹು ಕಮ್ಮಿ. ರಾಸಾಯನ (Artificial) ಗೊಬ್ಬರದಲ್ಲಿ ಜನರಿಗೆ ವಿಶ್ವಾಸವು ಇನ್ನೂ ಬಂದಿಯವದಿಲ್ಲ.

ದನದ ಗೊಬ್ಬರೆ ದೊರಕದಲ್ಲು ತಿಳಿದವರು ಹಸಿ ಸೊಪ್ಪನ್ನು(Green manure) ಒಂದೆ ಎಕ್ಕೆಗೆ ನಾಲ್ಕು ಗಾಡಿಯಷ್ಟು ಹಾಕಿದರೆ ಬೆಳೆಯು ಹೆಚ್ಚಾಗುವದೆಂದು ಅಭಿಪ್ರಾಯ ಪಡುವವರಿದ್ದಾರೆ. ಆದುದರಿಂದ ಕೊಡಗಿನ ವ್ಯವಸಾಯ ಇಲಾಖೆಯವರು ಹಸಿಸೊಪ್ಪಿನ ಬೆಳವಣಿಗೆಗೆ ಹೆಚ್ಚಿನ ಪ್ರೋತ್ಸಾಹ ಕೊಡುವದರಿಂದ ಪ್ರಯೋಜನಕಾರಿಯಾದೀತು. ಗದ್ದೆಗಳ ಹೆಕ್ಕದ ಬಯಲುಗಳಲ್ಲಿ ಯಥೇಷ್ಟವಾಗಿ ನೀಲಿ ಮರ, ಯೂ ಗೊಬ್ಬರ ನೇರಳೆ ಮರವನ್ನು ಬೇಕಷ್ಟು ನೆಡಬೇಕು. ಈ ಮರವು ೧೦ ವರ್ಷಗಳ ಬೆಳವಣಿಗೆಯಲ್ಲಿ ಕಮ್ಮಿ ಅರ್ಧ ಗಾಡಿ ಸೊಪ್ಪನ್ನು ಕೊಡಬಲ್ಲದು ಮತ್ತು ಇದರ ಸೊಪ್ಪು ಬಹಳ ಮಂದವಾಗುತ್ತೆ.

ಮತ್ತು ಜೂನ್ ತಾ. ೨೮ರ ಪತ್ರಿಕೆಯಲ್ಲಿ ಶ್ರೀ ಕೆ. ವೇದಾಂತಂರನವರ Glyricidia Maculeta ಎಂಬ ಮ

ಹು ಸುಲಭದಲ್ಲಿಯೇ ಗದ್ದೆಯ ತೆವರಿಗಳ ಲ್ಲಿಯೂ ಕೂಡ ಬೆಳೆಸಬಹುದಾದಂತ ಒಂ ದು Green Manure Tree ಯು ಗೊಬ್ಬರಕ್ಕೆ ಯೋಗ್ಯವಾದ ಮರವೆಂದು ಸೂಚಿಸಿರುತ್ತಾರೆ. ಇಲಾಖೆಯವರು ಇ ದನ್ನು ಪರಿಶೀಲಿಸುವದು ಉತ್ತಮ.

ಕೆ. ಎಂ. ಪೂವಯ್ಯ.

ಬಾಣೆ ಕಂದಾಯ.

ಪೂರ್ವಕಾಲದ ತುಂಡು ಪಾಳೆಯಗಾರ ರ ಕಾಲದಲ್ಲಾಗಲೀ, ಲಿಂಗಾಯಿತ ಅರಸ ರ ಕಾಲದಲ್ಲಾಗಲೀ ನಂತರ ಬ್ರಿಟಿಷರ ಕಾಲದಲ್ಲಾಗಲೀ ಬಾಣೆ ಕಂದಾಯವಿರಲಿ ಲ್ಲವೆಂದು ನಮಗೆಲ್ಲರಿಗೂ ಗೊತ್ತು. ಇತ್ತಲಾ ಗಿ ನಮ್ಮ ಕಾಲಿನಲ್ಲಿ ನಾವು ನಿಂತು ನಮ್ಮ ಕೋರಿಕೆಗಳನ್ನು ಸರಿಯೂದ ರೀತಿಯಿಂದ ನಡೆಸಲು ಮಂತ್ರಿ ಮಂಡಳವನ್ನು ಸ್ಥಾಪಿಸಿ ನಮ್ಮದು ಪ್ರಜಾ ಸರಕಾರವೆಂದೆವು. ಆದರೆ ಜವಾಬ್ದಾರಿ ಸರಕಾರವು ಜನರನ್ನು ಕೇಳದೆ ಕಂದಾಯ ಹಾಕಿದ್ದು ಬೇಲಿಯೆ ಹೊಲವೇ ತಿನುವಂತಾಗಿದೆ. ಸರಕಾರದ ಪಕ್ಕೆಲುಬಾ ದಕೊಬ್ಬ ರೈತರ ಬಾಣೆ ಜಾಗಕ್ಕೆ ಕಂದಾಯ ಹಾಕುವ ವೇಳೆಯಲ್ಲೂ ಅಂದು ಅರಸರು ಮ ತ್ತು ತುಂಡು ಪಾಳೆಯಗಾರರಿಂದ ಸಂಪಾದಿ ಸಿದ ಜಹಗೀರು ಭೂಮಿಯನ್ನು ವಿನಾ ಯಿಸಿದ್ದು ಇನ್ನೂ ವ್ಯಸನಕರ. ಈ ಮೊ ದಲಿನ ಆಡಳಿತದಲ್ಲಿ ಬಿಳಿ ಮತ್ತು ಕಪ್ಪು ಎಂಬ ವರ್ಣ ಬೇಧ ಇತ್ತು. ಆದರೆ ಇಂ ದಿನ ಈ ಪ್ರಜಾ ಸರಕಾರದಲ್ಲಿ ಒಂದು ಕ ಣ್ಣಿಗೆ ಸುಣ್ಣ ಒಂದು ಕಣ್ಣಿಗೆ ಬೆಣ್ಣೆ ಎಂ ಬಂತೆ ತೋರುತ್ತಿದೆ.

ಇವರ ನಟನೆಗೆ ಮರುಳಾಗಿ ಅಧಿಕಾ ರವನ್ನು ಕೆಲವರ ಕೈಗೆ ಕೊಟ್ಟು ಇಂದು ಇ ವರ ಹಸ್ತ ನಮ್ಮ ಹವಾಲು ಹೇಳಿದರೆ ಕೇಳಿ ಯೂ ಕೇಳದೆ ವರ್ತಿಸುವದು ಸರಿಯೂದು ಪಲ್ಲ. ಆದರೆ ನಮ್ಮ ಕೂಗು ಅರಣ್ಯರೋ ದನವಾಗಿದೆ. ಕೋಳಿ ಕೂಗಿದರೆ ಗಗನಕ್ಕೆ ಕೇಳೀತೇ? ಎಂಬಂತೆ ನಮ್ಮ ಪರಿಸ್ಥಿತಿಯೂ ಗಿದೆ.

ಮನನೊಂದ ರೈತ.

ನಾಪೋಕ್ಲು ನಾಡಿನ ಪಾರುಪತ್ತೆಗಾರರು

ಡಿಪ್ಯೂಟಿ ಮೇಜಿಸ್ಟ್ರೇಟ್ ಸಾಹೇಬರಿ ಗಿಂತ ನಾಡಿನ ಅಧಿಕಾರಿಗಳಿಗೆ ಅಧಿಕಾರ ಹೆಚ್ಚಿದೆಯೇ? ನಾಪೋಕ್ಲು ನಾಡಿನಲ್ಲಿ ನಾಪೋಕ್ಲು ಗ್ರಾಮದ ಅಯ್ಯಪ್ಪ ದೇವರ ಕಾಡಾಗಿರುವ ಪೈಸಾರಿಯನ್ನು ಬೇರೆ ಜನರಿ ಗೆ ಮನೆ ಕಟ್ಟಲು ಮತ್ತು ತೋಟ ಮಾಡ ಲು ಹುಕುಂ ಆಗಬೇಕೆಂದು ಡಿ. ಮೆ. ಸಾ ಹೇಬರಿಗೆ ಕೆಲವು ವರ್ಷಗಳ ಹಿಂದೆ ಅರ್ಜಿ ಬರಕೊಂಡ ಮೇರೆ ಜೂನೇ ಇಸವಿಯಲ್ಲಿ ಡಿ. ಮೆ. ಸಾಹೇಬರು ಐಯ್ಯಪ್ಪದೇವರ ಕಾಡಾಗಿದ್ದರಿಂದ ಸದ್ರಿ ಅರ್ಜಿಯನ್ನು ತಿರ ಸ್ಕರಿಸಿ ಬೇರೆ ಜಾಗಕ್ಕೆ ಅರ್ಜಿ ಬರಕೊಳ್ಳಬೇ ಕೆಂದು ಹುಕುಂ ಮಾಡಿದ ನಂತರ ಸದ್ರಿ ಜಾಗದಲ್ಲಿ ಒಂದು ಸಣ್ಣ ಗುಡಿಸಲು ಕಟ್ಟಿ ಕೊಂಡು ಒಬ್ಬ ಎಡ್‌ಹಾಕ್ ಕಮಿಟಿಯನ ರನ್ನು ಶಿಫಾರಸ್ಸಿಗೆ ಬಿಟ್ಟು ಈಗ್ಗೆ ಕೆಲವು ದಿವಸಗಳ ಹಿಂದೆ ಸದ್ರಿ ಐಯ್ಯಪ್ಪದೇವರ ಜಾಗವನ್ನು ಅರ್ಜಿದಾರರಿಗೆ ಮಂಜೂರು ಮಾಡಬೇಕೆಂದು ಪಾರುಪತ್ತೆಗಾರರು ಬರೆ ದಿರುತ್ತಾರಂತೆ. ಪುರಾತನ ಕಾಲದಿಂದ ಇಟ್ಟಿದ್ದ ಐಯ್ಯಪ್ಪದೇವರ ಕಾಡನ್ನು ಕೊಡ ಬಹುದೇ? ಇದು ಪ್ರಜಾ ಸರಕಾರದ ಧೋರಣೆಯೇ? ಇದನ್ನು ಮೇಲಧಿಕಾರಿ ಗಳು ಪರಿಶೀಲಿಸಿ ಈ ದೇವರ ಕಾಡನ್ನು ಕಾಪಾಡಬೇಕೆಂದು ಬೇಡಿಕೊಳ್ಳುವುದಾ ಗಿದೆ.

ಓ. ಎಲ್. ಕೆ.

ಅಳಿದೆಯ ಪ್ರಯತ್ನ

ಕೊಡಗು ಸರಕಾರಿ ಕಾಲೇಜಿನ ವಿಚಾ ರದಲ್ಲಿ ಕೊಡಗು ಸರಕಾರವು ವಹಿಸಿರುವ ನೀತಿಯನ್ನು ಪರಿಶೀಲಿಸಿದರೆ ಅದೊಂದು ಅ ಳಿದೆಯ ಪ್ರಯತ್ನವೆಂದು ಹೇಳಬೇಕಾಗಿ ದೆ. ಕಾಲೇಜು ಕಟ್ಟಡ ಕಟ್ಟಲು ಪ್ರಾರಂ ಭಿಸಿ ವರ್ಷಗಳಾದರೂ ಕಟ್ಟಡ ಕೆಲಸ ಪೂ ರ್ತಿಯಾಗಿಲ್ಲ. ಬಹುಶಃ ಇನ್ನೊಂದು ವರ್ಷ ಬೇಕಾದೀತು. ಕಟ್ಟಡಕ್ಕೆ ಬೇಕಾದ ಹಣ ವಿದೆ. ಈಗ ಬೇಕಾದಷ್ಟು ಮಜೂರರು ಕೆಲ ಸಕ್ಕೆ ದೊರೆಯುತ್ತಾರೆ. ಸಾಧನ ಸಾಹಿ ತ್ಯಗಳಿಗೂ ಹಿಂದಿನಂತೆ ಕೊರತೆ ಇಲ್ಲ. ಖಾ ಸಗಿ ಕಂಟ್ರಾಕ್ಟರುಗಳು ವರ್ಷಕ್ಕೆ ಎರಡು ಮೂರರಂತೆ ದೊಡ್ಡ ದೊಡ್ಡ ಕಟ್ಟಡ ಕ ಟ್ಟುತ್ತಿರುವಾಗ ಒಂದು ಸರಕಾರಕ್ಕೆ ಒಂದು ಕಾಲೇಜು ಕಟ್ಟಿಸುವುದು ಆಗಿಲ್ಲವೆಂಬುದು ಬೇಸರದ ಸಂಗತಿ. ಕಾಲೇಜು ಕಟ್ಟಡದ ಸಂ ಗತಿ ಹಾಗಾದರೆ ಮತ್ತೆ ವಿದ್ಯಾರ್ಥಿಗಳಿಗೆ ಹಾ ಸ್ಟೆಲ್ ಏರ್ಪಡಿಸದೆ ತೊಂದರೆ ಬೇರೆ. ಹು ಡುಗಿಯರಿಗೆ ಯಾವುದೇ ವ್ಯವಸ್ಥೆ ಮಾಡದೆ ಮಡಿಕೇರಿಯಲ್ಲಿ ನೆಂಟರಿಲ್ಲದವರು ಕಾಲೇಜಿ ನಲ್ಲಿ ಓದುವದೇ ಅಸಾಧ್ಯವಾಯಿತು, ಹು ಡುಗರಲ್ಲಿಯೂ ಅನೇಕರು ಹೊರಗೆ ಹೋಗ ಬೇಕಾಯಿತು. ಮತ್ತೆ ಬಿ. ಎ., ಬಿ. ಎಸ್‌ಸಿ. ತರಗತಿ ತೆರೆಯುವ ವರ್ತಮಾನ ಬಂತು. ಕ ಡೆಗೆ ಅದು ಬಿ. ಎ. ಮಾತ್ರ ಎಂದಾಯಿತು. ಕಾಲೇಜಿನ ವ್ಯಾಸಂಗಕ್ಕೆ ಯಾವುದೇ ಅನು ಕೂಲ ಮಾಡದೆ ಮತ್ತೆ ವಿದ್ಯಾರ್ಥಿಗಳ ಸಂ ಖ್ಯೆ ಬಿ. ಎಸ್‌ಸಿ, ಬಿ. ಎ. ಗಳಿಗೆ ಕಡಿಮೆ ಎನ್ನಲಾಗುತ್ತಿದೆಯಂತೆ! ತಾ. ೯ರಲ್ಲಿ ಕಾಲೇಜು ತೆರೆಯುವದೆಂದಾಯಿತು. ಅದ ಕ್ಕೆ ಮೊದಲು ಅಧ್ಯಾಪಕರ ಆಯ್ಕೆಮಾಡದೆ ತಾ. ೩೦ರ ನಂತರ ಇಟ್ಟುಕೊಂಡರು. ಅ ರ್ಜಿದಾರರನ್ನು ಪರಿಶೀಲಿಸಿ ಒಂದು ವಾರ ವಾದರೂ ಇದನ್ನು ಬರೆಯುವ ತಾ. ೮ರ ವರೆಗೆ ಯಾವ ಫಲಿತಾಂಶವೂ ಹೊರಬಿದ್ದಿ ರುವದಿಲ್ಲವೆಂದು ನನಗೆ ತಿಳಿದು ಬಂತು. ಮತ್ತೆ ತಾ. ೮ರಿಂದ ಕಾಲೇಜು ಪ್ರಾರಂಭ ವಾಗಿದೆ. ಯಥಾಸ್ಥಿತಿ ವಿದ್ಯಾರ್ಥಿಗಳಿಗೆ ಸ್ಥ ಳವಿಲ್ಲ. ಕಾಲೇಜು ಕಟ್ಟಡದ ವ್ಯವಸ್ಥೆಯಾಗಿ ಲ್ಲ. ಮತ್ತೆ ಅಧ್ಯಾಪಕರ ಆಯ್ಕೆಯೂ ಆ ಗಿಲ್ಲ. ಈ ರೀತಿಯು ಒಂದು ಅವ್ಯವಸ್ಥೆ ಕೊ ಡಗಿಗೆ ಒಂದೇ ಒಂದಾಗಿರುವ ಸರಕಾರಿ ಕಾ ಲೇಜಿನಲ್ಲೇಕೆ? ಹಾಸ್ಟಲಿನ ವ್ಯವಸ್ಥೆ ಇ ಲ್ಲದಿರುವ, ಕಡೆಗೆ ತರಗತಿಗಳಿಗೂ ಸ ರಿಯಾದ ಏರ್ಪಾಡಿಲ್ಲದ ಈ ಕಾಲೇಜಿನಲ್ಲಿ ಬಿ. ಎ. ತರಗತಿಯನ್ನು ತೆರೆಯಲು ವಿಶ್ವ ವಿದ್ಯಾಲಯದವರು ಹೇಗೆ ಅನುಮತಿ ಕೊ ಟ್ಟರೋ ನನಗೆ ತಿಳಿಯದು. ಹೇಗೂ ಕಾ ಲೇಜಿನ ಬಗ್ಗೆ ಸರಕಾರದ ವರ್ತನೆಯು ತೀರಾ ಜಳ್ಳಿದೆಯ ಯತ್ನವೆಂದು ಯಾರಿಗೂ ಅನಿಸದಿರದು.

ನಿರೀಕ್ಷಕ.

॥ ಮಧುಪರ್ಕ ॥

ಸಂಜೆಯ ಮಿಸುನಿ ಬೆಳಕು. ದಕ್ಷಿಣ ಆಫ್ರಿಕಾದ ಫೀನಿಕ್ಸ್ ಆಶ್ರಮದಲ್ಲಿ ಗಾಂಧಿಯವರಿದ್ದರು. ಹಗಲೆಲ್ಲ ಬಡ ಬಗ್ಗರ ನಡುವೆ ದುಡಿದೂ ದುಡಿದು ದಣಿದಿದ್ದ ಗಾಂಧೀಜಿ ಬಯಲಲ್ಲಿ ಬಾನಡಿಯಲ್ಲಿ ಕುಳಿತಿದ್ದರು. ಅಷ್ಟಾದರೂ ಕಾಯಿಲೆಯಾದ ಮಗುವೊಂದನ್ನು ಮಡಿಲಲ್ಲಿ ಮಲಗಿಸಿಕೊಂಡು ಉಪಚರಿಸುತ್ತಿದ್ದರು. ಮಗುವಿನ ಪ್ರೀತಿ ಹೇಳಿತೀರದು. ವರ್ಕಟಕಶೋರದಂತೆ ಅದು ಗಾಂಧೀಜಿಯನ್ನು ತಬ್ಬಿಕೊಂ ಡಿತ್ತು. ಪಕ್ಕದಲ್ಲಿಯೇ ಜೂಲು ಹುಡುಗಿಯೊಬ್ಬಳು ಕೂತಿದ್ದಳು. ಆಶ್ರಮದ ಪಕ್ಕದ ಲ್ಲಿದ್ದ ಶಾಲೆಯ ಹುಡುಗಿಯವಳು. ಕತ್ತಲು ಕವಿದಂತೆ 'ಕರುಣಾಳು ಬಾ ಬೆಳಕೆ' ಎಂಬ ಗೀತವನ್ನು ಹಾಡಲು ಹೇಳಿದರು. ದೀನಬಂಧು ಆಂಡ್ರೂಸರು ಗೀತ ಹೇಳ ತೊಡಗಿದರು. ಆಗಿನ್ನೂ ಗಾಂಧೀಜಿ ಮುದುಕರಾಗಿರಲಿಲ್ಲ. ಆದರೆ ತಪೋಜೀವನ ದಿಂದ ಮೈ ಮುದುಡಿತ್ತು. ಒಳಗಿನ ಜೀವ ಮಾತ್ರ ದಿವ್ಯತೇಜದಿಂದ ಮೆರುಗುತಿತ್ತು. ಮಗುವನ್ನೆತ್ತಿ ಆಂಡ್ರೂಸರ ಗಾನದಲ್ಲಿ ತನ್ಮಯರಾಗಿ ಕುಳಿತಿದ್ದ ಗಾಂಧಿಜಿಯವರ ಆ ದೃಶ್ಯವು ಕುರಿಯನ್ನು ಎದೆಗಪ್ಪಿಕೊಂಡ ಕ್ರಿಸ್ತನಂತಿತ್ತು. ಹಾಡು ಮುಗಿಯಿತು. ಆದರೂ ಮೆಲುದನಿಯಲ್ಲಿ ಗಾಂಧೀಜಿಯವರು ಗುಣುಗುಣಿಸುತ್ತಿದ್ದರು.

'ಬೆಳಗಾಗ ಹೊಳೆಯನ್ನದೇ ಹಿಂದೊಮ್ಮೆ ನಾನೊಲಿದು
ಈ ನಡುವೆ ಕಳೆಕೊಂಡ ದಿವ್ಯಮುಖ ನಗುತಾ'

ಶ್ರೀ ಕಿಲ್ಲೆಯವರ ಶೋಚನೀಯ ನಿಧನ

ಕೊಡಗಿನವರಿಗೆ ಚಿರ ಪರಿಚಿತರಾ ಗಿದ್ದ ಶ್ರೀ. ಕಿಲ್ಲೆಯವರು ತಾ. ೪ ರಲ್ಲಿ ಶಿವಾಧೀನರಾದರು. ದಿವಂಗತ ನಾರಾ ಯಣ ಕಿಲ್ಲೆಯವರು ದಕ್ಷಿಣ ಕನ್ನಡ ಜಿಲ್ಲೆಯ ಒಂದು ಬಂಟ ಕುಟುಂಬಕ್ಕೆ ಸೇರಿದವರು. ಅವರು ಬಾಲ್ಯದಲ್ಲಿ ವಿದ್ಯಾ ಭ್ಯಾಸವನ್ನು ಮುಗಿಸಿ ಆ ಮೇಲೆ ಮಂಗ ಳೂರಿನ ಹೈಸ್ಕೂಲ್ ವಿದ್ಯಾಭ್ಯಾಸವನ್ನು ಪೂರೈಸಿದರು.

ದಿವಂಗತ ಕಿಲ್ಲೆಯನರಿಗೆ ಸಾರ್ವಜನಿ ಕ ಸಭೆಗಳಲ್ಲಿ ಭಾಷಣ ಮಾಡುವದರಲ್ಲಿ ತುಂಬಾ ಆಸಕ್ತಿ ಇದ್ದಿತು. ಆದಕ್ಕೆ ಅನು ಕೂಲವಾಗುವಂತೆ ಅವರು ತಮ್ಮ ಜಿಲ್ಲೆ ಯ ಮುಖ್ಯ ಒಂದು ಕಲೆಯಾದ ಯೆಕ್ಷ ಗಾನದಲ್ಲಿ ಅರ್ಥ ಹೇಳುವ ಅಭ್ಯಾಸ ಮಾ ಡಿದ್ದರು. ಅದರಿಂದ ಅವರು ಸುಪ್ರಸಿದ್ಧ ವಾಗ್ಮಿಗಳಾದರು. ಜನತೆಯ ಮನೋಗ ತವನ್ನರಿತು ಅವರಿಗೆ ತಿಳಿಯುವ ರೀತಿಯ ಲ್ಲಿ ಅವರ ಮನಸ್ಸನ್ನಾಕರ್ಷಿಸುವ ರೀತಿ ಯಲ್ಲಿ ಭಾಷಣ ಮಾಡುತ್ತಿದ್ದರು.

ಮಹಾತ್ಮಾಗಾಂಧಿಯವರು ಕಾಂಗ್ರೆಸಿ ನ ನಾಯಕತ್ವವನ್ನು ವಹಿಸಿದಾಗ ಕಿಲ್ಲೆ ಯವರು ಕಾಂಗ್ರೆಸ್ಸನ್ನು ಸೇರಿದರು. ಕಾಂ ಗ್ರೆಸಿನ ಮೂಲಕ ಸೇವೆ ಮಾಡಿದರು. ಅವ ರ ಕಾಂಗ್ರೆಸ್ ನಿಷ್ಠೆಯು ಅವರ ಅಂತ್ಯದ ವ ರೆಗೂ ಅಚ್ಚಳಿಯದೆ ಉಳಿದಿತ್ತು.

ದಿವಂಗತರು ದೇಶದ ಸ್ವಾತಂತ್ರ್ಯಕ್ಕಾ ಗಿ ದುಡಿದು ಎರಡು ಚಾರಿ ಜೈಲುವಾಸನ ವನ್ನು ಅನುಭವಿಸಿದ್ದರು. ಅವರು ಕಾಂಗ್ರೆ ಸಿನಲ್ಲಿ ಸ್ಥಾನಮಾನಗಳಿಗೆ ಹಾತೊರೆಯುಲಿ ಲ್ಲ. ಕಳೆದ ಚುನಾವಣೆಯಲ್ಲಿ ಮದರಾ ಸ್ ಎಸೆಂಬ್ಲಿಗಾಗಲೀ, ಕೌನ್ಸಿಲ್ ಆಫ್ ಸ್ಟೇಟ್ಸಿಗಾಗಲೀ ಅವರಿಗೆ ಸದಸ್ಯರಾಗಿ ಹೋಗಲು ಸಾಧ್ಯವಿತ್ತು. ಆದರೆ ಅವರು ಆ ಗೌರವದ ಸ್ಥಾನವನ್ನು ತಾವು ಪಡೆಯ ಬೇಕೆಂದು ಇಚ್ಛಿಸಲಿಲ್ಲ.

ನಾರಾಯಣ ಕಿಲ್ಲೆಯವರು ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ದುಡಿದಿದ್ದರು. ಅವರು ಹಿಂದೆ "ಟೆಂಪರೆನ್ಸ್ ಲೀಗಿ"ನಲ್ಲಿ ಕೆಲಸ ಮಾಡಿದರು. ಹರಿಜನ ಸೇವಾಕಾ ರ್ಯಕ್ಕಾಗಿ ದುಡಿದರು. ಅನಂತರ ಹರಿಜನ ಸೇವಕರಾಗಿ ಹಲವು ವರ್ಷಗಳ ತನಕ ಕೆ ಲಸ ಮಾಡಿದರು. ಜಿಲ್ಲಾ ಕಾಂಗ್ರೆಸ್ ಸ ಮಿತಿಯ ಸದಸ್ಯರಾಗಿಯೂ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಸದಸ್ಯ ರಾಗಿಯೂ, ಇದ್ದು ಇತ್ತೀಚೆಗೆ ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳೂ ಆದರು. ಅವರು ಮಂಗಳೂರು ನಗರ ಸ ಭೆಯ ಸದಸ್ಯರಾಗಿ ನಗರದ ಸೇವೆಮಾಡಿ ದ್ದರು. ಭಗವಂತನು ಮೃತರ ಕೆತ್ನಕ್ಕೆ ಚಿರಶಾಂತಿಯನ್ನೀಯಲಿ!

'ಭವಭಾರತ'

ಕೃತಜ್ಞತಾ ವಂದನೆ.

ಕಳೆದ ಜೂನ್ ತಾರೀಕು ೪ ರಲ್ಲಿ ಶಿ ವಾಧೀನರಾದ ನನ್ನ ಪತಿ ಮುದ್ದಪ್ಪನವರ ನಿಧನದಿಂದ ನನಗೂ ನನ್ನ ಮಕ್ಕಳಿಗೂ ಉಂಟಾದ ದುಃಖದ ಕಾಲದಲ್ಲಿ ಖುದ್ದಾಗಿ ಬಂದು ಮತ್ತು ಸಂತಾಪ ಸೂಚನಾ ಪತ್ರ ಗಳ ಮೂಲಕವಾಗಿ ನಮ್ಮ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರಿಗೆ ನಮ್ಮ ಕೃ ತಜ್ಞತೆಯನ್ನು ಪ್ರತ್ಯೇಕ ಪ್ರತ್ಯೇಕ ಬಿಡಿದು ತಿಳಿಸುವದು ಅಸಾಧ್ಯವಾದ ಕಾರಣ ಅವರೆ ಲ್ಲರಿಗೂ ಈ ಮೂಲಕ ನಮ್ಮ ಹೃತ್ಪೂರ್ವ ಕ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ.

ಬೆಳ್ಳಿರಮೊಡು ಪುಟ್ಟಚಂಡ ಮುತ್ತಮ್ಮ-ವೀರಾಜಪೇಟೆ.

ನಗು ಮಲ್ಲಿಗೆ

ಯುದ್ಧರಂಗದಿಂದ ಓರ್ವ ಸಿಪಾಯಿಯು ಮೆಲ್ಲಮೆಲ್ಲಗೆ ಹಿಂಡಕ್ಕೆ ಸಾಗುತ್ತಿದ್ದನು.

ಆವನ ಕಮಾಂಡರನು ಅವನನ್ನು ಪ್ರಶ್ನಿಸಿದಾಗ, ನಾನು ಒಳ್ಳೆಯ ಗುಂಡುಗಾರನಲ್ಲ (2nd class shot) ವಾದುದರಿಂದ ನಾನು ಯುದ್ಧರಂಗದ ಮುಂಭಾಗದಲ್ಲಿ ನಿಂತಿಲ್ಲ ಎಂದನು.

ಕಮಾಂಡರ್:— ಹಾಗೋ, ನಿನ್ನ ಗುಂಡುಗಳು ಸರಿಯಾಗಿ ತಗಲಲು, ನಿನ್ನನ್ನು ಆದಷ್ಟು ಶತ್ರುಗಳ ಹತ್ತಿರ ನಿಲ್ಲಿಸಬೇಕಲ್ಲವೇ?

* * *

ಚರ್ಚಿಲ್ಲರವರು ಯುವಕರಾಗಿದ್ದಾಗ ತಮ್ಮ ಒಬ್ಬ ರಾಜಕೀಯ ವಿರೋಧಿಯ ಭಾಷಣವನ್ನು ಕೇಳುತ್ತ ತಮ್ಮ ತಲೆಯನ್ನು ಅಲ್ಲಾಡಿಸುತ್ತಿದ್ದರು.

ಅದನ್ನು ನೋಡಿ ಭಾಷಣ ಕರ್ತನು ನಾನು ನನ್ನ ಸ್ವಂತ ಅಭಿಪ್ರಾಯವನ್ನೆ ಸೂಚಿಸುತ್ತಿದ್ದೇನೆ

ಚರ್ಚಿಲ್:— ನಾನು ನನ್ನ ಸ್ವಂತ ತಲೆಯನ್ನೆ ಅಲ್ಲಾಡಿಸುತ್ತಿದ್ದೇನೆ!

* * *

ಓರ್ವ ಜೇಬು ಕಳ್ಳನು ಆದೇ ವೃತ್ತಿಯ ಒಬ್ಬ ತರುಣಿಯನ್ನು ಮದುವೆಯಾದನು. ಆವರಿಗೆ ಒಂದು ಮಗುವು ಹುಟ್ಟಿದಾಗ ತಮ್ಮ ಈ ಮಗುವು ಜೇಬು ಕಳ್ಳತನ ಕಸಬಿನಲ್ಲಿ ಆದೆಷ್ಟು ನಿಪುಣನಾಗುವನೆಂದು ಬಹು ಆಶೆಯಿಂದಿದ್ದರು.

ಮಗುವು ಜನಿಸಿದಾಗ ಮಗುವಿನ ಒಂದು ಕೈಯು ಮುಷ್ಟಿ ಹಿಡಿದಿದ್ದು ಬಿಡದ ಕಾರಣ ತಂದೆ ತಾಯಿಗಳು ದುಃಖಕ್ರೋಳಗಾದರು. ಪಟ್ಟಣದಲ್ಲಿಯ ದೊಡ್ಡ ಡಾಕ್ಟರರ ಹತ್ತಿರ ತೆಗೆದುಕೊಂಡು ಹೋಗಿ ಕೈಮುಷ್ಟಿಯನ್ನು ಬಿಚ್ಚಿಸಲು ಸಾಧ್ಯವಾಗದೆ ಬಂದರು.

ಆಶಾಭಂಗದಿಂದ ಅವರು ಮಗುವನ್ನು ಒಂದು ತೊಟ್ಟಿಲಲ್ಲಿ ಮಲಗಿಸಿ, ಮೇಲಿನಿಂದ ಒಂದು ದಾರದಲ್ಲಿ ಚಿನ್ನದ ಒಂದು ಉಂಗುರನನ್ನು ತೂಗಾಡಲು ಬಿಟ್ಟರು. ಮಗುವು ಅದನ್ನು ಹಿಡಿಯುವ ಪ್ರಯತ್ನದಲ್ಲಿ ತನ್ನ ಮುಷ್ಟಿಯನ್ನು ಮೆಲ್ಲಗೆ ಬಿಚ್ಚಿತು. ಮುಷ್ಟಿ ಬಿಡುವಾಗ ಕೈಯಲ್ಲಿ ಇನ್ನದ್ದಾದ ಏನು? ತಾಯಿಯ ಹೆರಿಗೆಯ ಸಮಯಕ್ಕೆ ಬಂದ ಸೂಲಗಿತ್ತಿಯ ಮದುವೆಯ ಉಂಗುರ.

ಕೆ. ಎಂ. ಪಿ.

* * *

ಆತಃ— 'ವೈಲನ್' ಟ್ರೌಜರ್, ಇಸ್ತ್ರಿನೂಡಲಿಕ್ಕೆ ಚಾರ್ಜೆಷ್ಟು ಆಗುತ್ತದೆ?

ಡೋಬಿಃ— ಒಂದು ರೂಪಾಯಿ ಸ್ವಾಮಿ.

ಆತಃ— ಹಾಗಾದರೆ ಎಂಟಾಣೆ ಕೊಡುತ್ತೇನೆ. ಒಂದು ಕಾಲನ್ನು ಮಾತ್ರ ನೂಡು. ಫೋಟೋ ತೆಗೆಯುವಾಗ ಎದುರಾಗಿ ನಿಲ್ಲದೆ 'ಸೈಡ್ ಪೋಝ್' ಕೊಡುತ್ತೇನೆ.

* * *

ದೊಡ್ಡ ಹೊಟೇಲೊಂದರಲ್ಲಿ ಊಟ ಮಾಡಿ ತನ್ನ ಬಿಲ್ಲನ್ನು ಕೊಟ್ಟು ಹೊರಡುವಾಗ ಬಾಗಿಲ ಬದಿಯಲ್ಲಿ "ಏನಾದರೂ ಮರೆವೆಯಿಂದ ಬಿಟ್ಟದ್ದೀರಾ?" ಎಂಬ ಬೋರ್ಡನ್ನು ನೋಡಿ ಗಿರಾಕಿಯು ಹೇಳಿದನು "ನೀವು ಬೋರ್ಡು ಬರೆದುದು ತಪ್ಪು ನಿಮ್ಮ ಈ ಹೊಟೇಲಿನ ಯೋಗ್ಯತೆಗೆ ಸರಿಯಾಗಬೇಕಾದರೆ "ಮರೆವೆಯಿಂದಲಾದರೂ ಏನಾದರೂ ನಿಮ್ಮಲ್ಲಿ ಉಳಿದಿದೆಯೇ?" ಎಂದು ಬರೆಯಬೇಕೆಂದನು.

* * *

"ಒಟ್ಟಾರೆ ಆತನು ನಿನ್ನ ಪ್ರೇಮ ಹೃದಯವನ್ನು ಒಡೆದು ಹಾಕಿದನು!" ಗೆಳತಿಯು ದುಃಖಿಸುತ್ತಿದ್ದ ಆಕೆಯನ್ನು ಕೇಳಿದಳು.

"ಇದೇ ಇಲ್ಲ. ಆತನು ತಂದೆಯವರೊಡನೆ ಜೂಜಾಡಿ ಅವರನ್ನೂ ದಿವಾಳಿ ಎಬ್ಬಿಸಿದನು!" ಆಕೆ ಎಂದಳು.

* * *

ಆತಃ— ನನ್ನನ್ನು ಮದುವೆಯಾಗುವೆನೆಂದು ಹೇಳಲಾರೆಯಾ?

ಆಕೆಃ— ಕೇವಲ ಕೈವಸ್ತ್ರಗಳ ಬಹುಮಾನದಿಂದಲೇ ನನ್ನನ್ನು ಪೋಷಿಸುವಂತೆ ತೋರುವದರಿಂದ ಹೆದರಿಕೆ.

ಆತಃ— ನಿನ್ನ ಜೀವನದ ಉಳಿದ ಭಾಗವಲ್ಲಿ ನಿನಗೆ ನೆಗಡಿ, ಕೆಮ್ಮು ಆಗಲಾರದೆಂದು ನಿನ್ನ ಭಾವನೆ ಏನು?

* * *

ಇನ್ಸ್‌ಪೆಕ್ಟರುಃ— ನಿಮ್ಮ ತರಗತಿಯಲ್ಲಿ ಅಸ್ವಾಭಾವಿಕವಾದ ವಿದ್ಯಾರ್ಥಿಗಳು ಇದ್ದಾರೆಯೇ?

ಅಧ್ಯಾಪಕಃ— ಇತರರಿಗಿಂಥಾ ಭಿನ್ನವಾಗಿ ಒಳ್ಳೆ ಗುಣಗಳಿರುವ ಇಬ್ಬರು ಇದ್ದಾರೆ.

* * *

ಎರಡು ಗೆಳೆಯರು ಒಬ್ಬರೊಬ್ಬರನ್ನು ಕಾಣದೆ ಬಹಳ ವರ್ಷಗಳಾಗಿದ್ದವು. ಈ ಅವಧಿಯಲ್ಲಿ ಇಬ್ಬರೂ ಮದುವೆಯಾಗಿದ್ದರು.

"ನಿನಗೆ ದೊರೆತ ಹೆಂಡತಿ ಹೇಗಿರುವಳು?" ಒಬ್ಬನು ಕೇಳಿದನು.

"ಆಕೆ ದೇವತೆ. ನಿಜವಾಗಿಯೂ ದೇವತೆ" ಇನ್ನೊಬ್ಬನೆಂದನು.

"ಗೆಳೆಯಾ, ನೀನು ನಿಜವಾಗಿಯೂ ಅದೃಷ್ಟವಂತನು. ನನ್ನ ಹೆಂಡತಿ ಇನ್ನೂ ಜೀವಂತ ಇರುವಳು" ಭಾವನ ಮನಸ್ಸಿನಿಂದ ಆತನೆಂದನು.

* * *

ಧರ್ಮ ರಹಸ್ಯ.

ಅಯ್ಯೋ, ನಶ್ವರ ಜೀವನವೇ!

= ಭರ್ತೃಹರಿಯ ವೈರಾಗ್ಯ ಶತಕದಿಂದ =

ಸೂರ್ಯನ ಉದಯಾಸ್ತಮಾನಗಳಿಂದ ದಿನದಿಂದ ದಿನಕ್ಕೆ ಆಯುಷ್ಯವು ಕ್ಷೀಣವಾಗುತ್ತದೆ. ಅನೇಕ ವ್ಯಾಪಾರ ವ್ಯವಹಾರಗಳಿಂದ ಕಾಲವು ಗತಿಸುವದು ತಿಳಿಯುವದೇ ಇಲ್ಲ. ಮರಣಗಳನ್ನು ದಿನ ನಿತ್ಯವೋ ಎಂಬಂತೆ ಕಂಡರೂ ಜನರಿಗೆ ಜ್ಞಾನೋದಯವಾಗುವದಿಲ್ಲ. ಜಗತ್ತೇ ಅಜ್ಞಾನಮಯವಾದ ಪ್ರಮೂದವೆಂಬ ಮದ್ಯವನ್ನು ಕುಡಿದು ಭ್ರಾಂತಿ ಹೊಂದಿದೆಯೊ ತಿದೆ.

ಹಿಂದೆ ನಡೆದ ರಾತ್ರಿ ಹಗಲುಗಳೇ ಈಗಲೂ ಇವೆ. ಆದರೆ ಜನರು ಮಾತ್ರ ಲಾಭೋತ್ಸುಕರಾಗಿ, ಗಡಿಬಿಡಿಯವರಾಗಿ ಗುಪ್ತವಾಗಿಯೋ, ಬಹಿರಂಗವಾಗಿಯೋ ಲಾಭಕ್ಕಾಗಿ ಕೆಲಸ ಮಾಡುತ್ತಾರೆ. ಅವರಿಗೆ ದೊರೆಯುವ ಫಲವೇನು ಹೊಸದಲ್ಲ. ಹಿಂದಿನಂತೆಯೇ ಇಂದೂ ಅವರು ದಿನ ದೂಡುತ್ತಾರೆ. ಈ ಸಂಸಾರದಲ್ಲಿ ಹಿಂದಿಗಿಂಥಾ ಉತ್ತಮ ಹಾಗೂ ಹೊಸ ಸಾಧನವನ್ನು ಪಡೆಯದಿರಲು ಲಜ್ಜೆಯೂಗುವದಿಲ್ಲವೇ?

ಸಂಸಾರ ಬಂಧನದ ನಾಶಕ್ಕಾಗಿ ಪರಮೇಶ್ವರನನ್ನು ಧ್ಯಾನಿಸಲಿಲ್ಲ. ಸ್ವರ್ಗದ ಬಾಗಿಲನ್ನು ತೆರೆಯಲು ಸಮರ್ಥವಾದ ಧರ್ಮಾಚರಣೆಯನ್ನೂ ಮಾಡಲಿಲ್ಲ. ಮೂತೆಯ ತಾರುಣ್ಯವನಸ್ಕೆ ಕುತಾರ ಪ್ರಾಯವಾದುದು ಮಾತ್ರ ನನ್ನ ಜನ್ಮದ ಫಲವಾಯಿತು.

ಪ್ರತಿ ವಾದಿಗಳನ್ನು ಜೈಸಬಲ್ಲ ವಿದ್ಯೆ ಕಲಿಯಲಿಲ್ಲ. ರಣರಂಗದಲ್ಲಿಳಿದು ಕೀರ್ತಿತರಲಾಗಲಿಲ್ಲ ಕಾಂತೆಯೊಡನೆ ಬೆಳದಿಂಗಳಲ್ಲಿ ವಿಹರಿಸಿ ಸುಖಾನುಭವನನ್ನೂ ಪಡೆಯಲಿಲ್ಲ. ನನ್ನ ತಾರುಣ್ಯವು ಜನರಿಲ್ಲದ ಮನೆಯಲ್ಲಿಟ್ಟ ದೀಪದಂತಾಯಿತು.

ಉತ್ತಮ ವಿದ್ಯಾಭ್ಯಾಸವಾಗಲಿಲ್ಲ. ಧನವನ್ನೂ ಸಂಪಾದಿಸಲಿಲ್ಲ. ತಾಯಿ ತಂದೆಯವರ ಶುಶ್ರೂಷೆಯನ್ನೂ ಮನಸ್ಸಿಟ್ಟು ಮಾಡಲಿಲ್ಲ. ನನ್ನ ಕಾಲವೆಲ್ಲ ಅಪನೂ ನಕರವಾಗಿ ಪರಾನ್ನಕ್ಕಾಗಿ ಕಾಗೆಯಂತೆ ಕಳೆಯಿತು. ಧರ್ಮ, ಅರ್ಥ, ಕಾಮಗಳ ಸಾಧನೆಯಾದರೂ ಆಗಲಿಲ್ಲ.

ಯಾವ ತಾಯಿ ತಂದೆಯರಿಂದ ನನ್ನ ಜನನವಾಯಿತೋ ಅವರೂ ಕೆಲಕಾಲ ಇದ್ದು ನನ್ನನ್ನು ಬಿಟ್ಟು ತೆರಳಿದರು. ಯಾರೊಡನೆ ನಾವು ಬೆಳೆದೆವೋ ಆವರೂ ಕೂಡ ಈಗ ಇಲ್ಲ. ಮುದುಕರಾಗಿ ನಾವೂ ಬೀಳುವ ಕಾಲ ಬಂತು. ಹೊಳೆಯ ದಂಡೆಯ ಮರಗಳಂತೆ ನನ್ನ ಪಾಡು.

ನೂರು ವರ್ಷ ಮನುಜನಿಗೆ ಆಯುಷ್ಯ. ಅರ್ಧ ಅಂಶವು ರಾತ್ರಿ ನಿದ್ರೆ, ವಿಶ್ರಾಂತಿಗಳಿಗಾಗಿ ಹೋದವು. ಉಳಿದುದು ಏನತ್ತು. ಅದರ ಅರ್ಧವು ಬಾಲತ್ವ ಹಾಗೂ ವೃದ್ಧಾಪ್ಯಕ್ಕಾಗಿ ಸಂದವು. ಮತ್ತಿರುವ ಸರಿಯೂದ ೨೫ ವರ್ಷಗಳನ್ನು ರೋಗ, ವಿರಹ, ದುಃಖ, ತಾಪಪ್ರಯ, ಜವಾಬ್ದಾರಿಕೆಗಳಿಂದ ಕಳೆಯಬೇಕಾಗಿದೆ. ಚಂಚಲವಾದ ಈ ಜೀವನದಲ್ಲಿ ಸುಖ ಯಾವಾಗ?

ಸ್ವಲ್ಪ ಕಾಲ ಮಗುವಾಗಿ, ಮತ್ತೆ ಶೃಂಗಾರಿ ತರುಣನಾಗಿ, ಬಳಿಕ ಧನಹೀನನಾಗಿ, ಮತ್ತೊಂದು ಕ್ಷಣ ಧನಿಕನಾಗಿ, ಆ ಮೇಲೆ ಜರಾ ಪೀಡಿತನಾಗಿ, ಮನುಜನು ವೇಷಧಾರಿ ನಟನಾಗಿ ಈ ಸಂಸಾರ ನಾಟಕದಲ್ಲಿ ನಟಿಸಿ ಕಡೆಗೆ ಯಮನಗರವೆಂಬ ಪರದೆಯೆಡೆ ಮರೆಯಾಗುತ್ತಾನೆ. ಅಯ್ಯೋ ಜೀವನವೆ!

INSURE WITH
OR REPRESENT
JNDIA'S OLDEST LIFE OFFICE.
THE BOMBAY MUTUAL LIFE ASSURANCE SOCIETY, LTD.
BUSINESS IN FORCE OVER 40 CRORES
ASSETS .... OVER 12 CRORES
Applications from energetic youngmen are invited for representation.
25-16
Head Office; BOMBAY.
Branch: 172. 3. Narasimharaja Road. BANGALORE 2.

ಸಂಗೀತಗಾರ ಕತ್ತೆ.

ಒಂದು ಪಟ್ಟಣದಲ್ಲಿ ಅಹಂಕಾರಿ ಎಂಬ ಹೆಸರಿನ ಒಂದು ಕತ್ತೆ ಇತ್ತು. ಹಗಲು ಹೊತ್ತು ತನ್ನ ಯಜಮಾನನಾದ ಅಗಸನು ಹೊರಿಸಿದ ಬಟ್ಟೆಗಳನ್ನು ಹೊರುವುದು ಆ ದರ ಕೆಲಸವಾಗಿತ್ತು. ರಾತ್ರೆ ಅದಕ್ಕೆ ಪೂರ್ಣ ಬಿಡುವು ಮತ್ತು ಸ್ವಾತಂತ್ರ್ಯ. ಬೇಕಾದ ಕಡೆಯಲ್ಲೆಲ್ಲಾ ಅದು ರಾತ್ರೆ ಸುತ್ತಾಡುತಿತ್ತು. ಒಂದು ದಿನ ರಾತ್ರೆ ಹೀಗೆ ಸುತ್ತು ತಿರುಗುವಾಗ ಗುಳ್ಳೆನರಿ ಯೊಂದನ್ನು ಅದು ಕಂಡಿತು. ಅವರೊಳಗೆ ಮೊತುಕತೆಯಾಗಿ ಕಡೆಗೆ ಇಬ್ಬರೂ ಪರಸ್ಪರ ಮಿತ್ರರಾದರು. ಇಬ್ಬರೂ ಜೊತೆ ಸೇರಿ ಸೌತೆಕಾಯಿ ತೋಟವೊಂದನ್ನು ಬೇಲಿ ಮುರಿದು ಬೇಕಾದಷ್ಟನ್ನು ತಿಂದವು. ನಂತರ ಬೆಳಗಾಗುವ ಹೊತ್ತಿಗೆ ಇಬ್ಬರೂ ತಮ್ಮ ತಮ್ಮ ಮನೆಗೆ ಹೊರಟವು. ಹೀಗೆ ಕೆಲವು ದಿನಗಳು ಕಳೆದವು. ಒಂದು ದಿನ ತಾನೇ ತಾನೆಂಬ ಅಹಂಕಾರಿಯಾದ ಕತ್ತೆಯು ಸೌತೆಕಾಯಿ ತೋಟದಲ್ಲಿ ಹಾಗೆ ಒರಗಿ ನಿಂತು ನರಿಗೆ ಹೇಳಿತು. "ಗೆಳೆಯಾ, ಈ ರಾತ್ರೆ ಬಹಳ ಸುಂದರವಾಗಿದೆ. ನನಗೆ ಹಾಡಬೇಕೆನಿಸುತ್ತದೆ. ನನ್ನ ಹಾಡು ಹಾಸ್ಯಪ್ರದವಾಗಿರಬೇಕೆ? ಭಾವಪ್ರಧಾನವಾಗಿರಬೇಕೆ ಹೇಳು?"

"ಹಾಡುವುದು ಬೇಡ ಗೆಳೆಯಾ. ಆದರಿಂದ ನಮಗೆ ತೊಂದರೆ ಬಂದೀತು. ಕದಿಯುವ ಕೆಲಸದವರು ಹಾಡುವುದು ಎಂದೂ ಹಿತವಲ್ಲ. ಕಳ್ಳತನ ಮಾಡುವವರೂ ಪ್ರೇಮಿಗಳೂ ಯಾವಾಗಲೂ ಶಬ್ದ ಮಾಡಬಾರದು. ಹೆಚ್ಚು ನಿದ್ರೆಯವರು ಕಂಬಳಿ ಕದಿಯುವುದೂ, ಅಂಗವಿಹೀನರಿಗೆ ಸೌಷ್ಟವ ಆಹಾರ ಕೊಡುವುದೂ, ಕೆಮ್ಮಲು ಇರುವವನು ಕದಿಯಲು ಹೋಗುವುದೂ ಸಲ್ಲದು. ಜೊತೆಗೆ ನಿನ್ನ ಹಾಡುಗಾರಿಕೆಯು ತೃಪ್ತಿಕರವೇನಲ್ಲ. ಶಂಕಧ್ವನಿಯಂತೆ ಕೇಳುವುದರಿಂದ ರೈತರು ಎಚ್ಚೆತ್ತು ಓಡಿಬಂದು ನಿನ್ನನ್ನು ಕಟ್ಟಿ, ಹೊಡೆದು ಕೊಂದು ಹಾಕುವರು. ಆದ್ದರಿಂದ ಮೌನವಾಗಿ ತಿನ್ನು" ಎಂದು ನರಿಯು ಹೇಳಿತು

"ನಿನ್ನ ಮಾತುಗಳನ್ನು ಕೇಳುವಾಗಲೇ ನೀನು ಕಾಡಿನವನು ಎಂದು ತಿಳಿಯುತ್ತದೆ. ನಿನಗೆ ಸಂಗೀತದ ಅಭಿರುಚಿ ಇಲ್ಲ. ಮೆಲುಧ್ವನಿಯಲ್ಲಿ ಕಿವಿಯ ಹತ್ತಿರ ಹೇಳುವ ಮಾತು ಅಮೃತದಂಥಾ ಸಂಗೀತ, ಬೆಳದಿಂಗಳಿನ ರಾತ್ರೆ ಇವು ತನಗೆ ಪ್ರಿಯವಾದದು ಹತ್ತಿರ ಇರುವಾಗ ಸ್ವರ್ಗಸಮಾನ" ಎಂದು ಕತ್ತೆ ಹೇಳಿತು.

"ನಿಜವಿರಬಹುದು" ನರಿಯು ಹೇಳತೊಡಗಿತು. "ಆದರೆ ನಿನ್ನ ಕೂಗು ಕಠಿಣ. ನೀನು ಹಾಡಲು ಪ್ರಾರಂಭಿಸಿದರೆ ಮತ್ತೆ ತೀರಿತು"

"ಅಯ್ಯೋ ತಿಳಿಗೇಡಿ ನರಿಯೇ. ನನಗೆ ಶಾಸ್ತ್ರೀಯ ಹಾಡುಗಾರಿಕೆ ಬರುವುದಿಲ್ಲವೆಂದು ತಿಳಿದೆಯಾ. ಸ್ವಲ್ಪ ವರ್ಣನೆಯನ್ನು ಕೇಳು. ಏಳು ಸ್ವರಗಳು, ಮೂರು ಸರಳಿಗಳು ಈ ಇಪ್ಪತ್ತೊಂದು ಸ್ವರಮೇಳವೆನಿಸುತ್ತವೆ. ನಲುವತ್ತೊಂಭತ್ತು ಶ್ರುತಿಗಳೂ, ಮೂರು ಚರಣಗಳೂ ಮತ್ತೆ ಮೂರು ಯತಿಗಳು ಉತ್ತಮ ಸಂಗೀತಕ್ಕಿರಬೇಕು. ಭೂಲೋಕದಲ್ಲಾಗಲೀ, ಸ್ವರ್ಗದಲ್ಲಾಗಲೀ ಸಂಗೀತಕ್ಕಿಂಥಾ ಮಿಗಿಲಾದುದಿಲ್ಲ ಪಿಶಾಚಿಯೇ ಇರಲಿ, ಅದು ಹಾಡು ತಿದ್ದರೆ ಅದರಿಂದ - ಮನುಷ್ಯನ ಮೂತಿರಲಿ ದೇವದೇವನಿಗೂ ತೃಪ್ತಿ ಇದೆ. ಈ ವಿವರಣೆ ಸಾಕೆ? ನಾನು ವಿದ್ಯಾವಂತನಲ್ಲವೆಂದು ಭಾವಿಸಿದೆಯಾ? ಇನ್ನು ನನ್ನ ಸಂಗೀತವನ್ನು ಕರ್ಕಶವೆಂದು ಹೇಗೆ ಹೇಳುವಿ?" ಎಂದು ಕತ್ತೆಯು ಹೇಳಿತು.

"ಆಗಲಿ, ನೀನು ನಿನ್ನ ಹೃದಯ ತೃಪ್ತಿಯಾಗುವಂತೆ ಹಾಡು. ನಾನು ಹೊರಗೆ ನಿಂತು ರೈತರು ಬಂದಾರೋ ಎಂದು ನೋಡುತ್ತಿರುವೆನು" ಎಂದು ಹೇಳಿ ನರಿಯು ಹೊರಗೆ ಹೋಯಿತು.

ಕತ್ತೆಯು ತನ್ನ ಕತ್ತನ್ನು ಮೇಲಕೆತ್ತಿತು. ತನ್ನ ವಿಚಿತ್ರ ಸಂಗೀತ ಪ್ರಾರಂಭಿಸಿತು. ಈ ಕೂಗಿನಿಂದ ಎಚ್ಚರಗೊಂಡ ರೈತರು ಎಚ್ಚೆತ್ತು, ಹಲ್ಲು ಕಡಿಯುತ್ತಾ ದೊಣ್ಣೆ, ಕೋಲು ಹಿಡಿದು ಓಡಿ ಬಂದು ಕತ್ತೆಯನ್ನು ಸುತ್ತುಗಟ್ಟಿ ಬಡೆದರು. ಕತ್ತೆಯು ನೆಲದಲ್ಲಿ ಬಿದ್ದಿತು. ರೈತರು ಅದರ ಕುತ್ತಿಗೆಗೆ ಒಂದು ಒರಳನ್ನು ಕಟ್ಟಿ ಹೊರಟು ಹೋದರು. ಕೆಲವು ಸಮಯದ ನಂತರ ಕತ್ತೆಗಳ ಸ್ವಭಾವದಂತೆ ಅಹಂಕಾರಿಯು ತನ್ನ ನೋವನ್ನು ಮರೆತು ಎದ್ದು ನಿಂತಿತು. ಏಕೆಂದರೆ ನಾಯಿ, ಕತ್ತೆ, ಕುದುರೆಗಳು ಹೊಡೆದ ನೋವನ್ನು ಅವು ಬೇಗ ಮರೆತುಬಿಡುವುವು. ಆದರಂತೆ ಎದ್ದು ನಿಂತ ಅಹಂಕಾರಿಯು ಒರಳನೊಂದಿಗೆ ಓಡಿಹೋಗಲು ಯತ್ನಿಸಿತು. ಆಗ ಸುರಕ್ಷಿತ ದೂರದಲ್ಲಿ ನಿಂತು ನೋಡುತಿದ್ದ ನರಿಯು ಹೇಳತೊಡಗಿತು.

"ಗೆಳೆಯಾ ಚೆನ್ನಾಗಿ ಹಾಡಿದೆ. ನಾನು ಹೇಳಿದ ಹಾಗೆ ಸುಮ್ಮನಿದ್ದಿದ್ದರೆ ನಿನಗೇನು ದೊರೆಯುತಿತ್ತು? ಆದರೆ ಈಗ ನಿನಗೆ ಎಂಥಾ ಕುತ್ತಿಗೆ ಸರ! ನಿನ್ನ ಸಂಗೀತಕ್ಕೆ ಯೋಗ್ಯ ಮೆಡಲುಗಳು ದೊರೆತವು." ಎಂದಿತು.

ಅದೇ ರೀತಿಯಲ್ಲಿ ನಾನು ನಿನಗೆ ಬುದ್ಧಿವಾದ ಹೇಳಿದರೂ ನೀನು ಕೇಳಲಿಲ್ಲ. ಆದ್ದರಿಂದ ಈಗ ತೊಂದರೆಗೊಳಗಾಗಿರುವೆ ಎಂದು ಚಿನ್ನ ದೊರೆತ ಬ್ರಾಹ್ಮಣನು ಹೇಳಿದನು.

ಆಗ ತಲೆಗೆ ಚಕ್ರತಾಗುತ್ತಿರುವ ಬ್ರಾಹ್ಮಣನು "ಗೆಳೆಯಾ, ನೀನು ಹೇಳುವದು ನಿಜ. ಏಕೆಂದರೆ ಬುದ್ಧಿ ಇಲ್ಲದೆ ಗೆಳೆಯನ ಹಿತವಚನಗಳನ್ನು ಕೇಳದವರು ಮಂದಬುದ್ಧಿಯ ನೆಯಿಗೆಯವನಂತೆ ತನ್ನ ಅಂತ್ಯವನ್ನು ಕಾಣುವರು" ಎಂದನು. 'ಅದು ಹೇಗೆ' ಎಂದು ಚಿನ್ನ ದೊರೆತ ಬ್ರಾಹ್ಮಣನು ಕೇಳಲು ಚಕ್ರ ಹೊತ್ತ ಬ್ರಾಹ್ಮಣನು ಸೋಮೂರಿಯಾದ ನೆಯಿಗೆಯವನ ಕತೆಯನ್ನು ಮುಂದಿನ ವಾರ ಹೇಳುವನು.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಸಮೂಹದ ಉದ್ಘಾಟನೋತ್ಸವ.

ಮಡಿಕೇರಿ ಸೆಂಟ್ರಲ್ ಹೈಸ್ಕೂಲ್ ಶಾಲಾ ಸಮೂಹದ ಉದ್ಘಾಟನೋತ್ಸವವು ಮಾನ್ಯ ಗೃಹಮಂತ್ರಿಯವರಿಂದ ಜುಲೈ ೨ ರಲ್ಲಿ ನೆರವೇರಿಸಲ್ಪಟ್ಟಿತು. ಮಾನ್ಯ ಮುಖ್ಯ ಮಂತ್ರಿಯವರು ಅಧ್ಯಕ್ಷತೆಯನ್ನು ವಹಿಸಿದ್ದರು. ಗೃಹ ಮಂತ್ರಿಗಳು ರಾಷ್ಟ್ರೀಯ ಬಾಲ ಸೈನ್ಯದವರು ಪ್ರದರ್ಶಿಸಿದ ಗೌರವಯುಕ್ತ ವಂದನೆಯನ್ನು ಸ್ವೀಕರಿಸಿ ದಳವನ್ನು ಪರಿಶೀಲಿಸಿದರು. ಸೆಂಟ್ರಲ್ ಹೈಸ್ಕೂಲ್ ಪ್ರಧಾನಾಧ್ಯಾಪಕರಾದ ಶ್ರೀ. ಪಿ ಎ. ಪೂವಯ್ಯನವರು ಅಥಿತಿಗಳನ್ನು ಆದರದಿಂದ ಸ್ವಾಗತಿಸಿದರು. ಗೃಹ ಮಂತ್ರಿಗಳು ಉದ್ಘಾಟನೆಯ ಸಮಾರಂಭವನ್ನು ಮಾಡುತ್ತಾ ವಿದ್ಯಾರ್ಥಿಗಳು ಜಗತ್ತಿನ ನಾನಾ ಸಾಮಾನ್ಯ ವಿಷಯಗಳ ಬಗ್ಗೆ ಸಾತಪ್ಪು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕೆಂದೂ, ಸಮಾಜಸೇವೆಯನ್ನು ಮಾಡಿ ಗ್ರಾಮಾಂತರ ಜೀವಿಗಳ ಸುಖದುಃಖದಲ್ಲಿ ಭಾಗವಹಿಸಿ ಅವರಿಗೆ ಸಾಂಸ್ಕೃತಿಕ ಜೀವನವನ್ನು ತಿಳಿಸಬೇಕೆಂದೂ ಕೈ ಕೆಲಸದ ಮಹತ್ವವನ್ನು ಸಕಲ ವಿದ್ಯಾರ್ಥಿಗಳೂ ಅರಿಯಬೇಕೆಂದೂ, ಭಾಷಣ ಮಾಡಿದರು. ಮುಖ್ಯ ಮಂತ್ರಿಗಳು ಅಧ್ಯಕ್ಷಪೀಠದಿಂದ ಮಾತಾಡುತ್ತಾ ಸರಕಾರದ ನೌಕರಿ ಎಲ್ಲಾ ವಿದ್ಯಾವಂತ ಯುವಕರಿಗೆ ಇನ್ನು ಮುಂದೆ ಸಿಗಲಾರದೆಂದೂ, ವಿದ್ಯಾವಂತ ಯುವಕರು ಗ್ರಾಮಾಂತರಗಳಲ್ಲಿ ನೆಲೆಸಿ ನಾಡಿನ ಕೃಷಿ, ಕೈಗಾರಿಕೆ, ವ್ಯಾಪಾರಗಳನ್ನು ಅಭಿವೃದ್ಧಿಪಡಿಸಿಕೊಂಡು ರಾಷ್ಟ್ರದ ಅಭ್ಯುದಯವನ್ನು ಸಾಧಿಸಬೇಕೆಂದೂ, ಇಂಗ್ಲೆಂಡ್, ಅಮೇರಿಕಾ ಮುಂತಾದ ರಾಷ್ಟ್ರಗಳಲ್ಲಿ ಔದ್ಯೋಗಿಕ ಕ್ರಾಂತಿಯಾದ ತರುವಾಯ ಆ ರಾಷ್ಟ್ರಗಳ ಜನರು ಕೈಗಾರಿಕೆ ವಾಣಿಜ್ಯ ಮುಂತಾದುವುಗಳಿಗೆ ಹೆಚ್ಚಿನ ಪ್ರೋತ್ಸಾಹವಿತ್ತುದರಿಂದಲೇ ಆ ರಾಷ್ಟ್ರಗಳು ಉನ್ನತಿಯ ಶಿಖರಕ್ಕೆ ಏರಿವೆ ಎಂದೂ ನುಡಿದರು. ವಿಶ್ವವಿದ್ಯಾನಿಲಯದ ತರಗತಿಗಳಿಗೆ ಪ್ರವೇಶಿಸಬೇಕಾದರೆ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾದರೆ ಮಾತ್ರ ಇನ್ನು ಪ್ರವೇಶ ಸಿಗಬಹುದೆಂದೂ ಆದ್ದರಿಂದ ಪ್ರತಿಯೊಬ್ಬ ವಿದ್ಯಾರ್ಥಿ ವಿದ್ಯಾರ್ಥಿನಿಯೂ ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಗೊಳ್ಳಲು ಸಾಧಿಸಬೇಕೆಂದೂ ಬೋಧಿಸಿದರು ಮಾತ್ರವಲ್ಲದೆ ಇಂದಿನ ಸಮಾಜದಲ್ಲಿ ಮೂರ್ಖರಿಗೆ ಢಾಂಬಿಕರಿಗೆ ಇತರರನ್ನು ದೂಷಿಸುವವರಿಗೆ ಸ್ಥಳವಿಲ್ಲವಾದುದರಿಂದ ವಿದ್ಯಾರ್ಥಿಗಳು ಉತ್ತಮವಾದ ನಡತೆ ಶಿಲ ವಿನಯಗಳನ್ನು ಗಳಿಸಿ ನಾಡಿನ ಕೀರ್ತಿಯನ್ನು ಎಲ್ಲೆಡೆಗಳಲ್ಲೂ ಪಸರಿಸಬೇಕೆಂದು ಭಾಷಣ ಮಾಡಿದರು. ವಂದನಾರ್ಪಣೆಯ ನಂತರ ರಾಷ್ಟ್ರಗೀತೆ ಮತ್ತು ಜಯಕಾರಗಳೊಡನೆ ಸಭೆ ಮುಕ್ತಾಯಗೊಂಡಿತು.

ಪ್ರಕಟಣೆ.

ಉತ್ತಮ ತರದ ಆರಿಸಿದ ಎರಡು ವರ್ಷದ ಕಿತ್ತಳೆ ಗಿಡಗಳು ಕೊಡಗು ವ್ಯವಸಾಯ ಇಲಾಖೆಯ ಒಡ್ಡರ ಪೊಟ್ಟೆಯಲ್ಲಿರುವ ಕಿತ್ತಳೆ ಪರೀಕ್ಷಾಕ್ಷೇತ್ರದಲ್ಲಿ ನೂರಕ್ಕೆ ರೂ. 20 ರ ದರದಲ್ಲಿ ಮೂರಾಟಕ್ಕೆ ತಯಾರಾಗಿರುವುದು. ಬೇಕಾಗದವರು ಆ ರೆಂಜ್ ರಿಸರ್ವ್ ಆಫೀಸರು, ಚೆಟ್ಟಳ್ಳಿ ಪೋಸ್ಟು, ಇವರಿಗೆ ಬರಕೊಳ್ಳಬಹುದು.

Specialists in Tailoring! Prompt Service!!

FOR **English Felt Hats,**

Wedding Suits, Ladies Over Coats

AND

Latest Designs in Wollen Suitings

— CALL ON —

25-21 **PATTU BROTHERS,**

OPP.— **Town Hall, MYSORE.**

THE CANARA BANKING CORPORATION LIMITED.

ದಿ ಕೆನರಾ ಬ್ಯಾಂಕಿಂಗ್ ಕೋರ್ಪೊರೇಶನ್ ಲಿಮಿಟೆಡ್.

ಸ್ಥಾಪನೆ 1906] [ಪ್ರಧಾನ ಕಾರ್ಯಾಲಯ: ಉಡುಪಿ (ದ. ಭಾರತ)

ಚಿಕ್ಕ ವಾಯಿದೆಯ ಠೇವಣಾತಿಗಳು:

3 ರಿಂದ 6 ತಿಂಗಳುಗಳ ವರೆಗೆ— ಸಾಲಿಯೂನ ಶೇಕಡ 3

7 ರಿಂದ 12 ತಿಂಗಳುಗಳ ವರೆಗೆ—ಸಾಲಿಯೂನ ಶೇಕಡ 3¼

ಪಂಚವಾರ್ಷಿಕ ಸುವರ್ಣ ಠೇವಣಾತಿಗಳು— ,, ,, 4

—: ಕೊಡಗು ಸಂಸ್ಥಾನದಲ್ಲಿ ನಮ್ಮ ಶಾಖೆಗಳು :—

ಮಡಿಕೇರಿ, ವೀರಾಜಪೇಟೆ, ಪೊನ್ನಂಪೇಟೆ ಮತ್ತು ಸೋಮವಾರಪೇಟೆ.

॥ ಸಾಹಿತ್ಯ ಪರಿಚಯ ॥

ಲೇ:—ಕುಮೂರಿ ಡಿ. ಎಸ್. ಸರೋಜಿನಿ, ಮಡಿಕೇರಿ.

ಸಾಹಿತ್ಯವು ಪ್ರಪಂಚದಲ್ಲಿ ಎಲ್ಲಾ ಕಲೆಗಳಿಗಿಂತಲೂ ಅತ್ಯುತ್ತಮವಾದ ಕಲೆ ಎನ್ನಿಸಿಕೊಂಡಿದೆ. ಈ ಅಮೋಘವಾದ ಕಲೆಯ ಪರಿಚಯ ಪ್ರತಿಯೊಬ್ಬ ಮಾನವನಿಗೂ ಇರಬೇಕು. ಇದ್ದೇ ಇರುತ್ತದೆ. ಸಾಹಿತ್ಯವು ಶಕಾಲದ ವೈಭವವನ್ನೂ ಜನಜೀವನದ ಾಧ್ಯವನ್ನೂ ಇತಿಹಾಸ ಪ್ರಸಿದ್ಧತೆಯ ಪ್ರತಿಬಿಂಬಿಸಿಟ್ಟಿರುವ ಕೈಗನ್ನಡಿ ಇದ್ದಂತೆ. ಪುರಾತನ ಇತಿಹಾಸವನ್ನೂ ನಾಗರಿಕತೆಯನ್ನೂ ಅಚ್ಚಳಿಯದಂತೆ ಕೃತಿಗೈದಿಟ್ಟಿರುವ ಅಮರ ಕಲಾಕೃತಿ, ಸಾಹಿತ್ಯ.

ಆಯಾಯ ಕಾಲದ ಸಮಾಜಕಲಾ ಸಾಹಿತ್ಯಕ್ಕೂ ನಿಕಟ ಸಂಬಂಧವಿದ್ದೇ ಇರುತ್ತದೆ. ಸಮಾಜದಲ್ಲಿ ಧರ್ಮಾಧರ್ಮಗಳು ಮಿಲನವಾಗಿಯೇ ಮುನ್ನಡೆದಿವೆ. ಸಾಹಿತ್ಯವೂ ಆಯಾ ರೀತಿಯಲ್ಲಿ ಸಾಗಿದೆ. ಅದಕ್ಕೆ ಯಾವ ಪಕ್ಷಪಾತವೂ ಇಲ್ಲ. ಧರ್ಮವನ್ನು ಎತ್ತಿ ಹಿಡಿದು ತೋರಿಸಿ ಜನಜೀವನಕ್ಕೆ ಜ್ಞಾನದ ಬೆಳಕನ್ನೀಯಬೇಕೆಂದೂ ಅದೇ ರೀತಿ ಅಧರ್ಮವನ್ನೂ ಎತ್ತಿ ತೋರಿಸಿ ಅನರಿಂದಾಗುವ ಹಾನಿಯನ್ನು ತಡೆಗಟ್ಟಿ ಮಾರ್ಗ ದರ್ಶಕನಾಗಬೇಕೆಂದೂ ಅದರ ಉದ್ದಿಶ್ಯ. ಸಾಹಿತ್ಯವು ಕೆಸರಿನಲ್ಲಿರುವ ಕಮಲದಂತೆ.

ಸಾಹಿತ್ಯವು ಸಮಾಜದ ಲೋಪದೋಷಗಳನ್ನೆತ್ತಿ ತೋರಿಸಬೇಕು. ಆದರೆ ಪ್ರಚೋದಕವಾಗಿರಬಾರದು. ಇಂದು ಸಾಹಿತ್ಯ ರಾಜಕೀಯ, ಆರ್ಥಿಕ, ಸ್ತ್ರೀ, ವೇಶ್ಯಾ, ಬಡವ–ಬಲ್ಲಿದ ತಾರತಮ್ಯ ಮೊದಲಾದ ಇಂದಿನ ಸಮಾಜದಲ್ಲಿ ನಿತ್ಯ ತೊಡಕಾಗಿರುವ ಸಮಸ್ಯೆಗಳ ಮೇಲೆ ತನ್ನ ದೃಷ್ಟಿಯನ್ನು ಬೀರಿದೆ. ಆದರೆ ಹೆಚ್ಚಿನ ಮಟ್ಟಿಗೆ ಈ ಸಮಸ್ಯೆಗಳ ಮೇಲೆ ರಚಿತವಾಗಿರುವ ಕೃತಿಗಳು ಪ್ರಚೋದಕವಾಗಿರುವುದು ಶೋಚನೀಯವಾಗಿದೆ. ಎಂಥಾ ಸಮಸ್ಯೆಯೇ ಆಗಲಿ ಅದರ ದೃಷ್ಟಿಕೋನ ಮತ್ತು ಅದರಿಂದ ಜನತೆಗೆ ಆಗತಕ್ಕಂಥಾ ಪರಿಣಾಮದ ಮೇಲೆ ಸಾಹಿತ್ಯದ ಫಲಾಫಲತೆ ಅವಲಂಬಿಸಿಕೊಂಡಿದೆ.

ಸಾಹಿತ್ಯವು ವಾಸ್ತವಿಕವಾಗದಿದ್ದರೆ ಅದು ಅಮರ ಕೃತಿ ಎನಿಸದು ಕೇವಲ ಭಾವನಾವರ್ಣನೆಯಿಂದ ಯಾವ ಪ್ರಯೋಜನವೂ ಒದುಗರ ಮೇಲೆ ಆಗಲಾರದು. ಅಂದರೆ ಭಾವನಾವರ್ಣನೆಯೇ ಬೇಡವೆಂದಲ್ಲ. ಅದು ಸಂಧರ್ಭಾನುಸಾರ ಇತಿಮಿತಿಯಾಗಿರಬೇಕು. ಸಾಹಿತ್ಯದಲ್ಲಿ ನಿತ್ಯಜೀವನದ ಸಮಸ್ಯೆಗಳಿಗೆ ಹೆಚ್ಚು ಪ್ರಾಧಾನ್ಯವಿರಬೇಕು. ಅಂದರೆ ನಿತ್ಯ ಜೀವನದಲ್ಲಿರುವ ತೊಡಕುಗಳನ್ನು ಪರಿಹಾರರೂಪದೊಡನೆ ಜನತೆಯ ಮುಂದಿಡಬೇಕು. ಸಾಹಿತ್ಯದಲ್ಲೇ ಇವನ್ನು ಹೋಗಲಾಡಿಸಲು ಸಾಧ್ಯ. ಇದರಿಂದ ಸಮಾಜಕ್ಕೂ ಸಾಹಿತ್ಯಕಲೆಗೂ ನಿಕಟ ಸಂಬಂಧ ಏರ್ಪಡುವುದು ಮಾತ್ರವಲ್ಲದೆ, ಅಂದಿನ ಜನತೆಯ ನಾಗರೀಕತೆ ವೈಭವೇತ್ಯಾದಿಗಳನ್ನು ಶಾಶ್ವತವಾಗಿ ಗಳಿಸಿ–ಉಳಿಸಿಕೊಡುವುದು. ಸಾಹಿತ್ಯವು ಜನಾನುರಾಗ ಗಳಿಸಲು ಕೃತಿಗಳಲ್ಲಿ ಸಜೀವ ಪಾತ್ರ ರಚನೆ ಇರಬೇಕು.

ಸಾಹಿತ್ಯ ಕಲೆಯಿಂದ ಮಾನವನ ಜೀವಿತಕ್ಕೆ ಬಹಳ ಉಪಯೋಗ ಇದೆ. ಸಾಹಿತ್ಯ ಕಲಾಭ್ಯಾಸದಿಂದ ಕೇವಲ ಸಾಹಿತ್ಯ ಕಲೆಯ ಅಭಿವೃದ್ಧಿ ಮಾತ್ರವಲ್ಲ, ಭಾಷಣ ಕಲೆಯ ಅಭಿವೃದ್ಧಿಯೂ ಆಗುತ್ತದೆ. ಒಬ್ಬ ಸಾಹಿತಿ ಅಥವಾ ಪ್ರಗತಿಶೀಲ ಲೇಖಕರು ಕೇವಲ ಲೇಖಕರಾಗಿರದೆ. ಪ್ರಚಂಡ ಭಾಷಣಕಾರರೂ ಆಗಿರುತ್ತಾರೆ. ಸಾಹಿತ್ಯವು ಇತರ ಕಲೆಗಳ ಏಳಿಗೆಗೆ ಸಹಾಯವಾಗುತ್ತದೆ. ಸಾಹಿತ್ಯೇತರ ಕಲೆಗಳ ಅಭ್ಯಾಸ ಕ್ರಮಗಳನ್ನು ತಿಳಿಸಲು ಗುರುವಿನೋಪಾದಿಯಲ್ಲಿ ಸಹಾಯಕವಾಗಿದೆ. ಸಾಹಿತ್ಯದಿಂದ ಕೇವಲ ಸಾಹಿತ್ಯಸೇವೆ ಮಾತ್ರವಲ್ಲ, ದೇಶಸೇವೆ ಕೂಡ ಸಾಗುತ್ತದೆ. ಭಾರತ ಪೂಜ್ಯಪಿತ ಗಾಂಧೀಜಿಯವರು ಅಸ್ಪೃಶ್ಯತೆಯ ನಿವಾರಣೆಗಾಗಿ ಹಲವಾರು ಕಡೆ ಮಹಾಸಭೆಗಳಲ್ಲಿ ಪ್ರಚಂಡ ಭಾಷಣ ಮಾಡಿ ಕಾರ್ಯತಃ ಮಾಡಿ ತೋರಿಸಿಯೂ ಸಾಧ್ಯವಾಗದ ಕಾರ್ಯವನ್ನು ತಮ್ಮ ಅಮೋಘವಾದ ಲೇಖನಿಯ ಸಹಾಯದಿಂದ ಪೂರೈಸಿದರು. 'ಹರಿಜನ' ಪತ್ರಿಕೆಯನ್ನು ಸ್ಥಾಪಿಸಿ ಸಾಹಿತ್ಯದ ಮೂಲಕ ಜನತೆಗೆ ತಿಳಿಯ ಹೇಳಿ ತಮ್ಮ ಕಾರ್ಯ ಸಾಧಿಸಿದರು. ಆದ್ದರಿಂದ ಸಾಹಿತ್ಯದಿಂದ ಆರ್ಥಿಕ, ಸಾಮಾಜಿಕ, ರಾಜಕೀಯ ಕೆಲಸಗಳೆಲ್ಲವೂ ನಡೆಯುವುವು.

ಇನ್ನು ಸಾಹಿತಿಯ ವಿಚಾರ. ಸಾಹಿತಿಯು ಆಯಾ ಕಾಲ, ದೇಶ, ಭಾಷೆ, ಜನಜೀವನ ನಾಗರೀಕತೆಯನ್ನು ಭವ್ಯ ಅಮರ ಕೃತಿಗಳಲ್ಲಿ ಗಳಿಸಿಡುವ ಓರ್ವ ಅಮರ ಸಾಮಾಜ ಶಿಲ್ಪಿ. ಎಲ್ಲರೂ ಸಾಹಿತಿಯಾಗಿ ಮೆರೆಯಲು ಸಾಧ್ಯವಿಲ್ಲ. ಸಾಹಿತಿಯಾಗ ಬೇಕಾದರೆ ಯೋಗ್ಯ ಪ್ರೋತ್ಸಾಹ ಆಗತ್ಯ. ಸಾಹಿತಿ ಜನತೆಯಿಂದ ಬೇರಿಲ್ಲ. ಸಾಹಿತಿಗೆ ಜನತಾ ಬೆಂಬಲ ಅತ್ಯಗತ್ಯ. ಸಾಹಿತಿಯಿಂದ ಸಮಾಜ ಏನನ್ನು ಬಯಸುತ್ತದೋ ಅದೇ ರೀತಿ ಆತನ ಜೀವನೋಪಾಯಕ್ಕೆ ತಕ್ಕ ಪರಿಹಾರವನ್ನೊದಗಿಸಲೇಬೇಕು. ಸಾಹಿತಿಯ ಕೃತಿಗಳು ಮಾತ್ರ ಸಮಾಜಕ್ಕೆ ಬೇಕು. ಆತನ ವ್ಯಕ್ತಿ ಜೀವನದ ರಕ್ಷಣೆ ಮಾತ್ರ ಬೇಕಿಲ್ಲವೆಂದರೆ ಅದು ಸಾಹಿತಿಗೆ ದ್ರೋಹವೆಸಗಿದಂತೆಯೇ ಸರಿ. ಕಾರಣ ಆತನ ಜೀವನೋಪಾಯ ಸಾಹಿತ್ಯದಿಂದಲೇ ಆಗಬೇಕಲ್ಲದೆ ಅನ್ಯರೀತಿಯಲ್ಲಿ ಜೀವನ ಸಾಗಿಸಿಕೊಂಡು ಸಾಹಿತ್ಯ ಸೇವೆಮಾಡಲು ಯಾವ ಸಾಹಿತಿಯಿಂದಲೂ ಸಾಧ್ಯವಿಲ್ಲ.

ಪ್ರಕೃತ ನಮ್ಮ ಸಮಾಜದಲ್ಲಿ ಅಂದರೆ ಕನ್ನಡ ಸಾಹಿತ್ಯ ಪ್ರಪಂಚಕ್ಕೆ ಕನ್ನಡಿಗರು ಕೊಟ್ಟಿರುವ ಸ್ಥಾನಮಾನಗಳು ಏನೇನೂ ಸಾಲದು. ಕೇವಲ ಕರ್ನಾಟಕ ಸಮಾಜವೇ ಏಕೆ? ಹಲವಾರು ಭಾಷಾವೈವಿಧ್ಯತೆಯಿಂದ ಕೂಡಿರುವ ಭಾರತ ಸಮಾಜವೇ ಸಾಹಿತಿಗಳಿಗೆ ಪ್ರೋತ್ಸಾಹವನ್ನೀಯುತ್ತಿಲ್ಲ. ಆದ್ದರಿಂದಲೇ ಭಾರತದಲ್ಲಿ ಯಾವ ಭಾಷೆಯ ಸಾಹಿತ್ಯವೂ ಏಳ್ಗೆ ಹೊಂದಿಲ್ಲ. ಈ ಕೊರತೆಯಿಂದ ಇಂದು ಸಾಹಿತಿಗಳು ಉತ್ತಮ ಕೃತಿಗಳನ್ನು ರಚಿಸಲಾರದೆ ಕೊರಗುತ್ತಿದ್ದಾರೆ. ಹೀಗೆ ಪ್ರಗತಿಶೀಲ, ಪ್ರಭಾವಯುತ ಸಾಹಿತ್ಯದ ನ್ಯೂನತೆಯಿಂದ ಜನತೆ ಪರಭಾಷಾಮೋಹಿತವಾಗಿದೆ ಅಲ್ಲದೆ ಸಂಸ್ಕೃತಿಯನ್ನೂ ತೊರೆದು ಪರಕೀಯರ ನಡೆನುಡಿ ನಾಗರೀಕತೆಯನ್ನು ಅನುಸರಿಸುತ್ತಿದೆ.

ಇನ್ನು ಸಾಹಿತಿಯ ಕೀರ್ತಿ ಎಂದೆಂದಿಗೂ ಅಮರ. ಕವೀಂದ್ರ ರವೀಂದ್ರರು ಸಾಹಿತ್ಯದಲ್ಲಿ 'ನೋಬೆಲ್' ಪಾರಿತೋಷಕವನ್ನು ಪಡೆದು ಸಾಹಿತ್ಯ ಪ್ರಪಂಚದಲ್ಲಿ ಅಜರಾಮರವಾಗಿ ವಿರಾಜಿಸುತ್ತಿದ್ದಾರೆ. ಅಲ್ಲದೆ ಇದೇ ರೀತಿ ವಿಶ್ವಸಾಹಿತ್ಯ ಕಾದಂಬರಿಗಳೆನಿಸಿರುವ, 'Les Miserables' ಮತ್ತು 'Count of Mountecristo' ಮೊದಲಾದ ಆಂಗ್ಲ ಕೃತಿಗಳೂ ಅವುಗಳನ್ನು ಬರೆದ ಸಾಹಿತಿಗಳೂ ವಿಶ್ವದಲ್ಲೇ ಇಂದಿಗೂ ವಿರಾಜಿಸುತ್ತಿದ್ದಾರೆ. ಇವುಗಳನ್ನು ನಮ್ಮ ಚೆಲುಗನ್ನಡ ಸಾಹಿತ್ಯಕ್ಕೆ ಅನುವಾದಿಸಿದ ಲೇಖಕರು ವಂದನಾರ್ಹರು.

ಇನ್ನು ಕೇವಲ ನಮ್ಮ ಕನ್ನಡ ಸಾಹಿತ್ಯದ ವಿಷಯ ತೆಗೆದುಕೊಳ್ಳೋಣ. ಮೊತ್ತ ಮೊದಲು ಕನ್ನಡಿಗರಿಗೆ ಸಾಹಿತ್ಯ ಪರಿಚಯ ಮಾಡಿಕೊಟ್ಟವರು 'ಗಳಗನಾಥರು'. ಒಂದು ಶತಮಾನದ ಹಿಂದಿನಿಂದಲೂ ತಲೆ ಎತ್ತಿದ ಏಕೆ? ರನ್ನಪಂಪರ ಕಾಲದಿಂದಲೂ ಬೆಳೆದು ಬಂದಿರುವ ಕನ್ನಡ ಸಾಹಿತ್ಯ ಇನ್ನೂ ಚೇತರಿಸಿಕ್ಕೊಳ್ಳದೆ ಇರುವುದು ತುಂಬ ಶೋಚನೀಯ ಸಂಗತಿ. ಇದನ್ನು ಗಮನಿಸುವಾಗ ನಮ್ಮ ಚೆಲುಗನ್ನಡ ಸಾಹಿತ್ಯಕ್ಕೆ ಕನ್ನಡಿಗರು ಎಷ್ಟು ಪ್ರೋತ್ಸಾಹ ಕೊಡುತ್ತಾರೆಂಬುದು ತಿಳಿಯುವುದಲ್ಲವೆ?

ಆದ್ದರಿಂದಲೇ ಕಳೆದ ೩ ವರ್ಷಗಳ ಹಿಂದೆ ನಡೆದ ವಿಶ್ವವಿದ್ಯಾನಿಲಯದ ಕನ್ನಡ ಮಾಧ್ಯಮದ ವಿಷಯದಲ್ಲಿ ಶ್ರೀ. ಎ. ಆರ್. ವಾಡಿಯವರ ಪ್ರಶ್ನೆಗೆ ಕರ್ನಾಟಕದ ಹಿರಿಯ ಹಾಗೂ ಪ್ರಗತಿಶೀಲ ಸಾಹಿತಿಗಳಾದ ಅ. ನ. ಕೃ. ಕುವೆಂಪು, ಬಸವರಾವ್, ಕಟ್ಟೀಮನಿ, ತಾರಾಸು, ಕಾರಂತ ಮೊದಲಾದವರು ಪಾಶ್ಚಾತ್ಯ ದೇಶಗಳಲ್ಲಿ ಸಾಹಿತಿಗಳಿಗೆ ಸಮಾಜದಲ್ಲಿ ದೊರಕಿರುವ ಆರ್ಥಿಕ ಮತ್ತು ಸಾಮಾಜಿಕ ಹಕ್ಕು ಭಾಧ್ಯತೆಗಳು ದೊರಕಿದ್ದಲ್ಲ, ಅವುಗಳಿಗಿಂತಲೂ ಅಮೋಘವಾದ ಕೃತಿಗಳನ್ನು ರಚಿಸಬಲ್ಲೆವೆಂದು ಘಂಟಾಘೋಷವಾಗಿ ಹೇಳಿದರು. ಇಂದು ಕನ್ನಡ ಸಾಹಿತ್ಯದ ಅತ್ಯುತ್ತಮ ಕೃತಿಗಳೆನಿಸಿರುವ ಕಟ್ಟೀಮನಿಯವರ 'ಜ್ವಾಲಾಮುಖಿ, ಸ್ವಾತಂತ್ರ್ಯದೆಡೆಗೆ' ತ. ರಾ. ಸುರವರ 'ಬೆಂಕಿಯ ಬಲೆ' ಅ. ನ. ಕೃ. ರವರ 'ಸಂಧ್ಯಾರಾಗ, ತಾಯಿಯ ಕರುಳು,' ಕುವೆಂಪುರವರ 'ಕಾನೂರು ಸುಬ್ಬಮ್ಮ ಹೆಗ್ಗಡತಿ' ಕಾರಂತರ 'ಸನ್ಯಾಸಿಯ ಬದುಕು, ಜೋಮನ ದುಡಿ' ಮೊದಲಾದ ಅಮೋಘ ಕೃತಿಗಳ ಸಾಕ್ಷಿಯಿಂದ ಈ ಮಹನೀಯರುಗಳ ಹಾರೈಕೆ ಕೈಗೂಡಬಹುದೆಂದು ಆಶಿಸಬಹುದು. ಅವರ ಹಾರೈಕೆ ಕೈಗೂಡಲೆಂದು ನಾವೂ ಜಗನ್ನಿಯಾಮಕನನ್ನು ಪ್ರಾರ್ಥಿಸೋಣ.

ಕೊಡಗು ಪ್ರಾಂತೀಯ ಸಹಕಾರಿ ಮಾರ್ಕೆಟಿಂಗ್ ಫೆಡರೇಶನ್ ಲಿಮಿಟೆಡ್.,

ಹೆಡ್ ಆಫೀಸು :—ವೀರಾಜಪೇಟೆ.

ಶಾಖೆ :—ಸೂ. ಜ್ಯುಬಿಲಿ ಬಿಲ್ಡಿಂಗ್ಸ್, ಮಡಿಕೇರಿ.

ನಮ್ಮಲ್ಲಿ ಈ ಕಳಗೆ ತೋರಿಸಿರುವ ಸಾಮಾನುಗಳು ದೊರೆಯುತ್ತವೆ.

1. 32 ರೌಂಲ್ಸರುಗಳು ಮತ್ತು ಪಿಸ್ತೂಲುಗಳು, ಅವುಗಳ ತೋಟಗಳು.
2. 12 ನೇ ನಂಬರಿನ ಒಂಟಿ ಹೊಳವಿನ ತೋಟದ ಕೋವಿಗಳು.
3. ಒಂಟಿ ಮತ್ತು ಜೋಡಿ ಹೊಳವಿನ ಕೇಪಿನ (ತುಂಬಿನ) ಕೋವಿಗಳು
4. 12, 16 ಮತ್ತು 20 ನೇ ನಂಬರಿನ ತೋಟಗಳು, ಕೋವಿ ಮದ್ದು ಚಿಲ್ಲು ಮತ್ತು ಕೇಪುಗಳು.
5. $\frac{5}{8}$", $\frac{1}{2}$" ಮತ್ತು $\frac{3}{8}$" ಕಬ್ಬಿಣದ ಸರಳುಗಳು
6. 2", $1\frac{1}{4}$", 1" $\frac{3}{4}$" ಮತ್ತು $\frac{1}{2}$" ಕೊಳಾಯಿಗಳು. (G. I. Peps)
7. $1\frac{3}{4}$" × $\frac{5}{16}$" ಉಕ್ಕಿನ ಪಟ್ಟಿಗಳು (Spring Steel flats)
8. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆ ಮಾಡುವ ಪಂಪುಗಳು.
9. ಕೋತಿ ಮತ್ತು ಆನೆ ಮಾರ್ಕಿನ ಸೀಮೆಣ್ಣೆ ಟಿನ್ನುಗಳು.
10. ಕಾಫಿ ಬೀಜವು ಸ್ಪೌನ್ಸಪೇಟೆ ಮತ್ತು ಶನಿವಾರಸಂತೆ ಸಹಕಾರಿ ಸ್ಟೋರುಗಳಲ್ಲಿಯೂ, ಉದ್ಯೋಗಸ್ಥರ ಸಹಕಾರ ಸಂಘ ಮಡಿಕೇರಿಯಲ್ಲಿಯೂ ದೊರೆಯುತ್ತದೆ.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ, ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟ್ಟು (Special purchase permit) ಪಡೆಯಬೇಕು.

ಎಂ. ಎಸ್. ಸೋಮಯ್ಯ, (ಗೌ. ಕಾರ್ಯದರ್ಶಿ)

ಪಿ. ಐ. ಬೆಳ್ಯಪ್ಪ, (ಪ್ರೆಸಿಡೆಂಟ್)

ಸೋಮವಾರಪೇಟೆಗೆ
'ಕೊಡಗು' ಏಜೆಂಟರು,
ಶ್ರೀ ಕೆ. ಎಂ. ಪೊಗೆನ್ನನವರು

Without Prepayment

Reg. No. M. 1550.

"KODAGU" MERCARA (Coorg)

ಪ್ರಟ ಹನ್ನೆರಡ

ಸೀಸೆಗಳ ಜಲಪ್ರಯಾಣ.

ಲೇ:—ಶ್ರೀ ಕೆ. ಬಿ. ಐಯ್ಯಪ್ಪ, ಬಿ. ಎ., ಬಿ. ಟಿ.

ಅಪರಿಚಿತ ಪ್ರಯಾಣಿಕನೊಬ್ಬನು ಆಸ್ಟ್ರೇಲಿಯಖಂಡದಿಂದ ಹೊರಟು ನಾಲ್ಕು ವರ್ಷಗಳ ನಂತರ ಬ್ರಿಟನಿನ ಯೂರ್‌ಮೌತ್ ಕರಾವಳಿಯಲ್ಲಿ ಬಂದಿಳಿದನು. ಈ ಇಪ್ಪತ್ತನೆಯ ಶತಮಾನದ ಯಾಂತ್ರಿಕ ಪ್ರಪಂಚದಲ್ಲಿ ಆಸ್ಟ್ರೇಲಿಯದಿಂದ ಬ್ರಿಟನಿಗೆ ಬರೇ ೨೪ ತಾಸುಗಳಲ್ಲಿ ಜೆಟ್ ಪ್ಲೇನ್‌ಗಳಲ್ಲಿ ತಲಪಬಹುದಾಗಿದೆ. ಹಡಗದಲ್ಲಿ ಸಹ ಎರಡು ತಿಂಗಳುಗಳಲ್ಲಿ ತಲಪಬಹುದು. ಈ ಪ್ರಯಾಣಿಕನು ಬಹಳ ಹೆಚ್ಚು ಸಮಯವನ್ನು ತೆಗೆದುಕೊಂಡಿದ್ದಾನೆ. ಇವನ ವ್ಯಾರಿದ್ದು ಬಲ್ಲಿರಾ! ಬರೇ ಒಂದು ಸೀಸೆ. (bottle) ಜೆಕ್ಯುಸ್ ಸ್ಕಾರ್ಸಸ್ ಎಂಬಾತನು ೧೯೪೯ನೇ ಇಸವಿ ಜನವರಿ ೧೧ರಲ್ಲಿ ಆಸ್ಟ್ರೇಲಿಯದ ಮೇಲ್ಬಾ ಕರಾವಳಿಯಲ್ಲಿ ಒಂದು ಸೀಸೆಯನ್ನು ಸಮುದ್ರಕ್ಕೆ ಬಿಸಾಡಿದ್ದನು. "ಈ ಸೀಸೆ ಯಾರ ಕೈಸೇರುತ್ತದೋ ಅವನು ಈ ಕೆಳಗಿನ ವಿಳಾಸಕ್ಕೆ ತಿಳಿಸಬೇಕು" ಎಂಬ ಸಂದೇಶದ ಕಾಗದ ಅದರೊಳಗಿತ್ತು. ಈ ಸೀಸೆಯನ್ನು ಪಡೆದ ಇಂಗ್ಲೆಂಡಿನ ವ್ಯಕ್ತಿ ಅದರಂತೆ ಮಾಡಿದನು.

ಸೀಸೆಗಳನ್ನು ಈ ವಿಧವಾಗಿ ತೇಲಲು ಬಿಡುವ ಕಾರಣಗಳು ಬಹುವಿಧವಾಗಿವೆ. ಥಿಕ್ಕಿ ಹೊಡೆದ ಹಡಗಿನ ನಾವಿಕರು ರಕ್ಷಣೆ ಬೇಡಿಕೆಗಾಗಿ ಈ ರೀತಿ ಮಾಡುತ್ತಾರೆ; ಸಮುದ್ರ ಪ್ರವಾಹಗಳ ದಿಕ್ಕುಗಳನ್ನು ಕಂಡುಹಿಡಿಯಲಿಕ್ಕಾಗಿಯೂ ಮತ್ತು ವಿಜ್ಞಾನಿಗಳು ಸೀಸೆಗಳು ಎಲಸೆ ಹೋಗುವದನ್ನು ಆನ್ವೇಷಿಸುವದಕ್ಕಾಗಿಯೂ ವಿಜ್ಞಾನಿಗಳು ಸೀಸೆಗಳನ್ನು ಬಿಸಾಡುವರು ತಮೂಷೆಗಾಗಿ ಸಹ ಬಿಸಾಡುವವರಿದ್ದಾರೆ. ಇಲ್ಲಿಯ ವರೆಗೆ ಈ ಕೆಲಸದಲ್ಲಿ ಅಧಿಕವಾಗಿ ಪ್ರವರ್ತರಾಗಿರುವ ರಾಷ್ಟ್ರವೆಂದರೆ ಆಸ್ಟ್ರೇಲಿಯ ಖಂಡ. ಅಮೇರಿಕದಿಂದ ಬಿಟ್ಟ ಸೀಸೆಗಳು ಆಸ್ಟ್ರೇಲಿಯಾ ಅಥವಾ ಇಂಡಿಯಾದಲ್ಲಿ ಸಿಗುವದೆಂದರೆ ಪವಾಡಭವೇ ಸರಿ. ಆದರೆ ಹಲವು ಮೊರೆತವೆ; ಮಾತ್ರವಲ್ಲ, ಇಂತಹ ಸಣ್ಣ ವಸ್ತುಗಳು ಬಹು ವರ್ಷಗಳ ವರೆಗೆ ಸಮುದ್ರದ ನಾನಾ ರೀತಿಯ ಹವೆ ಮತ್ತು ಅಲೆಗಳೆಡೆಯಲ್ಲಿದ್ದು ಕೊಂಡು ಬಹು ದೂರ ಪ್ರಯಾಣ ಮಾಡಿ ಇನ್ನೊಬ್ಬರ ಕೈಸೇರುವೆಂದರೆ ಅತ್ಯಾಶ್ಚರ್ಯವೇ ಸರಿ.

೧೯೧೩ನೇ ವರ್ಷದಲ್ಲಿ ಡೋರ್‌ಸೆಟ್‌ಸ್ಸಿನ ಸ್ವಡ್‌ವೇಂಡ್ ಕೊಲ್ಲಿಯಲ್ಲಿ ಒಂದು ಸೀಸೆಯನ್ನು ಬಿಡಲಾಯಿತು. ಹನ್ನೊಂದು ತಿಂಗಳ ನಂತರ ನ್ಯೂಜಿಲೇಂಡಿನ ಕೈಪಸ್ಸ ಬೇ ಕೊಲ್ಲಿಯಲ್ಲಿ ಇದನ್ನು ತೆಗೆಯಲಾಯಿತು. ಯುವಕನೊಬ್ಬನು ತನ್ನ ವಿವಾಸವನ್ನು ಕಾಗದದಲ್ಲಿ ಬರೆದು, ಅದನ್ನು ಒಂದು ಸೋಡಾ ಸೀಸೆಯಲ್ಲಿಟ್ಟು ಭದ್ರಪಡಿಸಿ, ಎವನ್ ನದಿಗೆ ಬಿಸಾಡಿದನು. ಹತ್ತು ತಿಂಗಳ ನಂತರ ವೆಲ್ಲಿಂಗ್‌ಟನ್ ಬಂದರದಲ್ಲಿ ಪೆಸ್ತನಿಗೆ ಇದು ಸಿಕ್ಕಿತು. ಈ ಪೆಸ್ತನು ಹುಡುಗನಿಗೆ ಈ ಕೆಳಗಿನಂತೆ ತಿಳಿಸಿದನು.

"ನಾನು ನನ್ನ ದೋಣಿಯಲ್ಲಿರುವಾಗ ತೇಲುತ್ತಿರುವ ಸೀಸೆಯೊಂದು ನೀರಿನಲ್ಲಿ ಗೋಚರವಾಯಿತು. ತೇಲುತ್ತಿರುವ ಬಾಟ್ಲಿಗಳಲ್ಲಿ ಸಂದೇಶಗಳಿರುತ್ತವೆಂದು ನಾನು ಕೇಳಿದ್ದರಿಂದ ಅತೀ ಕುತೂಹಲದಿಂದ ಹೆಕ್ಕಿ ತೆಗೆದು ನೋಡಲು ಮೂಸಿದ ಕಾಗದ ಚೂರಿನಲ್ಲಿ ನಿನ್ನ ವಿಳಾಸ ಬರೆದಿತ್ತು. ಇದನ್ನು ನೀನು ಎವನ್ ನದಿ ತೀರದಲ್ಲಿ ಸ್ನಾನಮಾಡುವಾಗ್ಯೆ ಬಿಸಾಡಿದ್ದಿರಬಹುದೆಂದು ನಾನು ತಿಳಿಯುತ್ತೇನೆ"

ಉತ್ತರ ಐಯರ್‌ಲೇಂಡಿನ ಬೆಲ್‌ಫಾಸ್ಟ್ ನಗರದ ಸಂಸ್ಥೆಯು ಒಂದು ಸೋಡಾ ಸೀಸೆಯನ್ನು ತೇಲಲು ಬಿಟ್ಟರು. ಅದು ಆಸ್ಟ್ರೇಲಿಯಾದತ್ತ ಪ್ರಯಾಣ ಮಾಡುತ್ತ ಚಾಸ್ಮೇನಿಯ ದ್ವೀಪದ ದಕ್ಷಿಣ ಭಾಗದಲ್ಲಿ ಅಂದಾಜು ಒಂದು ಸಾವಿರ ಮೈಲು ದೂರದಲ್ಲಿರುವ ಮೆಕ್ವಾ ದ್ವೀಪದಲ್ಲಿ ತಂಗಿದ್ದ ಅಂಟಾರ್ಕಟಿಕ್ ಪ್ರದೇಶದ ಶೋಧಕರಿಗೆ ಸಿಕ್ಕಿತು. ಬೈಬಲ್ಲಿನ ಕೆಲವು ಸಾರಾಂಶವನ್ನು ೧೯ ಭಾಷೆಗಳಲ್ಲಿ ತರ್ಜುಮೆ ಮಾಡಿ ಬರೆದ ಕಾಗದಗಳಿದ್ದುವು ಅದರೊಳಗೆ.

೧೯೩೫ರಲ್ಲಿ ಒಂದು ಸೀಸೆಯು ಅಂದಾಜು ೨೪೪೭ ದಿನಗಳ ತನಕ ಸಮುದ್ರದಲ್ಲಿ ತೇಲುತಿದ್ದು ಕೊನೆಗೆ ಆಸ್ಟ್ರೇಲಿಯಕ್ಕೆ ಬಂದು ತಲಪಿತು. ಮೆಗಲನು ಭೂಪ್ರದಕ್ಷಣೆ ಬರಲು ಮೂರು ವರ್ಷ ಸಮಯ ತೆಗೆದು ಕೊಂಡನು. ಆದರೆ ಈಗ ಆಸ್ಟ್ರೇಲಿಯದಿಂದ ಇಂಗ್ಲೆಂಡಿಗೆ ಎರಡು ದಿನಗಳೊಳಗೆ ವಿಮಾನದಲ್ಲಿ ತಲಪ ಬಹುದು. ಹಡಗದಲ್ಲಿ ಒಂದು ತಿಂಗಳಲ್ಲಿ ಮುಟ್ಟಬಹುದು. ಆದರೆ ಈ ಸೀಸೆಯು ತನ್ನ ಸ್ವಂತ ಸಮಯವನ್ನು ತೆಗೆದುಕೊಂಡಿತು. ಅಂದಾಜು ಏಳು ವರ್ಷ.

ಇವು ವಿಜ್ಞಾನಿಗಳು ಸಮುದ್ರದ ಪ್ರವಾಹಗಳನ್ನು ಕಂಡು ಹಿಡಿಯಲು ಬಿಟ್ಟಿದ್ದಾಗಿದೆ.

ನ್ಯೂಸೌತ್‌ವೇಲ್ಸ್ ಸಿಪಾಯಿಯೊಬ್ಬನು ಒಂದು ಸೋಡಾಸೀಸೆಯೊಳಗೆ ಒಂದು ಸಂದೇಶವನ್ನು ಹಾಕಿ ೧೯೧೬ನೇ ಏಪ್ರಿಲ್‌ನಲ್ಲಿ (ಒಂದನೇ ಜಾಗತಿಕ ಯುದ್ಧದಲ್ಲಿ) ಸಮುದ್ರದಲ್ಲಿ ಬಿಸಾಡಿದ್ದನು. ೩೭ ವರ್ಷಗಳ ನಂತರ ಈ ಸೀಸೆಯು ಚಾಸ್ಮೇನಿಯ ದ್ವೀಪದ ನಿವಾಸಿಯೊಬ್ಬಳ ಕೈಸೇರಿತು ಅವಳು ಅದರೊಳಗಿದ್ದ ಸಂದೇಶಗಾರನಿಗೆ ಈ ಸೀಸೆಯನ್ನು ರವಾನಿಸಿದಳು. ಇದರ ಪರಿಣಾಮವೇನೆಂದರೆ ಅವರಿಬ್ಬರ ವಿವಾಹವಾಯಿತು.

ಯುದ್ಧ ಹಡಗದಿಂದ ಬಿಸಾಡಲ್ಪಟ್ಟ ಸೀಸೆಯೊಂದು ಆಸ್ಟ್ರೇಲಿಯದ ಒಬ್ಬ ಮಹಿಳೆಗೆ ರಿಚ್ ಭೂಶಿರದ ಹತ್ತಿರ ಸಿಕ್ಕಿತು. ಮಿಸ್ ಸೆವರಿನ್ ಎಂಬಾಕೆ ಲೆಫ್ಟನೆಂಟ್ ಹೆರಿಬ್ಲಂಟ್ ಎಂಬವನ ಪತ್ನಿಯಾಗಿದ್ದಳು. ಇವಳಿಗೆ ಈತನು ಸಾಮಾನ್ಯವಾಗಿ "ಸೀಸೆ ಟಪ್ಪಾಲಿನ" ಮುಖಾಂತರವಾಗಿ ಪತ್ರ ಕಳುಹಿಸುತ್ತಿದ್ದನು. ಆದರೆ ಈ ಪತ್ರ ಸಿಕ್ಕಲು ೨೫ ವರ್ಷವಾಯಿತು. ಯೂಲಿಸಸ್ "Ulysses" ಎಂಬ ಯುದ್ಧ ಹಡಗ ಯುದ್ಧರಂಗಕ್ಕೆ ತೆರಳುತ್ತಿರುವಾಗ ಒಂದು ಸಂದೇಶವನ್ನು ಸೀಸೆಯೊಳಗೆ ತುರುಕಿ ತನ್ನ ಪತ್ನಿಗೆ ಪೋಸ್ಟು ಮಾಡಿದ್ದನು. ಸಂದೇಶದ ಸಾರಾಂಶ ಹೀಗಿತ್ತು.

"ದಕ್ಷಿಣ ಅಕ್ಷಾಂಶ ೩೦° ಕೊಲಿ. ಶನಿವಾರ, ಯೂಲಿಸಸ್ ನಂ. A ೪೮. ಹಡಗದಲ್ಲಿ ಪ್ರಯಾಣ ಸಾಗುತ್ತಿದೆ. ಈಗ ತಾನೇ ಸಂತುಷ್ಟವಾದ ಭೋಜನವಾಯಿತು. ಈಗ ಹೊಟ್ಟೆ ಉಬ್ಬಿದೆ ಈ ರಾತ್ರಿ ಸಂಗೀತ ಮೇಳವಿದೆ. ನನ್ನ ಪಾತ್ರ ತೆರದಲ್ಲಿ ಸರಿಯಾಗಬಹುದೆಂದು ತೋರುತ್ತದೆ. ಆಸ್ಟ್ರೇಲಿಯ ಹೇಗಿದೆ. ಕೈಸರನ್ನು ಹಿಡಿದು ತರುತ್ತೇನೆ. ಹೆಚ್. ಎಸ್. ಬ್ಲಂಟ್, ೬ನೇ ಸ್ಕೆಂಗಡ, ನಂ. ೩, ಸಂದೇಶ ಖಾತೆ, ಎ. ಐ. ಎಫ್ ೬ ಜಿಪ್ಸಿಗೆ ಪ್ರಯಾಣ." ಪತ್ರದ ಮೂಲೆಯಲ್ಲಿ ಈ ಕೆಳಗಿನಂತೆ ಬರೆದಿತ್ತು.

"ಈ ಸಂದೇಶವನ್ನು ದಯವಿಟ್ಟು ಜಿ. ಎಲ್. ಸೆವರಿನ್, ನಂ. ೯, ಯ್ಯೂಡಂಡ್ಸ್, ದ. ಆಸ್ಟ್ರೇಲಿಯ. ಇದಕ್ಕೆ ತಲಪಿಸಿ" ಈ ಸೀಸೆಯನ್ನು ಪಡೆದ ಹೆಂಗಸು ಸ್ವತಃ ಈ ಪತ್ತೆಗೆ ಕಳುಹಿಸಿದಳು. ಆವಾಗ ಸೀಸೆಯ ಯಜಮಾನನು ತೀರಿಹೋಗಿದ್ದನು.

ಬೋರ್ ಯುದ್ಧ ಸಮಯದಲ್ಲಿ "ಓರಿಯುಂಜ್" ಎಂಬ ಹಡಗದಿಂದ ಜೋನ್ಸ್ ಎಂಬ ಸಿಪಾಯಿಯು ಒಂದು ಸೋಡಾ ಸೀಸೆಯನ್ನು ಸಮುದ್ರದಲ್ಲಿ ಬಿಟ್ಟಿದ್ದನು. ೫೫ ವರ್ಷಗಳ ನಂತರ ಇದು ಆಲ್ಬೇನಿಯಾಕ್ಕೆ ತಲಪಿತು. ಸೀಸೆಯು ಸರಿಯಾಗಿತ್ತು. ಜೇನ್ಸನನಿಗೆ ಈ ವರ್ತಮಾನ ತಲಪುವ ೬೦ ವಯಸ್ಸಾಗಿತ್ತು.

ಈ ರೀತಿಯಾಗಿ ತಮಾಶೆಗಾಗಿಯೂ ಶೋಧನೆಗಾಗಿಯೂ ಶೀಶೆಗಳನ್ನು ಸಮುದ್ರದಲ್ಲಿ ಬಿಡುವರು. ಆದರೆ ಆಲ್ಲೋಲಕಲ್ಲೋಲವಾಗಿ ಬಿರುಗಾಳಿಯಿಂದಲೂ, ಬಿರುಸಾದ ಅಲೆಗಳಿಂದಲೂ ಕೂಡಿರುವ ಸಾಗರಗಳಲ್ಲಿ ಈ ಸಣ್ಣ ಸೀಸೆಗಳು ಹಾಳಾಗದೆ ಉಳಿಯುವದು ನನಗೆಲ್ಲಾ ಆಶ್ಚರ್ಯವಾಸಿ ತೋರುತ್ತದೆ.

ಧರ್ಮಾಯುಗದಿಂದ.

Coorg Forest Department

Auction Sale Notice:

About 1,20,000 cft of Teak, Rosewood, Honne, Nandi, (Venteak) etc will be sold by auction at the Coorg Timber Depot, Hunsur, on Saturday the 8th August 1953, at 11 A. M.

For conditions of the sale etc apply to the Conservator of Forests, Coorg, Mercara.

ಕೊಡಗು ಸ್ಟೇಟ್ ಸಹಕಾರಿ ಬ್ಯಾಂಕ್ ಲಿಮಿಟೆಡ್, ಮಡಿಕೇರಿ.

[ಸ್ಥಾಪನೆ: 1921]

(ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿರುವ)

ಅಧಿಕೃತ ಶೇರು ಭಂಡವಾಳ	ರೂ.	10,00,000 —
ವಸೂಲಾದ ಶೇರು ಮೊಬಲಗು	,,	2,09,000
ಕ್ಷೇಮನಿಧಿ	,,	63,000
ಇತರನಿಧಿಗಳು	,,	17,000
ಠೇವಣಾತಿ	,,	8,86,000

ವಿವಿಧ ಠೇವಣಾತಿಯ ಬಡ್ಡಿಯ ದರಗಳು:—

ಚಾಲ್ತಿ ಠೇವಣಾತಿ ಶೇಕಡ (Current Deposits)			ರೂ. 0-8-0
ಸೇವಿಂಗ್ಸ್ (ತಾ. 1—1—1953 ರಿಂದ)			,, 1-8-0
ನಿರಖು (Fixed) 3 ರಿಂದ 11 ತಿಂಗಳ ಅವಧಿಗೆ			,, 1-8-0
1 ವರುಷ	....	....	,, 2-0-0
2 ವರುಷ	....	....	,, 2-8-0
3 ವರುಷ	....	....	,, 3-0-0
5 ವರುಷ	....	....	,, 3-12-0
10 ವರುಷ	....	....	,, 4-0-0

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನು ಕೈಕೊಳ್ಳಲಾಗುವುದು.

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ ಮತ್ತು ಚಿನ್ನದ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಡ್ರಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರಿನಿಟಿ, ವಾರ್ಡನ್ ಮತ್ತು ವಿಶ್ವಭಾರತಿ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ. ಕೆ. ಪಿ. ಅಪ್ಪಯ್ಯ. ಪ್ರೆಸಿಡೆಂಟ್ & ಖಜಾನ್ಜಿ.

Edited Printed and Published by P. I. BELLIAPPA at 'KODAGU' Press Mercara, for 'Kodagu' Ltd;

ನಾನು ಸೆಕ್ರೆಟರಿಯೂಗಿ ವಸೂಲಕ್ಕಿಯ ವಿಷಯದಲ್ಲಾಗ ಇನ್ನು ಇತರ ಯಾವ ವಿಷಯದಲ್ಲಾಗಲೀ ಏನಾದರೂ ತ ಮಾಡಿದ್ದಿರಬಹುದು ಅದನ್ನು ಕ್ಷಮಿಸಲ್ಲರೆಂದು ಕೈಮುಗಿದು ಕೇಳಿಕೊಳ್ಳುವೆನು ಇಷ್ಟು ವಿಧಾನದಿಂದ ಈ ಕಾರ್ಯಭಾಗದಲ್ಲಿ ಕುಬಾ ಸಹಾಯ ಮಾಡಿ ತನ್ನ ತನುಮನ ಧನಗಳನ್ನು ಅರ್ಪಿಸಿದ ನಮ್ಮ ಸ್ವಾಗ ಅಧ್ಯಕ್ಷರಿಗೂ ಕಾರ್ಯಕರ್ತರಿಗೂ ನನ್ನ ಧನ್ಯವಾದಗಳನ್ನು ನು ಮೂರನಾಡಿನವರ ಪರವಾಗಿ ಅರ್ಪಿಸುವೆನು.

ಅಲ್ಲದೆ ಎಷ್ಟೋ ಎಡರುಗಳಿದ್ದರೂ ಅದನ್ನು ಗಮನಿಸದೆ ಟಿಗೆ ಬರುವ ಪ್ರತಿನಿಧಿಗಳ ಆದರಕ್ಕಾಗಿ ಶಾಲಾ ಕಟ್ಟಡವ ಒಂದು ದಿನವಸದ ಮುಟ್ಟಿಗೆ ಶಾಲೆಯನ್ನು ಮುಚ್ಚಿಸಿಕೊಟ್ಟ ನ್ಮ ಕಮಿಷನರ್ ಸಾಹೇಬರಿಗೂ ನಮ್ಮ ಡಿಸ್ಟ್ರಿಕ್ಟ್ ಬೋರ್ ಅಧ್ಯಕ್ಷರಿಗೂ ಮೂನಾಡಿನವರ ಪರವಾಗಿ ನನ್ನ ವಂದನೆಗಳನ್ನು ಅರ್ಪಿಸುವೆನು ಕೆ. ರಾಮನಾಯಕ್,
ಆನರರಿ ಸೆಕ್ರೆಟರಿ,
ಸ್ವಾಗತ ಮಂಡಳಿ, ಮೂನಾಡು.

'ಚಿಕ್ಕನವಂಗ' ಕೈಬ್ಬ, ಚಿಕ್ಕನವಂಗ' ಇಂಜಿಯಲ್ಲಿ ಮಜ'

('ಬಿಟ್ಟದಪಳ್ಳದ ರೈತಾನಂದ)

ನಮ್ಮ ಹಿರಿಯರು ಆಡಿದ, ಮಾಡಿದ ಮತ್ತು ಹೊಡಿದ ತಕ್ಕುದಲ್ಲಿ ಆಗಲೀ, ಇತರ ಸಲಹೆಗಳಲ್ಲಾಗಲೀ ಎಳ್ಳಷ್ಟಾದ ತಪ್ಪಿಲ್ಲವೆಂಬದಕ್ಕೆ ಯಾವ ಸಂದೇಹವೂ ಇರುವುದಿಲ್ಲ. ಮೇಲೆ ಕಾಣಿಸಿದ ಶಿರೋನಾಮೆದಲ್ಲಿ ನಮಗೆ ಏನು ತಿಳಿ ಬರುತ್ತದೆಂದರೆ—ಒಳ್ಳೆ ಕಾ ಪುತ್ತು ಇದ್ದು ಮೇಹನತ್ತು ಡುವ ಬಲಾಢ್ಯನಿಗೆ ಮತ್ತು ಶ್ರಮೆಯಿಂದ ಕೆಲಸ ಮಾಡುವ ನಿಗೆ ಕಬ್ಬಿನ ಕೃಷಿ ಯೂ ಸೃಷ್ಟಿಸಾಯ ಮಾಡುವುದೆಂ ಉತ್ತ ವೆಂದೂ, ಪ್ರಾಯ ಹೋಗಿ ಒಲಹೀನನಾಗಿ, ಬಹಳ ಶ್ರಮೆ ಟ್ಟು ಕೆಲಸ ಮಾಡಲು ಕೂಡದಂಥವರಿಗೆ ಶುಂಠಿ ಮತ್ತು ಅ ನ (ಇಂಜಿ, ಮಂಜ) ಕೃಷಿಯು ಉತ್ತಮವೆಂದೂ ಹೇಳಿರು ಸಲ್ಲದೆ ವಾಡಿಕೆಯಂತಿ ಎಲ್ಲರಿಗೂ ತಿಳಿಯುವ ಮೇರೆ 'ಚಿಕ್ಕ ನವಂಗ' ಅಂದರೆ ಹಣ ಕಾಸು, ಆಳು ಕಾಳು ಇರುವವನು ದೂ 'ಚಿಕ್ಕನವಂಗ' ಅಂದರೆ ಗರೀಬನಿಗೆಂದೂ ಅರ್ಥವಲ್ಲ.

ಇತರ ಎಲ್ಲಾ ಸೌಕರ್ಯ ಇರುವ ಐಶ್ವರ್ಯವಂತರೂ, ಸಕರೂ ನಾನಾ ತರಹದ ಕೃಷಿ ಅಂದರೆ ಕಾಫಿ, ಟೀ, ರಬ್ಬ ವಗೈರೆಯೋ ಅಥವಾ ಹಲವು ಒಳ್ಳೆಯ ವ್ಯಾಪಾರದಲ್ಲಿ ೋ ಮಗ್ನರಾಗುವರು ಕಬ್ಬಿನ ಕೃಷಿ ಇರಾಪೆ ಪಟ್ಟಿಕ್ಕಿ ನಮ್ಮ ದೇಶದಲ್ಲಿ ಈಗಿನ ಆರ್ಥಿಕ ಹೀನ ಸಮಯದಲ್ಲಿ ಲವರಿಗೆ ಬಹಳ ಸ್ವಲ್ಪ ಹಣ ವಿನಿಯೋಗದಿಂದಲೂ, ಕಿಂಚಿತ ಮಯದಲ್ಲಿಯೂ ಸ್ವತಹ ಮೇಹನತ್ತಿನಿಂದಲೂ ಕಬ್ಬಿನ ಕೃ ಯಿಂದ ಹೊಂದುವ ಆದಾಯವು ಬಹಳವಾಗಿ ಇರುವದು. ದಕ್ಕೆ ಕಾಫಿ, ಕಿತ್ತಳೆ ವಗೈರೆಯ ಹಾಗೆ ದೀರ್ಘ ಕಾಲ ಕಾ ಲೂ ಬೇಡ; ಹೊರ ಪ್ರಾಂತ್ಯದ ಆಳೂ, ವಾಕೆಟ್ಟೂ, ಕಂ ನಿಯವರ ಬೇರೆ ಹೆಚ್ಚಿನ ಖರ್ಚಿನ ಬಂಡವಾಳವೂ ಬೇಡವಾಗಿದೆ.

ಕಬ್ಬಿನ ಕೃಷಿಯ ಹಿನ್ನಲೆಯಲ್ಲಿ ಲೆಕ್ಕ ಹಾಕಿದರೆ, ಸಾ ಕಾರಣವಾಗಿ 100 ಬಟ್ಟಿ ಭೂಮಿಯನ್ನು ಉತ್ತು, ನೆಟ್ಟು, ಕು ಎದು ಒರುವೆ ಭತ್ತಕ್ಕಿಂತಲೂ ನಾಲ್ಕು ನಾಲು ಆದಾಯ ಹೆ ಚ್ಚಾಗಿದೆ. ಇದು ಬರಿಯ ಬಾಯಿ ಮಾತು ಅಲ್ಲ; ಮತ್ತು ಜನ ಸ್ಥ ಮರಳು ಮಾಡಿ ಪಂಕು ಹಾಕುವ ವಿಮೆಯೂ ಅಲ್ಲ ಗ ನಾವು ಕಂಡ ಹಾಗೆ ಸಾಧಾರಣವಾಗಿರುವ 100 ಬಟ್ಟಿ ೂಮಿಯನ್ನು ವಕಾ ಮಾಡಿದರೆ ಅಂದಾಜು 15 ಬಟ್ಟಿ ಭತ್ತ ಂದರೆ 1 ಗಾಡಿ ಭತ್ತ ನಿವ್ವಳ ಲಾಭ (Nett) ಉತ್ಪತ್ತಿ ಇದೆ. ದಕ್ಕೆ ಈಗಿನ ಧಾರಣೆ ಪ್ರಕಾರ 45 ರಿಂದ 50 ರೂ. ಕ್ರಯ ದೆ. ಆದರೆ ಇಂಥಾ 100 ಬಟ್ಟಿ ಭೂಮಿಯ 3 ಏಕರ ವೈ ೃನೇ ಭಾಗ ಯೂ ೃನೇ ಭಾಗವಲ್ಲಿ ಒಬ್ಬನು ವೇಹನತ್ತು ಬ್ಬ 20 ಮೊಳ ಉದ್ದದಲ್ಲಿ 100 ಸಾಲು ಕಬ್ಬಿನ ಕೃಷಿ ಮಾ ದರೆ ಒಳ್ಳೆ ವ್ಯವಸಾಯಗಾ ನ ಖಂಡಿತವಾಗಿಯೂ ಂ ಯೂ 500 ರೂಪಾಯಿ ಕಬ್ಬಿನ ಉತ್ಪತ್ತಿಯನ್ನು ಬೆಲ್ಲ ಮಾಡಿ ಸಂಪಾದನೆ ಮಾಡಬಹುದು. ಇದು ಹ್ಯಾಗೆಂದು ವಿ ತಾರಿಸುವ. ಅಂದಾಜು ೃ ಏಕರೆ ಯೂ ೃನೇ ಏಕರೆ ಜಾಗ ಲ್ಲಿ ಒಬ್ಬನು 20 ಮೊಳ ಉದ್ದದ 100 ಸಾಲು ಕಬ್ಬು ನೆಡ ಂ ಜರಂಡಿ ತೆಗೆದು ಮೊಳ ಒಂದರ ಒಂದು ಬೀಜದ ಹಾ ಕಬ್ಬಿನ ಕೊಡಿಯನ್ನು ನೆಟ್ಟಲ್ಲು ಮೊಳಕೆ ಹುಟ್ಟದೆಯೋ, ಳಾಗಿಯೋ, ಕೊಳೆತೋ 5 ಬೀಜ ನಾಶವಾದರೂ ಸಹ ಕಿ 15 ಬೀಜದಲ್ಲಿ ಬಿಡವಂದು ಸರಾಸರಿ 10, 12, 15 ವ ೃ 20 ಕಬ್ಬು ಆಗುವುದು. ಹಳ್ಳ (ಇದು ಹೆಚ್ಚಿನ ಕೆಮ್ಮಿ ಹಳ್ಳ ಮತ್ತು ಪೂರ್ವಾಷಾಢ ಮೇರೆ ಹಾಕಿದರೆ) ಹಳ್ಳ ಕಮ್ಮಿತರದ್ದಲ್ಲು 8 ಜಲ್ಲೆ ಕಬ್ಬು ಬಿಡವರಿದರೆ ಲೆಕ್ಕ ಕಿದಲ್ಲಿ 1 ಸಾಲಿನಲ್ಲಿ 15 X 8 = 120 ಜಲ್ಲೆ ಕಬ್ಬು ಆ ವುದು. ಹೀಗೆ 100 ಸಾಲಿಗೆ ಜುಮ್ಲಾ 12,000 ಕಬ್ಬು ಖಂಡ ವಾಗಿ ಆಗುತ್ತದೆ. ಇಂಥಾ ಕಬ್ಬಿಗೆ ಸರಾಸರಿ ಜಲ್ಲೆ 10 ಕಾಸಿನಂತೆ ಲೆಕ್ಕ ಹಾಕಿದರೆ 6,000 ಆಣೆ ಅಂದರೆ 375 ರೂ ಯ್ತು ಮತ್ತು ಸದರಿ ಕಬ್ಬಿನ ಬೀಜ ಮಾರಿದರೆ ಪುನಹ 25 ಂ 30 ರೂ. ಬರ ತ್ತದೆ. ಹೀಗೆ ಇಷ್ಟಕ್ಕೇನೇ ಬಿಡದೆ ಇ ೀ ಕಬ್ಬನ್ನು ಬೆಲ್ಲ ಮಾಡಿದರೆ ಇದಕ್ಕಿಂತಲೂ ಹೆಚ್ಚಿನ ಲಾಭ ುದಿ. ಈ ಬೆಲ್ಲ ಮಾಡುವ ಕ್ರಮವನ್ನು ಬಹಳ ಸುಲಭದಲ್ಲಿ ಬ್ಬರೂ ಸೂಕ್ಷ್ಮದಲ್ಲಿ ಕಲಿಯಬಹುದು. ಇದಕ್ಕೆ ಬೊಗಲೇ, ದೊಂದೇತದ ಸಲಕರಣೆಗಳೂ ಬೇಡ.

ಇದೇ ಕಬ್ಬಿನ ಬೆಲ್ಲ ಮಾಡಲು ತಕ್ಕ ಸಲಹೆಗಳಿದ್ದಲ್ಲು 10 ಯೂ 12 ಕಬ್ಬಿಗೆ 1 ಟಿನ್ ಹಾಲು (ರಸ) ಬರುತ್ತದೆ ಹೀ ಗೆ ಬಂಜ 3½ ಯೂಟಿನ್ ಹಾಲಿಗೆ 1 ಮಣ ಬೆಲ್ಲವಾಗುತ್ತದೆ. ಹೀಗೆ ಲೆಕ್ಕ ಹಾಕಿ ಮೇಲಿನ 12,000 ಕಬ್ಬಿಗೆ ಟಿನ್ 1ಕ್ಕೆ 12ರ ಮೇರೆ 1000 ಟಿನ್ ಹಾಲು (ರಸ) ಬರುತ್ತದೆ. ಇದಕ್ಕೆ ಮಣ ಒಂದರ ಟಿನ್ ರಸದ ಮೇರೆ 250 ಮಣ ಬೆಲ್ಲ ಆಗುತ್ತೆ. ಈ ಬೆ 250 ಮಣಕ್ಕೆ ಮಣ ಒಬ್ಬೆರ ಕಮ್ಮಿ ಕ್ರಯ ಎರಡು ರೂ ಮೇರೆ 500 ರೂ ಆಗುತ್ತೆ. ಈ ಕಸ ಬು ಇತರ ದೇಶಕ್ಕಿ 12 ಯೂ 15 ತಿಂಗಳಲ್ಲಿ ಆಗುವದು. ನಮ್ಮ ದೇಶದಲ್ಲು 18 ತಿಂಗಳಳಿಗೆ ಆಗುತ್ತದೆ ಹೀಗೆ ಹೊರ ಪ್ರಾಂತ್ಯಕ್ಕೆ ನಾವು ಈಗ ಬಿಸಾಡುವ ಸಾವಿರಾರು ರೂಪಾಯಿಯನ್ನು ನಾವೇ ಉಳಿಸಬಹುದು ಪ್ರತಿ ಸಂತೆಗೆ ವಾರ ವಾರ ಹೊರ ಪ್ರಾಂತ್ಯದಿಂದ ನೂರಾರು ಖಂಡಿ ಬೆಲ್ಲ ಬರುವ ದನ್ನು ನಾವು ಕರಾರೆ ಕಾಣುತ್ತೀವೆ. ಈ ಲಾಭವನ್ನು ನಾ ವೇ ಯಾತಕ್ಕೆ ಅಭಿವಿಸಬಾರದು? ಅಲ್ಲದೆ ನಾವು ಬೆಳೆದ ಅ ಕ್ಕಿ ಇದ್ದೂ, ಅಡಿಯಿಂದ ಅಕ್ಕಿ ತೆಗೆಯಲು ಎಷ್ಟು ನಾಚಿ ಕೆಯೂ, ಬೆಗುಸ್ಸೆಯೂ ಇರುವುದೋ ಅಷ್ಟೇ ನಾಚಿಕೆ ಬೆಲ್ಲ ತೆಗೆಯಲೂ ಸಹ ಇರಬೇಕು. ಆದಕಾರಣ ಪ್ರತಿಯೊಬ್ಬ ರೂ ಅವರವರ ಜಿಗೆ ತಕ್ಕ ಅಲ್ಪ ಹೆಚ್ಚಿಗೆ ಬೆಲ್ಲ ತಯಾರು ಮಾಡುವುದನ್ನು ಪದನೆ ಕಲಿಯಲು ಸುರುಮಾಡಬೇಕು.

ಈ ಕಬ್ಬಿನ್ಯೆತಿಯೂ ಎಂಥಾ ಕಡೆ, ಯಾವ ಸಮಯ ದಲ್ಲಿ ಹ್ಯಾಗೆ ಖಡಬಹುದೆಂಬದನ್ನು ಆಲೋಚಿಸುವ. ಪ್ರ ತಿಯೊಬ್ಬರಿಗೆ ಆ ಗದ್ದೆಯೂ ಅಲ್ಲ, ಈಚೆ ಹಡ್ಲೂ ಅಲ್ಲದೆ ಬಾರಿಕೆಯಂಗಿ ಕಾಡು ಮರಗಳು, ಕೊಚ್ಚೆಯಿಂದ ಕೂಡಿದ ಹಳ್ಳ ಸಾಲುಗಳಲ್ಲಾಮಿಯು ಇರುವದು. ಇಂಥಾ ಕಾಡನ್ನು ಕ್ಲಿಯರ್ ಮಾಡಿ ಬೂದಿಮಾಡಿ ಪ್ರತಿ 6 ಅಡಿಗೆ ಯೂ 1 ಮೂರಿಗೆ ಸಾಲು ಮೇರೆ 20 ಮೊಳ ಉದ್ದದ ಯೂ ಭೂಮಿಯ ಇಳಿಜಾರುಮೇರೆ ಸಾಲು ತೆಗೆದು, ಪಕ್ಕದಲ್ಲಿರುವ ಬೂ ದಿ ಮಣ್ಣು, ಸುಮುಣ್ಣು ಪೂರ್ತಿ ಎಳೆದು ಸಾಲಿಗೆ ತುಂಬಿ ಸಿ ಮೊಳ 1 ರ ಬೀಜ ಯೂ ಕಬ್ಬಿನ ಕೊಡಿ ನೆಡಬೇಕು. 2 ಯಿ 3 ತಿಂಗಳ ಮುಂಡಿ ಎತ್ತರ ಕಬ್ಬು ಹುಲ್ಲಾಗಿ ಮೊಳಕೆ ಬಂದ ಮೇಲೆ ಪಡು ಕಡೆಯಿಂದಲೂ ಮುಂಣು ಕೂಡಿಸಿ ಸಾ ಗುವಳಿ ಮಾಡಬೇಕು. ಇದನಕರು, ಪಡು ವಗೈರೆ ಇನ್ನದ ಹಾ ಗೆ ಬೇಲಿ ಭದ್ರವಾಗಿರಬೇಕು. ಇದು 1½ ವರ್ಷದಲ್ಲಿ ಯೂ 15 ತಿಂಗಳಲ್ಲಿ ಬ್ಬು ಆಗುತ್ತದೆ ಇದೀಗ ಒಳ್ಳೆ ಸುಸಮಯ ವು ಇದೇ ಜೂನ್ ತಿಂಗಳು ಆಖೈರೊಳಗೆ ಕಬ್ಬು ನೆಟ್ಟುಬಿಟ್ಟಲ್ಲಾದರೆ ಡಿಸೆಂಬರ್ ಒಳಗೆ ಪೈರು ಸೊಂಟದ ವರೆಗೆ ಬಂದು ಆ ಜಮೀನಿನ ಶ್ರೀತ್ವದಿಂದಲೇ ಬೆಳೆಯುವದು. ಇಲ್ಲವಾದರೆ ಕಾರು ಹಾಯಿಸಬೇಕಾಗುವದು. ಹಲವು ಕಡೆ ನಾನಾ ವಿಧ ಕಬ್ಬು ಕೃಷಿ ಮಾಡಿರುವದನ್ನು ಹಲವರು ನೋಡಿರಬಹುದು. ಕಬ್ಬು ಕೊಡಿ ನೆಡುವದಕ್ಕಿಂತಲೂ ಕಬ್ಬು ಜಲ್ಲೆಯನ್ನೇ ನೆಟ್ಟರೆ ಬಹಳ ಉತ್ತಮ. ಕಬ್ಬು ಜಲ್ಲೆಯನ್ನು 3 ಗಿಂಣು ಇಟ್ಟು, ಕಡಿದು ತುಂಡು ಮಾಡಿ ಈ ಮುಂಗಾರು ಮಳೆಗೆ ನೆಟ್ಟರೆ ಗೆದ್ದಲು ಹಿಡಿಯುವದಿಲ್ಲ. ಹೀಗೆಯೇ ಶುಂಠಿಯ ಕೃಷಿ ಸಂತೆ ಮೆಣಸಿನ ಕೃಷಿ, ಇನ್ನು ಅನೇಕ ತರಹದ ಕೃಷಿಯನ್ನು ಈಗಲೇ ಸುರು ಮಾಡಿದರೆ ಇದೇ ತರುವ 1 ವರ್ಷದೊಳಗಾಗಿ ಖಂಡಿತವಾಗಿ ಹೆಚ್ಚು ಲಾಭ ಪಡೆಯಬಹುದು ಶುಂಠಿಗೆ ಮಣ 1 ರ 5—6 ರೂಪಾಯಿ ಕ್ರಯವಿದೆ. ಹಾಗಾದರೆ ಖಂಡಿಗೆ 100 ರಿಂದ 120 ರೂಪಾಯಿ ಆಗುತ್ತದೆ. ಸಂತೆ ಮೆಣಸು ಸೇರು 1ರ 4 ಆಣೆ ಮೇರೆ 40 ಸೇರಿನ 1 ಮಣಕ್ಕೆ 10 ರೂಪಾಯಿ ಮೇರೆ ಖಂಡಿಗೆ ರೂ. 200 ಆಗುತ್ತದೆ. ಯಾರಿಗಾದರೂ ಈ ಬಾಬಿನಲ್ಲು ಹೆಚ್ಚು ಕಮ್ಮಿ ವಿಚಾರವಿದ್ದಲ್ಲಿ ತಕ್ಕ ಸಲಹೆಗಳಾಗಲಿ ಅಥವಾ ಕಬ್ಬು ಕೊಡಿ, ಶುಂಠಿ ಬೀಜ ವಗೈರೆ ಬೇಕಾದಲ್ಲು ನಿಮ್ಮ ನಿರ್ಣಯವು ರಸ್ಸು ಕೇಳಿದರೆ ಸಿಕ್ಕುವದು. ಒಡನೆ ಈ ಮೇರೆ ನಾನಾ ಪಿ ಮಾಡಬೇಕಾಗಿ ಕೋರುವ.

ಪ್ರಕಟಣೆ.

ಕೊಡಗು ವಿದ್ಯಾಭಿವೃದ್ಧಿ ಸಂಘ ಮಡಿಕೇರಿ.

ಮೇಲಣ ಸಂಘವು ಏಳಿಗೆಗಾಗಿ ಪೀಜಿಕೆತ್ತಿರಳ ಲಾಟ ವಿಚಾರ ಮಾಡಿ ನೋಡಿದ್ದು ಎಲ್ಲರಿಗೂ ವಿಷದವಿದೆ. ಟಿಕೇಟು ಳು ಇನ್ನೂ ಪೂರ್ತಿಯಾಗಿ ವಾಪ್ತಿಯಾಗಿ ಮುಗಿ ಲಾಟ್ರಿ ಮಾಡ್ಯಿಂಗ್ ಶಾ [illegible] ನೋಡಿದೆ. ಈ ಲಾಟ್ರಿಯಿಂದ ಉತ್ಪತ್ತಿಯಾಗುವ ಪ್ರತಿಯೊಂದು ಪೈಸೆಯೂ ಕೊಡಗಿನ ಯುವಕ ಯುವತಿಯರ ವಿದ್ಯಾಭ್ಯಾಸಕ್ಕೆ ವಿನಿಯೋಗಿಸಲ್ಪಡುತ್ತದೆ ಇದು ಸ್ಪರ್ಧೆಯ ಕಾಲ! ಜನಾಂಗಗಳ ನಿರ್ಮಾಣದ ಕಾಲ! ಜನಾಂಗಗಳ ಏಳಿಗೆಗಾಗಿ ಹೆಣಗಾಡುವ ಕಾಲ! ನಮ್ಮ ಚಿಕ್ಕ ಜನಾಂಗದ ಭಾವಿ ಏಳಿಗೆಯು ಈ ಜನಾಂಗದ ಎಳೆಯರ ಹೆಗಲ ಮೇಲಿನ್ನಿಸುಂದಿನ ಪ್ರಜೆಗಳ ವಿದ್ಯಾಭ್ಯಾಸಕ್ಕೆ ವಿದ್ಯಾನೇತನಗಳನ್ನು ಕೊಟ್ಟು ಧನ ಸಹಾಯ ಮಾಡುವ ಈ ಸಂಸ್ಥೆಗೆ ಸ್ವದೇಶಿ ಪ್ರೇಮಿ ಸ್ವಮತ ಪ್ರೇಮಿಗಳಾದ ಪ್ರತಿಯೊಬ್ಬ ಕೊಡಗಿನ ಮಹನೀಯರು ಮುಂಬರಿಯುವ ಸಹಾಯವನ್ನು ಬೇಕಾಗಿದೆ ಮೇಲ್ಕಾಣಿಸಿದ ಲಾಟ್ರಿಯ ಒಂದು ಟಿಕೇಟನ್ನು ನೀವು ತೆಗೆದುಕೊಂಡರೆ ಒಬ್ಬ ಬಡ ವಿದ್ಯಾರ್ಥಿಯ ವಿದ್ಯಾಭ್ಯಾಸಕ್ಕೆ ಧನ ಸಹಾಯ ಮಾಡಿದಂತಾಗುತ್ತದೆ ನೀವು ಟಿಕೇಟು ಪಡಕೊಂಡರೆ ನಿಮ್ಮ ಹೆಸರನ್ನು ಈ ಸಂಘದ ರಿಜಿಸ್ಟರಿನಲ್ಲಿ ದಾಖಲು ಮಾಡಿ ನಿಮ್ಮ ಪೋಷಣೆಯಲ್ಲಿರುವವರಿಗೆ ವಿದ್ಯಾವೇತನ ಕೊಡುವ ಪ್ರಶ್ನೆ ಬಂದಾಗ ಈ ಸಹಾಯವನ್ನು ಗಣನೆಗೆ ತೆಗೆದುಕೊಳ್ಳುತ್ತೇವೆ. ಈ ಸಂಸ್ಥೆಯಿಂದ ಧನ ಸಹಾಯ ಪಡೆದು ಈಗ ತಮ್ಮ ಸಂವಾದನೆಯನ್ನು ಮಾಡುತ್ತಿರುವ ಮಹನೀಯರು ಲಾಟ್ರಿ ಟಿಕೇಟುಗಳನ್ನು ಪಡೆದುಕೊಂಡು ತಮ್ಮ ಕೃತಜ್ಞತೆಯನ್ನು ವಿಷದಪಡಿಸುವ ಸಮಯವನ್ನು ಕೈಚಲ್ಲಿಕೊಳ್ಳಬಾರದು ನಿಮ್ಮ ಬೆನ್ನ ಹಿಂದೆ ಬರುವವರಿಗೆ ನೀವು ನಿಮ್ಮ ಉದಾರ ಕೃತ್ಯದಿಂದ ನಿಮ್ಮ ನಿಮ್ಮ ಅದೃಷ್ಟ ಪರೀಕ್ಷೆಯನ್ನು ಮಾಡಿ ಜಯಶಾಲಿಗಳಾಗುವುದಕ್ಕೆ ತಮ್ಮ ಪೀಜಿಕೆತ್ತಿರಯನ್ನು ಸೆಂಬರಲ್ಲಿ ಸಿಕ್ಕಿಸಿ ಕರಿವಾಕಬಹುದು. ಜಯಲಕ್ಷ್ಮಿಯು ಕೈಪಿಡಿದು ಹೊಸ್ತಿಲ ಒಳಗೆ ಬರುವ ಜನಾಂಗದ ಏಳಿಗೆಗಾಗಿ ಬಿಳಿಲು ಸೇವೆ ಮಾಡಿದಂತಾಗುವುದು. ಟಿಕೇಟುಗಳನ್ನು ಈ ಕೆಳಗಿನವರಿಂದ ಪಡೆದುಕೊಳ್ಳಬಹುದು.

ಕೆ. ಯಂ. ಬೆಳ್ಯಪ್ಪ (ಗೌರವ ಸೆಕ್ರೆಟರಿ.)

ಪ್ರಕಟಣೆ.

ಪರಸಿನಕಡವು ಮದಪ್ಪುರ ದೇವಸ್ಥಾನದಿಂದ.

ಕೊಡಗಿನ ಕೆಲವು ಸ್ಥಳಗಳ ದೇವಸ್ಥಾನಗಳಲ್ಲಿ ಪರಸಿನಕಡವು ಮದಪ್ಪುರ ದೇವಸ್ಥಾನದ ಪರವಾಗಿ ಭಕ್ತ ಮಹಾಜನಗಳಿಂದ ಹರಕೆ ಮತ್ತು ಕಾಣಿಕೆ ಮೊದಲಾದವುಗಳನ್ನು ಸ್ವೀಕರಿಸುತ್ತಿರುವರೆಂದು ತಿಳಿಯುತ್ತಿದೆ. ಆಶ್ಚರ್ಯದ ಮೇಯಲ್ಲಿರುವ ಪರಸಿನಕಡವು ಮದಪ್ಪುರ ದೇವಸ್ಥಾನದ ಯಾವ ಕಾಣಿಕೆಯೂ ಹರಕೆಗಳನ್ನು ಈ ದೇವಸ್ಥಾನಗಳಲ್ಲಿ ಕೊಡಬಾರದೆಂದಾಗಿ ಕೊಡಗಿನ ಭಕ್ತಾದಿಗಳಲ್ಲಿ ವಿನಂತಿ. ಪರಸಿನಕಡವು ದೇವಸ್ಥಾನದಿಂದ ಈ ಕಾಣಿಕೆಗಳನ್ನು ಸ್ವೀಕರಿಸಲು ಕೊಡಗಿನಲ್ಲಿ ಯಾರನ್ನೂ ನೇಮಿಸಿರುವದಿಲ್ಲ. ಆದಸ್ಮಾತ್ ಮೇಲ್ಕಂಡ ದೇವಸ್ಥಾನಕ್ಕೆ ಇರುವ ಸಕಲ ಕಾಣಿಕೆ ಮತ್ತು ಹರಕೆಗಳನ್ನು ಈ ಕೆಳಗಿನ ವಿಳಾಸದವರಿಗೇನೇ ಕಳಿಸಬೇಕಲ್ಲದೆ ಈ ವಿಚಾರವನ್ನು ಸಕಲ ಭಕ್ತಾದಿ ಜನಗಳಲ್ಲಿ ಪ್ರಚಾರ ಮಾಡುವೇಕೆಂದು ಅತಿ ವಿನಮ್ರತಾಪೂರ್ವಕ ಕೋರುವೆ.

ಹೆ. ಯಂ. ಕಂಞಿರಾಮನ್
ಪರಸಿನಕಡವು. ಮೇನೇಜರ್.
25—5—'35. ಪರಸಿನಕಡವು ಮದಪ್ಪುರ ದೇವಸ್ಥಾನ

ಪಂಡಿತ ಗೋಪಾಲಾಚಾರ್ಯರವರ

ಜೀವಾಮೃತ

ಆಧುನಿಕ ಕಾಲದ ಒತ್ತಾಟ್ಟವ್ಯ ಜೀವನ [illegible] ಆರೋಗ್ಯವನ್ನು ನಿಧಾನವಾಗಿ ಹೀರಿ ಮಾಗಿಸುತ್ತಿದೆ. ಅದರ ಪರಿಣಾಮವೇ ದೌರ್ಬಲತೆ, ಶಿರೋವೇದನೆ, ಕರ್ಕಶ ಸ್ವಭಾವ ಇವೇ ಮೊದಲಾದವು. ಅದನ್ನು ನಿಮ್ಮನ್ನು ಪೂರ್ಣವಾಗಿ ತಮ್ಮ ಹಿಡಿತದಲ್ಲಿರಿಸಿಬಿಡುವಂತೆ ನೀವೀಗಲೇ ತಡೆಹಾಕಬೇಕು. ದಿವ್ಯೌಷಧಿಯೇ ಜೀವಾಮೃತ ಸೇವನೆ—ಈ ಪರಿಣಾಮಕಾರೀ ಪಾಶ್ಚಿವರ್ಧಕ ಔಷಧವು ನಿಮ್ಮಲ್ಲಿ ರಕ್ತ ಪರಿಚಲನೆಯನ್ನು ಉಂಟುಮಾಡುವುದು. ನೀವು ಕಳಕೊಂಡ ಚೇತನವನ್ನೆಲ್ಲ ಮರಳಿ ಕೊಟ್ಟು, ನಿಮ್ಮನ್ನು ಪೂರ್ವದಂತೇ ಪೂರ್ಣ ಶಕ್ತಿಯುತ ಪುರುಷರನ್ನಾಗಿ ಮಾಡುವುದು.

ಎಲ್ಲೆಯೂ ದೊರೆಯುವುದು—ದೊಡ್ಡ ಬಾಟ್ಲಿ 1ಕ್ಕೆ ರೂ. 3—೪—0, ಸಣ್ಣ ಬಾಟ್ಲಿ 1ಕ್ಕೆ ರೂ. 1—12—0.

ಆಯ [illegible], ಪೋ. ಬಾ. ನಂ. ೫೮೭, ಮದರಾಸ್.

ಸೂರು ಪ್ರಾಂತ್ಯದ ಡಿಸ್ಟ್ರಿಬ್ಯೂಟರ್ರು:—

ದಿ ಸಿಟಿ ಮೆಡಿಕಲ್ & ಜೆನರಲ್ ಏಜೆನ್ಸಿ,
೯೨, ಚಿಕ್ಕಪೇಟೆ, [ಉಡುಪಿ ಹೊಟೇಲ್ ಹತ್ತಿರ] ಬೆಂಗಳೂರು.
ಏಜೆಂಟ್:—ಹರಿಹರ ಪ್ರೆಸ್ [illegible] ಡಿಪೋ, ಬ್ರಾಂಚ್

ಭಯಂಕರವಾದ ಭೂಕಂಪ!

ಬಲುಚಿಸ್ತಾನವು ಪ್ರಕೃತಿಯ ಕೋಪಕ್ಕೆ ಈಡಾಯಿತು.

ಕ್ವೆಟ್ಟಾ ಪಟ್ಟಣವು ಸ್ಮಶಾನವಾಯಿತು!

60,000 ಕ್ಕಿಂತ ಹೆಚ್ಚು ಮರಣಗಳಾದವು.

2,000 ಹೆಣಗಳು ಮನೆಗಳ ಅಡಿಯಲ್ಲಿವೆ!

ನಿರಾಶ್ರಿತರಿಗೆ ಧನ ಸಹಾಯವನ್ನೂಡಲು ಕಾಂಗ್ರೆಸ್ಸಿನ ಅಧ್ಯಕ್ಷರ ಮತ್ತು ವೈಸರಾಯರ ವಿನಂತಿಗಳು.

ಕೊಡಗು.

ಜೂನ್ ೧೯೩೪ನೇ ಇಸವಿ

ತಾ. ೧ನೇ ಶುಕ್ರವಾರ.

ಭೂಕಂಪದ ಅನಾಹುತ.

ಕೆಲವು ವರ್ಷಗಳ ಹಿಂದೆ ಪ್ರಕೃತಿಯ ಕೋಪವು ಜಪಾನ್ ದೇಶದ ಮೇಲೆ ಬಿದ್ದಿತ್ತು. ಅಲ್ಲಿ ಒಂದರನಂತರೊಂದು ಭೂಕಂಪದೊಂದಿಗೆ ಜ್ವಾಲಾಮುಖಿಯೊಡೆದು ಪಟ್ಟಣಗಳೇ ಮಣ್ಣುಪಾಲಾಗಿ ಎಷ್ಟೋ ಪ್ರಾಣಹಾನಿಯೂ, ದ್ರವ್ಯಹಾನಿಯೂ ಸಂಭವಿಸಿತು. ಆದರೆ ಸ್ವಾತಂತ್ರ್ಯ ಜಪಾನು ಸ್ವಲ್ಪ ಸಮಯದಲ್ಲೇ ಈ ಪೆಟ್ಟುಗಳಿಂದ ಚೇತರಿಸಿಕೊಂಡಿತು. ಇತ್ತಲಾಗಿ ಪ್ರಕೃತಿಯ ಕೋಪದ ದೃಷ್ಟಿಯು ಬಡ ಭಾರತ ಭೂಮಿಯ ಕಡೆ ತಿರುಗಿದಂತೆ ತೋರುತ್ತದೆ. ಸ್ವಲ್ಪ ಕಾಲದ ಹಿಂದೆ ಬಿಹಾರಿನಲ್ಲಿ ಅಂಟಾದ ಭಯಂಕರವಾದ ಭೂಕಂಪದ ಕಷ್ಟ ನಷ್ಟಗಳನ್ನು ಸಂಪಡಿಸುವುದರೊಳಗಾಗಿಯೇ ಒಲುಚಿಸ್ತಾನದಲ್ಲಿ ಅದಕ್ಕಿಂತ ಭೀಕರವಾದ ಅನಾಹುತವೊಂದು ನಡೆಯಿತೆಂಬ ವರ್ತಮಾನವು ಯಾವ ಹಿಂದೀಯನಿಗಾದರೂ ದುಃಖವನ್ನುಂಟು ಮಾಡದೆ ಇರದು.

ಕಳೆದ ಮೇ ತಾ. 31ರ ಪ್ರಾತಃಕಾಲ 3 ಗಂಟೆಗೆ ಅತಿ ಭಯಂಕರವಾದ ಭೂಕಂಪವುಂಟಾಗಿ ಒಲುಚಿಸ್ತಾನದ ಕ್ವೆಟ್ಟಾಪಟ್ಟಣದ ಮತ್ತು ಸುತ್ತ ಮುತ್ತಲಿನ ಪ್ರದೇಶದ ಜನರು ಗಾಢ ನಿದ್ರೆಯಲ್ಲಿದ್ದಾಗ್ಯೆ ಅತಿ ಭಯಂಕರವಾದ ಭೂಕಂಪ ಉಂಟಾಗಿ ವಿಪರೀತ ಪ್ರಾಣಹಾನಿಯೂ, ದ್ರವ್ಯ ನಷ್ಟವೂ ಸಂಭವಿಸಿದೆ ಇದರ ವಿವರವು ಇನ್ನೊಂದು ಕಡೆ ಕೊಡಲಾಗಿದೆ. ಆ ಹೃದಯ ಭೇದಕವಾದ ಕಥೆಯನ್ನು ಓದುವಾಗ್ಯೆ ಯಾರ ಮೈ ಜುಂ ಅನ್ನದೆ ಇರುವುದು ಮತ್ತು ಯಾರ ಕಂಣಲ್ಲಿ ನೀರು ಬಾರದೆ ಇರುವುದು! ಕ್ವೆಟ್ಟಾ ಸಟಿಯಲ್ಲಿ ಒಂದು ಕಟ್ಟಡವಾದರೂ ನೆಟ್ಟಗೆ ನಿಂತಿಲ್ಲ. ಹಿಂದೀಯರ ವಸತಿಗಳೆಲ್ಲಾ ಸಂಪೂರ್ಣ ನಾಶವಾಗಿವೆ. 60,000 ಜನ ಸಂಖ್ಯೆಯ ಆ ಪಟ್ಟಣದಲ್ಲಿ ಸರ್ಕಾರಿಯ ವರದಿಯ ಮೇರೆ 26,000 ಜನರಿಗಿಂತ ಹೆಚ್ಚು ಮಂದಿರುವರು; ಇತ್ತೀಚೆಗಿನ ವರ್ತಮಾನದ ಮೇರೆ ಸುತ್ತ ಮುತ್ತಲಿನ ಗ್ರಾಮಗಳಲ್ಲಿ ಸುಮಾರು 30 000 ಮಂದಿಗಳು ಸಂಭವಿಸಿವೆ. ಇನ್ನೂ ಸರಿಯಾದ ಲೆಕ್ಕ ಸಿಕ್ಕದ ಗ್ರಾಮಗಳೂ ಇರಬಹುದು. ಆದುದರಿಂದ 60,000 ಜನರ ಪ್ರಾಣಹಾನಿಯೂಗಿದೆಯೆಂದರೆ ಅತಿಶಯೋಕ್ತಿಯೂಗಲಾರದು. ಇದರಿಂದ ಬಿಹಾರದಲ್ಲುಂಟಾದ ಪ್ರಾಣನಷ್ಟಕ್ಕಿಂತ ಇದು ಎಷ್ಟೋ ಹೆಚ್ಚೆಂದು ಸ್ಪಷ್ಟವಾಗುತ್ತದೆ. ದ್ರವ್ಯ ನಷ್ಟದ ಅಂದಾಜು ಈಗಲೇ ಹೇಳಲು ಸಾಧ್ಯವಿಲ್ಲ.

ಭೂಕಂಪದ ಪೆಟ್ಟಿಗೆ ಹೆಚ್ಚಿಗೆ ಈಡಾಗದೆ ಇರುವ ಕಂಟೋನ್‌ಮೆಂಟಿನ ಮಿಲಿಟರಿಯವರು ನಿರಾಶ್ರಿತರಿಗೆ ಮಾಡುತ್ತಿರುವ ಸಹಾಯವು ಸ್ತೋತ್ರಾರ್ಹವಾಗಿದೆ. ಭೂಕಂಪ ಉಂಟಾಗಿ 2 ಗಂಟೆಗಳೊಳಗೆ ಸಿಪಾಯಿಗಳು ಸುಮಾರು 10,000 ಜನರನ್ನು ಮಣ್ಣಿನೊಳಗಿನಿಂದ ಜೀವಸಹಿತ ಹೊರಗೆ ಎಳೆದರು. ಸುಮಾರು 5000 ಹೆಣಗಳನ್ನು ಲಾರಿಗಳಲ್ಲಿ ಸಾಗಿಸಿ ಸುಟ್ಟರು. ಇನ್ನೂ 20,000 ಶವಗಳು ಮಣ್ಣಿನಡಿಯಲ್ಲಿವೆಯಂತೆ. ಅವರಲ್ಲಿ ಕೆಲವರಿಗಾದರೂ ಜೀವ ಉಳಿದಿರಬಹುದು. ಬಿಹಾರದಲ್ಲಿ ಏಳು ದಿವಸಗಳ ನಂತರ ಮಣ್ಣಿನೊಳಗಿಂದ ತೆಗೆದ ಮೇಲೆ ಒಬ್ಬ ಮುದುಕಿ ಒದುತಿದ್ದುಂಟು. ಈಗ 36,000 ನಿರಾಶ್ರಿತರಿಗೆ ಆಹಾರ ಸಾಮಗ್ರಿಗಳನ್ನು ಹಂಚುತ್ತಿದ್ದಾರೆ. ಘಾಯಪಟ್ಟ ಸುಮಾರು 10,000 ಜನರಿಗೆ ಚಿಕಿತ್ಸೆ ಮಾಡುತ್ತಿದ್ದಾರೆ ಈ ದುಃಖಮಯವಾದ ಕಥೆಯು ಇನ್ನು ಪೂರ್ತಿಯಾಗಿಲ್ಲವೆಂದ ಮೇಲೆ ಈ ಅನಾಹುತದ ಪರಿಮಾಣವು ಎಷ್ಟಿರಬಹುದೆಂಬುದನ್ನು ವಾಚಕರ ಊಹನೆಗೆ ಬಿಡಬೇಕಾಗಿದೆ.

ನಿರಾಶ್ರಿತರಾದ ಮನೆಯ ಮಂಡುಗಳೊಳಗೆ ಹೊತು ಹೋಗಿರುವ ಸಮಾರು ಇಪ್ಪತ್ತೈದು ಸಾವಿರ ಹೆಣಗಳನ್ನು ಹೊರಗೆಳೆಯುವುದು ಸುಲಭ ಸಾಧ್ಯದ ಕೆಲಸವಲ್ಲವೆಂದೂ, ಅವುಗಳನ್ನು ಬೇಗನೆ ನಾಶಮಾಡದಿದ್ದರೆ ಅಂಟುರೋಗ ಹುಟ್ಟಬಹುದೆಂದೂ ಮಿಲಿಟರಿ ಅಧಿಕಾರಿಗಳು ಅಲ್ಲಿ ಉಳಿದಿರುವ ಜನರನ್ನೆಲ್ಲಾ ಹೊರಗೆ ಕಳುಹಿಸಿ ಸಟಿಯನ್ನೇ ಸುಟ್ಟು ಬೂದಿ ಮಾಡುವ ಆಲೋಚನೆಯಲ್ಲಿರುವರೆಂಬ ಸುದ್ದಿ ಹೊರಟಿದೆ. ಇದನ್ನು ವಿರೋಧಿಸಿ ಈಗಾಗಲೇ ಹಲವು ಪಬ್ಲಿಕ್ ಎಂಟಿಂಗುಗಳು ನಡಿಸಲ್ಪಟ್ಟಿವೆ. ಹೊತು ಹೋದವರೆಲ್ಲಾ ಸತ್ತಿರಲಾರರೆಂದೂ, ಒಟ್ಟಾರೆ ಸುಡುವುದರಿಂದ ತುಂಬಾ ದ್ರವ್ಯ ನಷ್ಟವಾಗುವುದೆಂದೂ ಜನರು ಹೇಳುವುದರಲ್ಲಿ ನ್ಯಾಯವಿದೆ. ಅಲ್ಲದೆ ಮಿಲಿಟರಿಯವರು ಹೊರಗಿನವರ್ಯಾರನ್ನೂ ಕ್ವೆಟ್ಟಾದೊಳಗೆ ಬಿಡುವುದಿಲ್ಲ. ಅವರಿಂದಲೇ ಹೊತು ಹೋಗಿರುವವರನ್ನು ಹೊರತೆಗೆಯಲು ಸಾಧ್ಯವಾಗುವುದೂ ನಿರಾಶ್ರಿತರಿಗೆ ಸಹಾಯ ಮಾಡಲು ಬೇಕಾಗುವಷ್ಟು ಪಟ್ಟಣದೊಳಗೆ ಇನ್ನು ಎಷ್ಟೋ ಪ್ರಾಣ ಉಳಿಕೆ ಮಾಡಬಹುದು ಮತ್ತು ಬದುಕಿದವರಿಗೆ ಹೆಚ್ಚಿನ ಸಹಾಯ ದೊರೆಯುವುದು. ಈ ವಿಷಯಕ್ಕೆ ಇಂಡಿಯಾ ಸರ್ಕಾರದವರು ಗಮನಕೊಡದೆ ಇರಲಾರರಾಗಿ ನಂಬುತ್ತೇವೆ.

ಇಂಥಾ ಅನೀರಿಕ್ಷಿತ ಅನಾಹುತಕ್ಕೆ ಬಗಾದ ದಾಕ್ಷಿಣ್ಯ ಸಹೋದರ ಸಹೋದರಿಯರಿಗೆ ಸಹಾಯ ಮಾಡಬೇಕಾದದ್ದು ಪ್ರತಿಯೊಬ್ಬ ಸೂನನನ ಪರಮ ಕರ್ತವ್ಯವಾಗಿದೆ. ಬಿಹಾರಿನ ಅನಾಹುತದಲ್ಲಿ ಅದ್ವಿತೀಯ ಕೆಲಸ ಮಾಡಿದ ಕಾಂಗ್ರೆಸಿನ ಅಧ್ಯಕ್ಷರಾದ ಶ್ರೀ ಬಾಬುರಾಜೇಂದ್ರ ಪ್ರಸಾದರನೆರು ನಿರಾಶ್ರಿತರಿಗೆ ನೆರವಾಗಬೇಕೆಂದು ದೇಶೀಯರಲ್ಲಿ ವಿನಂತಿ ಮಾಡಿರುವರು. ಹಾಗೆಯೇ ಕಾಂಗ್ರೆಸಿನ ಜನರಲ್ ಸೆಕ್ರೆಟರಿಗಳಿಬ್ಬರೂ ಸಿಂಧ್ ಕಾಂಗ್ರೆಸ್ ಕಮಿಟಿಯವರು ಏರ್ಪಡಿಸಿರುವ ರಿಲೀಫ್ ಫಂಡಿನ ವ್ಯವಸ್ಥೆಯನ್ನು ನಡಿಸುತ್ತಿರುವರು. ಪಂಜಾಬು ಕಾಂಗ್ರೆಸ್ ಕೆಲಸಗಾರರೂ ಒಂದು ಕಮಿಟಿ ಮಾಡಿ ದ್ರವ್ಯ ಸಂಗ್ರಹಿಸುತ್ತಿರುವರು. ಅಫೀಶ್ಯಲ್ ರೀಫ್ ಫಂಡಿಗೆ ಧನ ಸಹಾಯ ಮಾಡಬೇಕೆಂದು ವೈಸರಾಯರು ಅಪ್ಪೀಲು ಮಾಡಿದ್ದುವರು. ಬೊಂಬಾಯಿ, ಕಲ್ಕತ್ತಾ ಮುಂತಾದ ಕಾಸ್ಮೊಪಾಲಿಟನ್ ಪಟ್ಟಣದ ಅಧ್ಯಕ್ಷರುಗಳು ಈ ಪುಣ್ಯ ಸಂಗ್ರಹದ ಕೆಲಸಕ್ಕೆ ಸುರುಮಾಡಿರುವರೆಂದೂ ಲಕ್ಷ ರೂ. ಮಂಜೂರು ಮಾಡಿರುವರೆಂದೂ ಒಂದು ವರ್ತಮಾನವು ಬಂದಿದೆ. ಇತರ ಪ್ರಾಂತ್ಯದವರೂ ತಮ್ಮ ತಮ್ಮ ಕೈಯ್ಯಲ್ಲಾದ ಸಹಾಯವನ್ನು ಈ ಪುಣ್ಯ ಕಾರ್ಯಕ್ಕೆ ಮಾಡುವರೆಂದು ನಂಬುತ್ತೇವೆ. ಈ ಉದ್ದಿಶ್ಯ ಒಂದು ಚಂದಾಪಟ್ಟಿಯನ್ನು ಹೊರಡಿಸಿರುತ್ತೇವೆ. ನಮ್ಮ ಮೂಲಕ ಇದಕ್ಕಾಗಿ ಧನ ಸಹಾಯ ಮಾಡುವವರ ಹೆಸರನ್ನು ಪತ್ರಿಕೆಯೇ ಪ್ರಕಟಿಸಲಾಗುವುದು.

ಚಕ್ರವರ್ತಿಗಳ ಸಿಲ್ವರ್ ಜುಬಿಲಿ ಫಂಡಿನ ಧನವನ್ನು ಉಪಯೋಗಿಸಲು ಇದೀಗ ಉತ್ತಮವಾದ ಸಂದರ್ಭವೆಂದು ನಮ್ಮ ಸ್ಥಳೀಯ ಕಮಿಟಿಯವರೂ, ಹಾಗೂ ಸೆಂಟ್ರಲ್ ಕಮಿಟಿಯವರೂ ಈ ವಿಷಯ ಆಲೋಚಿಸಿ ತೀರ್ಮಾನಿಸುವಾಗಿ ನಿರೀಕ್ಷಿಸುತ್ತೇವೆ.

ಪ್ರಥಮ ಸಾರಿಯ ಭೂಕಂಪನ.

ಕಳೆದ ಮೇ ತಿಂಗಳು 31ನೇ ಶುಕ್ರವಾರ ಪ್ರಾತಃಕಾಲ 3 ಗಂಟೆ ಸಮಯದಲ್ಲಿ ಬ್ರಿಟಿಷ್ ಬಲುಚಿಸ್ತಾನದ ಮುಖ್ಯ ಪಟ್ಟಣವಾದ ಕ್ವೆಟ್ಟಾದಲ್ಲಿಯೂ, ಸುತ್ತುಮುತ್ತಲೂ ಭಯಂಕರವಾದ ಭೂಕಂಪನವಾಯಿತು. ಆ ಸಮಯದಲ್ಲಿ ಇಡೀ ಪಟ್ಟಣವೇ ಗಾಢ ನಿದ್ರೆಯಲ್ಲಿತ್ತು. ಕೂಲೇ ಎಲ್ಲರೂ ತಮ್ಮ ಹಾಸಿಗೆಗಳಿಂದ ನೆಲಕ್ಕುರುಳಿಸಲ್ಪಟ್ಟರು. ಗಾಬರಿಯಲ್ಲಿ ಜನರು ಮನೆಗಳ ಹೊರಗೆ ದಾಟಲು ಯತ್ನಿಸಿದರು. ಆದರೆ ಹಲವರು ಹೊರಗೆ ಬರುವದರೊಳಗೆ ಮನೆಯ ವಸ್ತುಗಳಿಂದ ಮುಚ್ಚಲ್ಪಟ್ಟರು. ಒಂದು ಕ್ಷಣ ಮಾತ್ರದಲ್ಲಿ ಪಟ್ಟಣದ ಮೂರನೆಲ್ಲಿ ಎರಡು ಭಾಗದಷ್ಟು ಜನರು ಮಣ್ಣುಪಾಲಾದರು! ನೂರು ಗಟ್ಟಿಯಲ್ಲಿ ಹೆಂಗಸರು ವಿಧವೆಯರಾದರು; ಸಾವಿರಗಟ್ಟಿಯಲ್ಲಿ ಮಕ್ಕಳು ಅನಾಥರಾದರು!! ಕ್ವೆಟ್ಟಾ ಪಟ್ಟಣವು 7 ಮೈಲು ಉದ್ದಗಲದ ಸ್ಮಶಾನ ಭೂಮಿಯಂತಾಹೋಯಿತು.

ಭೂಕಂಪದ ಅನಾಹುತ.

ಜೂನ್ 2ನೇ ತಾರೀಕಿನಲ್ಲಿ ಭೂಮಿಯು ಪುನಹ ಒಂದು ಸಾರಿ 45 ಸೆಕೆಂಡುಗಳ ವರೆಗೆ ನಡುಗಿತು. ಇದರಿಂದ ಹೆಚ್ಚಿನ ಪ್ರಾಣಹಾನಿಯೂಗದಿದ್ದರೂ ಉಳಿದವರಲ್ಲಿ ಮತ್ತಷ್ಟು ಭೀತಿಯನ್ನುಂಟುಮಾಡಿದೆ. 1931ನೇ ಜನೇಸುಮಾರಿಯ ಲೆಕ್ಕದ ಪ್ರಕಾರ ಕ್ವೆಟ್ಟಾ ಪಟ್ಟಣದ ಜನಸಂಖ್ಯೆ 60,000 ಆಗಿತ್ತು. ಅದರಲ್ಲಿ ಕ್ವೆಟ್ಟಾ ಸಟಿಯಲ್ಲಿ 3500 ಜನರಿದ್ದರು; ಬಾಕಿಯವರು ಕೆಂಟೋನ್‌ಮೆಂಟಿನಲ್ಲಿದ್ದರು. ಅನಾಹುತವು ಹೆಚ್ಚಾಗಿ ಸಂಭವಿಸಿರುವುದು ಸಟಿಯಲ್ಲಾಗಿದೆ. ಸಟಿಯ ಕಟ್ಟಡಗಳು ಹೆಚ್ಚು ಕಮ್ಮಿ ಎಲ್ಲಾ ನೆಲಸಮವಾಗಿವೆ. ಎಷ್ಟೋ ನಿಲ್ಲುವ ಸ್ಥಳಕ್ಕೂ, ಅವರ ಆಫೀಸುಗಳಿಗೂ ದೊಡ್ಡ ನಷ್ಟವಾಗಿದೆ. ಅಲ್ಲಿದ್ದ 27 ವಿನೋನಗಳಲ್ಲಿ 1 ಹಾಳಾಗಿ ಕೆಲಸಕ್ಕೆ ಬಾರದವಾಗಿವೆ. ಕೆಂಟೋನ್‌ಮೆಂಟಿನ ಮಿಲಿಟರಿ ಭಾಗಕ್ಕೆ ಹೆಚ್ಚಿನ ಧಕ್ಕೆ ತಗಲಿರುವುದಿಲ್ಲ. ರೈಲ್ವೆಗಳೂ, ತಂತಿಗಳೂ ಕಕ್ಷರಿಸಲ್ಪಟ್ಟು ವರ್ತಮಾನ ಕಳುಹಿಸಲು ಕಷ್ಟವಾಯಿತು.

ನಷ್ಟದ ಪರಿಮಾಣ.

ಭೂಕಂಪದ ಪ್ರಥಮ ದಿನ ನಷ್ಟದ ಪರಿಮಾಣವೆಷ್ಟೆಂದು ಊಹಿಸಲಾಗಲಿಲ್ಲ. 2ನೇ ದಿನ ಒಂದು ಸಾವಿರ ಜನರು ಮೃತರಾಗಿರಬಹುದೆಂದು ಹೇಳಲಾಯಿತು. 3ನೇ ದಿನ ಸರ್ಕಾರದವರ ವರದಿ ಮೇರೆ 20,000 ಜನರು ಮೃತರಾದರೆಂಬ ವಾರ್ತೆ ಬಂತು. 4ನೇ ದಿನ ಅಂದರೆ ಜೂನ್ ತಾ. 3ನೇ ಮಧ್ಯಾಹ್ನದ ವರೆಗೆ ದೊರೆತ ವರ್ತಮಾನದ ಮೇರೆ 26,000 ಜನರ ಪ್ರಾಣಹಾನಿಯೂಗಿದೆಯೆಂದು ಸರ್ಕಾರದವರು ಪ್ರಕಟಿಸಿರುವರು. ಆದರೆ ಖುದ್ದಾಗಿ ನೋಡಿದ ಖಾಸಗಿ ಮಹನೀಯರ ಅಂದಾಜು ಮೇರೆ 50,000 ದಿಂದ 60,000ದ ವರೆಗೆ ಜನರು ಸತ್ತಿರಬೇಕೆಂಬ ವರ್ತಮಾನವಿದೆ. ವಹಿವಾಟುಗಳ ಅನುಕೂಲವು ಪುನಹ ಸ್ಥಾಪಿಸಲ್ಪಡುತ್ತಾ ಬಂದ ಹಾಗೂ, ಹುಡುಕುವವರ ತಿಳುವಳಿಕೆ ಹೆಚ್ಚುತ್ತಾ ಬಂದ ಹಾಗೂ ನಷ್ಟದ ಪರಿಮಾಣವು ಏರುತ್ತಾ ಇದೆ. ಕಟ್ಟಡ, ದ್ರವ್ಯ ಮತ್ತು ಇತರ ಸಾಮಾನುಗಳ ನಷ್ಟವು ಕೋಟಿಗಟ್ಟಿಯೂಗಿದೆ. ಆದರೆ ಅದರ ಅಂದಾಜು ಈಗಲೇ ಸಿಕ್ಕುವಂತಿಲ್ಲ.

ಮಿಲಿಟರಿಯವರ ಸಹಾಯ.

ಕ್ವೆಟ್ಟಾದ ಪೊಲೀಸು ಇಲಾಖೆಯವರು ಹೆಚ್ಚು ಕಮ್ಮಿ ಪೂರ್ತಿ ನಿರ್ನಾಮವಾಗಿ ಹೋದರು. ಆದುದರಿಂದ ಅಲ್ಲಿ ಶಾಂತಿ ವತ್ತು ಶಿಸ್ತು ಇಡಲಿಕ್ಕಾಗಿ ಪಂಜಾಬು ಮತ್ತು ವಾಯವ್ಯ ಪ್ರಾಂತ್ಯಗಳಿಂದ ಪೊಲೀಸರ ಸಹಾಯವು ಕಳುಹಿಸಲ್ಪಡುತ್ತಿದೆ. ಹೆಚ್ಚಿನ ಧಕ್ಕೆ ತಗಲದ ಕೆಂಟೋನ್‌ಮೆಂಟಿನಿಂದ ಮಿಲಿಟರಿಯವರು ಕೂಡಲೇ ಸಟಿಗೆ ಬಂದು ಮಣ್ಣಿನೊಳಗೆ ಹುಗಿದು ಹೋದರೂ ಜೀವದಲ್ಲಿರುವವರನ್ನು ಹೊರಗೆಳೆಯುವ ಕೆಲಸ ಪ್ರಾರಂಭಿಸಿದರು. ಅಲ್ಲದೆ ತಮಗಾಗಿ ಕೂಡಿಸಿಟ್ಟಿದ್ದ ಆಹಾರ ಪದಾರ್ಥಗಳನ್ನು ನಿರಾಶ್ರಿತರಿಗೆ ಹಂಚತೊಡಗಿದರು. ಘಾಯಗಳಾದವರನ್ನು ಆಸ್ಪತ್ರೆಗಳಿಗೆ ಸಾಗಿಸಿದರು. ಆ ಮೇಲೆ ತಾತ್ಕಾಲಿಕವಾಗಿ ಬಿದ್ದಿದ್ದ ಹೆಣಗಳನ್ನು ಲಾರಿಗಳಲ್ಲಿ ಸಾಗಿ ಸಿ ದೂರದಲ್ಲಿ ಒಂದು ಗುಡ್ಡೆ ಹಾಕಿ ಸೀನೆಎಂಣೆ ಮತ್ತು ಪೆಟ್ರೋಲಿನ ಸಹಾಯದಿಂದ ಸುಡುತ್ತಿರುವರು. ಇಲ್ಲಿ ಹಿಂದೂಗಳೂ, ಮುಹಮ್ಮದೀಯರೂ, ಕ್ರೈಸ್ತರೂ ಎಲ್ಲರೂ ಒಂದೇ ಬೆಂಕಿ ಕುಂಡದಲ್ಲಿ ದಹಿಸಲ್ಪಡುತ್ತಿರುವರು. ತಾ. 3ರ ವರೆಗೆ ಸುಮಾರು 5000 ಹೆಣಗಳು ಸುಡಲ್ಪಟ್ಟಿರುವವು. ಇನ್ನೂ 20,000 ಕ್ಕಿಂತ ಹೆಚ್ಚು ಹೆಣಗಳು ನೆಲ್ಲಸನುವಾದ ಮನೆಗಳಡಿಯಲ್ಲಿರುವವೆಂದು ಸರ್ಕಾರದವರ ಹೇಳಿಕೆ. ಹಲವು ದೊಡ್ಡ ಉದ್ಯೋಗಸ್ಥರೂ, ದೊಡ್ಡ ವ್ಯಾಪಾರಿಗಳೂ, ಧನವಂತರೂ ಮಡಿದಿರುವರು. ಸಂಸಾರಗಳೇ ಮಾಯವಾಗಿವೆ. ಭಾರವಾದ ಮಾಡುಗಳಿಂದ ಕೂಡಿದ ಮನೆಗಳಲ್ಲಿದ್ದವರೇ ಹೆಚ್ಚು ಸತ್ತಿರುವದಾಗಿದೆ ಹಳ್ಳಂವಾದ ಗುಡಿಸಲುಗಳಲ್ಲಿದ್ದ ಹಲವರ ಪ್ರಾಣ ಉಳಿದಿದೆಯಂತೆ. ಸುಮಾರು 200 ಯೂರೋಪಿಯನರು ಮೃತರಾಗಿರುವರು. XI ಸಿಖ್ ರೆಜಿಮೆಂಟು ವತ್ತು ಗುರ್ಖಾ ಸಿಪಾಯಿಗಳು ಬ್ರಿಟಿಷ್ ಸೋಲ್ಜರುಗಳ ಸಂಗಡ ವಿಶೇಷ ಸಹಾಯ ಮಾಡುತ್ತಿದ್ದಾರೆ. 11ನೇ ಸಿಖ್ ರೆಜಿಮೆಂಟಿನ ಒಬ್ಬ ಆಫೀಸರಾದ ಪಟಿಯಾಲದ ಯುವರಾಜರೂ ನಿರಾಶ್ರಿತರಿಗೆ ತುಂಬಾ ಸಹಾಯದ ಕೆಲಸಮಾಡುತ್ತಿರುವರು.

ಸುತ್ತಮುತ್ತಲಿನ ಪ್ರದೇಶಗಳ ನಷ್ಟ.

ಕಾಲತ್ತೆ ಪಟ್ಟಣವೂ, ಅದರಲ್ಲಿದ್ದ ಎರಿ ಅರಮನೆಯೂ ಪೂರ್ತಿ ನಾಶವಾಗಿದೆ. ಆದರೆ ಅಲ್ಲಿಯ ಅಸಂಖ್ಯಾತ ಜನರು ಸಂಸಾರ ಸಮೇತ ಪ್ರಾಣಾಪಾಯದಿಂದ ತಪ್ಪಿಸಿಕೊಂಡರು. ಮೂಸ್ತಂಗದಲ್ಲಿ 2000 ಜನ ಮರಣಪಟ್ಟಿರುವರು. ಕಾಲತ್ತಗೂ ಕ್ವೆಟ್ಟಾಕ್ಕೂ ಮಧ್ಯದಲ್ಲಿರುವ ಗ್ರಾಮಗಳೆಲ್ಲಾ ನಾಶವಾಗಿವೆ. ಕೆಲವು ಗ್ರಾಮಗಳಲ್ಲಿ ಶೇಕಡ 70ರಷ್ಟು ನಿವಾಸಿಗಳು ಮಣ್ಣಿನ ಪಾಲಾಗಿರುವರಂತೆ. ಗ್ರಾಮಾಂತರಗಳಲ್ಲಿ ಉಂಟಾಗಿರುವ ಪ್ರಾಣ ಹಾನಿಯು 30,000 ವೆಂದು ಅಂದಾಜು ಮಾಡಲಾಗಿದೆ

ನಿರಾಶ್ರಿತರ ಸಂರಕ್ಷಣೆ.

ಕ್ವೆಟ್ಟಾದ ಪೊಲೀಸು ಇಲಾಖೆಯು ನಾಶವಾದ ಕಾರಣಕ್ಕಾಗಿ ದಂಡಿನ ಖಾನೂನು ಜಾರಿಗೆ ತಂದಿಟ್ಟಿದ್ದು ರೋಡೆ ವಗೈರೆಯನ್ನು ತಪ್ಪಿಸಲಿಕ್ಕಾಗಿ ಹೊರಗಿನವರನ್ನು ಪಟ್ಟಣದೊಳಗೆ ಹೋಗಲು ಬಿಡುವುದಿಲ್ಲ. ನಿರಾಶ್ರಿತರನ್ನು ಪಟ್ಟಣದಿಂದ ಹೊರಗೆ ಹಲವು ಟ್ರೈನುಗಳಲ್ಲಿ ಕಳುಹಿಸುತ್ತಿದ್ದಾರೆ. ಅವರು ಮಾಮೂಲಿ ಪ್ರಾಂತ್ಯದ ರೈಲ್ವೆಯಲ್ಲಿ ಯಾವ ಸ್ಟೇಶನ್ನಿಗಾಗಲಿ ಚಾರ್ಜ್ ಇಲ್ಲದೆ ಹೋಗಬಹುದು. ಅಲ್ಲಿ ಆರ್ಟಿಫೀಶಿಯಲ್ ರೀಫ್ ಫಂಡಿನ ವ್ಯವಸ್ಥೆಯಾದರೂ ಪ್ರಾರಂಭಿಸುವವರೆಗೆ ವ್ಯಾಪ್ತಿ ನಿರಾಶ್ರಿತರನ್ನು ಹೊರಗೆ ಕಳುಹಿಸುವರಂತೆ. ನಂತರ ಬಿಡುವುದಿಲ್ಲ. ಮಣ್ಣಿನೊಳಗೆ ಹೂತುಹೋಗಿರುವವರನ್ನು ಹೊರತೆಗೆಯುವ ಕೆಲಸವು ಸಾಧ್ಯವಾ[illegible]

"ಕೊಡಗು"

ಸಾಹಿತ್ಯ ಸಂಚಿಕೆ.

ನಂಬರು ೨೦.

ತಾ ೨೫ನು ಜನವರಿ ಶುಕ್ರವಾರ ೧೯೩೩.

ಶ್ರೀಮದ್ರಾಮಾಯಣದಲ್ಲಿ ಭರತನ ಪಾತ್ರ.

(ಶ್ರೀ. ಲಕ್ಷ್ಮೀಪತಿ.)

ಶ್ರೀ ಮಹಾವಿಷ್ಣುವು ಮನುಷ್ಯನಾಗಿ ಎರಡು ಭುಜಗಳುಳ್ಳವನಾಗಿ ಭೂಮಿಯ ಮೇಲೆ ಅವತರಿಸಬೇಕೆಂಬ ನಾರದ ಋಷಿಗಳ ಇಷ್ಟದಂತೆ ಉಳಿದೆರಡು ಭುಜಗಳನ್ನೇ ಭರತ ಮುತ್ತು ಶತ್ರುಘ್ನರನ್ನಾಗಿ ಮಾಡಿಕೊಂಡು ತಾನು ರಾಮಾವತಾರವನ್ನು ಮಾಡಿದನು. ಈ ರಾಮಾವತಾರದ ಕತೆಯನ್ನರಿಯದವರು ಈ ಪ್ರಪಂಚದಲ್ಲಿ ಸಾಮಾನ್ಯವಾಗಿ ಯಾರೂ ಇಲ್ಲ. ಬಹುಮಂದಿ ಸಾಧಾರಣವಾಗಿ ಸೀತಾರಾಮರ ಚಿತ್ರವನ್ನೂ, ಅನಂತರ ಲಕ್ಷ್ಮಣನ ಚಿತ್ರವನ್ನೂ ಸುಲಭದಲ್ಲಿ ಗ್ರಹಿಸುವರು. ಭರತನ ಚಿತ್ರವು ಹೃದಯದಲ್ಲಿ ಮೂಡಬೇಕಾದರೆ ಸ್ವಲ್ಪ ಸಮಯವು ಬೇಕಾಗುವುದು. ಇದಕ್ಕೆ ಅವನ ತಾಯಿಯು ಮಾತ್ಸರ್ಯವೂ ಕಾರಣವಾಗಿರುವುದು. ತಾಯಿಯು ಈ ಒಂದು ಅವಗುಣವು ಭರತನ ಕೀರ್ತಿಯನ್ನು ಮರೆಸಲು ಪ್ರಯತ್ನಿಸುವುದು. ಆದರೆ ವಿಷ್ಣುವಿನ ಮೂರನೆಯ ಭುಜವಾದ ಆ ಭರತನು ಇವೆಲ್ಲದರಿಂದಲೂ ದೂರನು. ಪಾಪವೆಂಬುದೇನೆಂಬುದನ್ನೇ ಅರಿಯದವನು. ಶ್ರೀರಾಮನು ಅತ್ತ ವನವಾಸ ದೀಕ್ಷೆಯನ್ನು ತಾಳುತ್ತಿರಲು ಇತ್ತ ಈಡೆ ಸೋದರ ಮಾವನ ಮನೆಯಲ್ಲಿ ಭರತನು ಉದ್ವಿಗ್ನಚಿತ್ತನಾಗಿ ಕರಾಳ ಸ್ವಪ್ನಗಳನ್ನು ಕಾಣುತ್ತಿದ್ದನು. ಅದರಿಂದ ರಾಮನಿಗೂ ಸೀತೆಗೂ ಹಾನಿಯೂ ಆದಿರಲೆಂದು ಕ್ಷಣ ಕ್ಷಣಕ್ಕೂ ಬಯಸುವನು. ತನ್ನನ್ನು ಕರೆಯವುದಕ್ಕೆ ಬಂದ ದೂತರು, ನಿಜಾಂಶವನ್ನು ಮರೆಸಿದರೂ ತಾನು ಕಂಡ ಕನಸಿನ ಫಲಿತಾಂಶವನ್ನು ಊಹಿಸಿ ಮೂರ್ಖದಲ್ಲಿಲ್ಲಿಯೂ ತಂಗದೆ ಅಯೋಧ್ಯೆಯನ್ನು ಸೇರಿ ತಂದೆಯ ನಿಧನವನ್ನರಿತು ರಾಮನ್ನಿಲ್ಲೆಂಬುದನ್ನು ಎರಡನೆಯದಾಗಿ ಕೇಳುವನು. ರಾಮನ ವನವಾಸ ವಾರ್ತೆಯು ಅವನ ಹೃದಯವನ್ನು ಅಲ್ಲೋಲಕಲ್ಲೋಲ ಮಾಡುವುದು. ಭ್ರಾತೃವಾತ್ಸಲ್ಯದ ಅಮಲಿನಲ್ಲಿ ತಾಯಿಯು ನೂಡಿದ ಮಹಾಪರಾಧವನ್ನು ನೆನೆದು ನೆನೆದು ಕೌಸಲ್ಯಾ ಗೃಹವನ್ನು ಸೇರುವನು. ಒಹು ಪರಿಯಾಗಿ ಅವಳ ಕ್ಷಮಾಪಣೆಯನ್ನು ಯಾಚಿಸುವನು. ಅನೇಕ ವಿಧವಾದ ಶಪಥಗಳನ್ನು ಮಾಡುವನು. ತಾನು ನಿಷ್ಕಪಟಿಯೆಂಬುದನ್ನು ತನ್ನ ಎದೆ ಬಿಚ್ಚಿ ತೋರುವನು. ಕೌಸಲ್ಯೆಯ ಮನಸ್ಸಿನಲ್ಲಿ ರಾಮನಿಗಿಂತಲೂ ಭರತನೇ ವಿಗಿಲೆಂಬ ಪುತ್ರವಾತ್ಸಲ್ಯವನ್ನು ಕರೆತಂದು ತೋರುವನು. ರಾಜಾಧಿರಾಜನಾಗಬೇಕಾಗಿದ್ದ ರಾಮನನ್ನು ಹಿಂದಕ್ಕೆ ಕರೆತರಲು ಪಣತೊಟ್ಟು ಅದಕ್ಕಾಗಿ ಆರಣ್ಯ ಪ್ರದೇಶವನ್ನೂಡುವನು. ಪಿತೃವಾಕ್ಯ ಪರಿಪಾಲನಕ್ಕಾಗಿ ರಾಮನ ಸ್ಥಳದಲ್ಲಿ ತಾನೆ ಹದಿನಾಲ್ಕು ವರ್ಷಗಳ ವನವಾಸ ದೀಕ್ಷೆಯನ್ನು ಕೈಕೊಳ್ಳಲು ಮನಸ್ಸು ಮಾಡುವನು. ಆ ಸಾರ್ವಭೌಮನನ್ನು ರಾಜಮರ್ಯಾದೆಯಿಂದ ಶೀಘ್ರದಲ್ಲಿಯೇ ಕೋಸಲಕ್ಕೆ ಕರೆತರಬೇಕೆಂಬ ಕಾತರದಿಂದ ಚತುರಂಗ ಸೇನೆಯೊಡನೆ ರಾಮನ್ನಿಧಿಗೆ ಹೊರಡುವನು.

ಭರತನು ರಾಮನಿಗೆ ತಮ್ಮನಾಗಿರುವುದಕ್ಕಿಂತಲೂ ರಾಮನ ಅಚ್ಚಿನ್ನ ಭಕ್ತನಾಗಿ ಇನ್ನು ಮುಂದೆ ತೋರುವನು. ತನ್ನ ಪ್ರಯಾಣ ಕಾಲದಲ್ಲಿ ಎಲ್ಲೆಲ್ಲಿಯೂ ರಾಮಪಾದಗಳನ್ನೇ ಕಾಣುವನು. ಅವಿಶ್ರಾಂತವಾಗಿ ಅವನ ಕಂಬನಿಗಳಿಂದ ನೀರು ಸುರಿಯುತ್ತಿರುವುದು. ರಾಮನ ದರ್ಶನಾತುರವು ರಥತುರಗಗಳಿಗಿಂತ ಮನೋವೇಗದಲ್ಲಿ ಹಾರಬಲ್ಲ ತನ್ನ ಕಾಲ್ನಡಿಗೆಯೇ ಉತ್ತಮವೆಂದು ನಡೆದೇ ಹೊರಡುವನು. ಪ್ರಭುವನ್ನು ಕಾಣಲು ಹೋಗುವವನು ನಡೆದೇ ಹೋಗಬೇಕೆಂಬ ಪ್ರಭುಭಕ್ತಿಯಿಂದ ಕಾಲ್ನಡಿಗೆಯಲ್ಲೇ ಪ್ರಯಾಣ ಮಾಡುವನು. ದಾರಿಯಲ್ಲಿ ಮೂಡಿದ ರಾಮನ ಸ್ಮತಿಯೊಂದು ಪಾದಮೂಲವನ್ನೂ ಗುರುತಿಸಿ ಹೋದಶ ಪೂಜೆಗಳನ್ನು ಮಾಡಿ ನಮಸ್ಕರಿಸಿ ಅದನ್ನು ಬಿಟ್ಟು ಹೋಗಲಾರದೆ ಸಂಕಟದಿಂದ ಪರಿತಪಿಸುವನು. ರಾಮನು ಆಲಿಂಗಿಸಿದಿತ್ತ ಗುಹನ ಅಂಗಸ್ಪರ್ಶದಿಂದ ಪರಮ ಸುಖಾನುಭವವನ್ನು ಪಡೆದು ರಾಮನ ತಂಗಿದ್ದ ಸ್ಥಳವನ್ನು ಪರಮ ಪುಣ್ಯಕ್ಷೇತ್ರವೆಂದು ತಿಳಿಯುವನು. ಏಕಚ್ಛತ್ರಾಧಿಪತಿಯೂಗಬೆ ಕಾಗಿದ್ದ ತಮ್ಮಂಣನು ಲೋಕಮಾತೆಯೂದ ಸೀತೆಯೊಡನೆ ತೃಣತಲ್ಪದಲ್ಲಿ ಮಲಗಿದ್ದರೆಂಬ ವ್ಯಥೆಯು ಅವನನ್ನು ಮಹಾತ್ಮಕ್ರಾಂತನನ್ನಾಗಿ ಮಾಡುವುದು.

ತನ್ನ ಮಾತಿಗೆ ಒಡಂಬಡದೆ ವನವಾಸ ನಿಶ್ಚಿತನಾದ ರಾಮನ ವಾಗ್ಬಂಧನಕ್ಕೆ ಸಿಲ್ಕಿ ತಾನೂ ಋಷಿ ದೀಕ್ಷೆಯಿಂದ ರಾಮಾಗಮನ ಪರ್ಯಂತರ ಅಸಾಧ್ಯವ್ರತ ನಿಷ್ಠನಾಗಿರುವುದಾಗಿ ಪಣತೊಡುವನು. ರಾಮಪಾದುಕಾಧರನಾಗಿ ರಾಮವಿರಹ ತಾಪದಿಂದ ಬೆಂದ ಅಯೋಧ್ಯೆಯನ್ನು ಪ್ರವೇಶಿಸದೆ ನಂದೀಗ್ರಾಮದಲ್ಲಿದ್ದುಕೊಂಡು ರಾಮಧ್ಯಾನದಲ್ಲಿ ತಾಪಸನಂತೆ ಕೃಷ್ಣಾಜಿನವನ್ನುಟ್ಟು ದಭರ್ತಶಯನನಾಗಿ ಹದಿನಾಲ್ಕು ವರ್ಷಗಳನ್ನು ಸೂಕ್ಷವನು.

ರಾಮೇತರಾವಣರ ಜ್ಯೇಷ್ಠ ಸಾಮರ್ಥ್ಯವನ್ನರಿತು ರಾಮನ ಸಹಾಯಕ್ಕಾಗಿ ಸೇನಾ ಸಂಗ್ರಹವನ್ನು ಮಾಡುವನು. ಅಷ್ಟರಲ್ಲಿ ರಾವಣಗಮನವಾಗುವುದು. ಆದರೂ ತಾನೇ ಬಹುದೂರದ ವರೆಗೆ ಹೋಗಿ ಅಣ್ಣನಿಗೆ ಪಾದುಕೆಯನ್ನೊಪ್ಪಿಸಿ ರಾಮ ಪಟ್ಟಾಭಿಷೇಕ ಕಾಲದಲ್ಲಿ ತನ್ನ ದೀಕ್ಷಾವಿಸರ್ಜನೆಯನ್ನು ಮಾಡಿಕೊಂಡು ಯುವರಾಜ್ಯಭಿಷಿಕ್ತನಾಗುವನು.

ಹೀಗೆ ಭರತನ ವಾತ್ಸಲ್ಯವು ಲೋಕಕ್ಕೊಂದು ಉತ್ತಮ ಮಾದರಿಯಾಗಿರುವುದು. ಹಿರಿಯನು ರಾಜ್ಯಾಭಿಷಿಕ್ತನಾಗುವನೆಂದು ಕಿರಿಯವನು ಕುಬ್ಜಿ ಅವನ ಕೊಲೆಗೂ ಹೇಸದೆ ಸ್ವಾರ್ಥ ಸ್ವಾಭಿಮಾನದಿಂದ ತನಗಡ್ಡ ಬರುವವರೆಲ್ಲರನ್ನೂ ಕೊನೆ

ಗಾಣಿಸಿ ಸಿಂಹಾಸನವನ್ನೇರಿದ ಎಷ್ಟು ರಾಜರ ಚರಿತ್ರೆಗಳನ್ನು ವಾಚಕರು ಕಂಡಿಲ್ಲ. ಹೀಗಿರುವಾಗ ಅನಾಯಾಸವಾಗಿ ಕೈಗೆ ಬಂದ ಅಷ್ಟೈಶ್ವರ್ಯವನ್ನು ನೂಕಿ ಧರ್ಮ ಸತ್ಯಗಳ ಪಾಲನೆಗಾಗಿ ಅದರ ಅನುಪಸ್ಥಾಪನೆಗಾಗಿ ತಾನವುಗಳನ್ನೊಲ್ಲದೆ ತನ್ನ ಬಂಧುವಿನ ಪ್ರಭುವಿನ ಕಷ್ಟವನ್ನು ತಾನೂ ಉಂಟು ಮಾಡಿಕೊಂಡು ಅದನ್ನು ಪರಿಹರಿಸಿ ಗೆಡುವು ತೀರಲು ಅಣ್ಣನ ರಾಜ್ಯವನ್ನು ಅಣ್ಣನಿಗೇ ಒಪ್ಪಿಸಿ ನೆಮ್ಮದಿಯನ್ನು ಪಡೆದ ಭರತನಂಥವರು ಹುಡುಕಿದರೆಷ್ಟು ಮಂದಿ!! ತನಗಾಗಿ ತನ್ನ ತಾಯಿಯು ಸರ್ವನಾಶಗಳಾದರು ತನ್ನ ತಪ್ಪೆಂದು ಅದಕ್ಕಾಗಿ ಪಶ್ಚಾತ್ತಾಪಪಟ್ಟು ಲೋಕಶಾಂತಿಯನ್ನು ಹೂಡಿದವನು ಭರತನೊಬ್ಬನೇ. ವೀರಾಧಿವೀರನಾಗಿ ತೋಳುಬಲದಿಂದ ಗೆಲ್ಲಬಲ್ಲ ರಾಜ್ಯವು ಈ ಬಗೆಯ ಅನ್ಯಾಯದಿಂದ ದೊರೆಯಲು ಅದನ್ನು ಕಾಣಿಸಿದಲೂ ನೋಡದೆ ತಾನು ಮಹಾಯೋಗಿಯೊದನು. ಈ ಯೋಗಬಲದಿಂದಲೇ ತನ ಅಂತರ್ಯಾಮಿ ತಾದೆಯನ್ನೂ, ಪ್ರಭುವನ್ನೂ, ಗುರುವನ್ನೂ, ಸತ್ಯವನ್ನೂ, ಧರ್ಮವನ್ನೂ ಕಂಡುಂಡು ಲೋಕಕ್ಕೆ ತಾನೊಬ್ಬ ಗುರುವಾದನು.

ಅವನ ಭ್ರಾತೃವಾತ್ಸಲ್ಯವು ಅಸಾಧಾರಣವಾಮದು, ಪ್ರಭುಭಕ್ತಿಯು ವರ್ಣನೀಯವಾದುದು. ಸ್ವದೇಶ ಪ್ರೇಮವು ನಿಷ್ಕಲ್ಮಶವಾದು. ಅವನು ತಿಳಿದ ಪರಮಾತ್ಮನ ಅನುಭವವು ಲೋಕಕ್ಕೆಂದು ಅತುಲ ದೃಷ್ಟಾಂತವಾಗಿರುವುದು.

ಕರ್ಣನ ದುರ್ಯೋಧನನ ಪಕ್ಷವನ್ನು ವಹಿಸಿದ್ದೇಕೆ?

ಮಹಾಭಾರತವನ್ನು ಎಲ್ಲರೂ ಓದಿಯೇ ಇರುತ್ತೀರಿ. ತ್ರೇತಾಯುಗಾಂತ್ಯದ ದ್ವಾಪರ ಯುಗದಲ್ಲಿ ಬಂದು ಪ್ರೇಮವು ಇರಲಿಲ್ಲವೆಂದು ಈ ಕಥೆಯಿಂದ ವ್ಯಕ್ತವಾಗುತ್ತದೆ. ಭರತನು ತಾನತ್ತ ಒಲಿದು ಬಂದ ರಾಜ ಲಕ್ಷ್ಮಿಯನ್ನು ಕಂಡೆಕ್ಷಿಯೂ ನೋಡದೆ ತನಗಿಂತಲೂ ಹಿರಿಯನಾದ ರಾಮನಿಗೆ ವಾಪಸು ಕೊಡುವಾಗ ತಾನಸಿಂಹಾಸನ ಆರೋಹಣ ಮಾಡುವುದು ಧರ್ಮಕ್ಕೂ, ಸತ್ಯಕ್ಕೂ ವಿರುದ್ಧವೆಂದು ತಾನ ಸಹಸ್ವಾಧ್ಯಾಯಿಯಾದ ಯೋಗಿಯೊದನು. ಮಹಾ ಭಾರತದಲ್ಲಿ ಅಂಥ ನೃಪತಿಯು ತಾನಾಗಿ ತನ್ನ ಸೋದರನಾದ ಪಾಂಡವರಿಗೆ ರಾಜ್ಯವನ್ನೊಪ್ಪಿಸಿದ್ದರೂ ತನ್ನಮಕ್ಕಳನ್ನು ಸರಯಾಗಿ ತಿದ್ದದೆ ಅವರು ಈರ್ಷ್ಯೆಗೆ ತಾನೂ ಸಿಲಿ ಕಾಲಾನುಕ್ರಮದಲ್ಲಿ ಪಾಂಡು ಕುಮಾರರಿಗೆ ಸಲ್ಲಬೇಕಾದ ರಾಜ್ಯವನ್ನು ದತ್ತಾಪಹಾರ ಮಾಡಲು ಹೇಸನು. ಹಾಗೂ ಧರ್ಮ ಪೂಜ್ಯನಾದ ಯುಧಿಷ್ಠಿರನು ಹಿರಿಯರ ಆಣತಿಯಾ ತಲೆಗೊಟ್ಟು ರಾಜ್ಯವನ್ನು ವಿಭಾಗ ಮಾಡಿಕೊಂಡು ಇದ್ದಸ್ಥಳದಲ್ಲಿ ತಾನಿರಲು ಸಮ್ಮತಿಸುವನು.

ಇತ್ತಲಾಗಿ ಬಾಲ್ಯದಲ್ಲಿ ದೂರ್ವಾಸ ಮುನಿಗಳನ್ನು ಮೆಚ್ಚಿಸಿ ಕುಂತಿಯು ಏದು ಮಂತ್ರ ಸಿದ್ಧಿಯನ್ನು ಪಡೆದಳು. ಬಾಲ್ಯಚಾಪಲವು ಬಿಡದಿರಲು ಆ ಋಷಿಯ ಮೊದಲ ಮಂತ್ರ ಶಕ್ತಿಯನ್ನು ಪರೀಕ್ಷಿಸುವುದರ ಸಲುವಾಗಿ ಗಂಗಾ ನದಿಯಲ್ಲಿ ಮಿಂದು ಆ ಮಂತ್ರ ಪೂರ್ವಕವಾಗಿ ಸೂರ್ಯನನ್ನಾರಾಧಿಸಲು ಸೂರ್ಯನ ಪ್ರತ್ಯಕ್ಷನಾಗಿ ಆ ಮಂತ್ರದ ಫಲವನ್ನು ನುಗ್ರಹಿಸಲು ಕುಂತಿಯು ಕನ್ಯೆಯಾಗಿರುವಾಗಲೇ ಒಬ್ಬ ಪುತ್ರನನ್ನು ಪಡೆದಳು. ತನಗಿನ್ನು ಇದುಂದ ಅಪಮಾನವಾಗಬಹುದೆಂಬ ಭಯದಿಂದ ಮಗುವನ್ನು ಗಂಗಾ ದೇವಿಯ ಮಡಿಲಲ್ಲಿ ಹಾಕಿ ಅರಮನೆಗೆ ಹಿಂದಿರುಗಿದಳು. ಬೆಸ್ತನ ಕಂಗತ್ಮವಾದ ಈ ಮಗುವು ರಾಧೇಯನೆಂಬ ಹೆಸರಿನಿಂದ ಅಜ್ಞಾತವಾಗಿ ಬೆಳೆದು ಪರಶುರಾಮನಿಂದ ಅಸ್ತ್ರವಿದ್ಯಾಪಾರಂಗತನಾಗಿ ಪಾಂಡವ ಕುಮಾರರ ವಿದ್ಯಾರಂಗವನ್ನು ಪ್ರವೇಶಿಸುವನು. ಸೂರ್ಯನ ತೇಜಸ್ಸಿನಿಂದ ಕ್ಷತ್ರಿಯ ಕ್ಷೇತ್ರದಲ್ಲಿ ಜನಿಸಿದ ಆ ಕರ್ಣನಿಗೆ ವೀರ್ಯ ಕೆಚ್ಚು ಅಗಲೇ ಉಕ್ಕುತ್ತಿತ್ತು. ಅರ್ಜುನನಾದ ಕರ್ಣನ ಬಾಹುಬಲವನ್ನು ತಿಳಿದು ಕ್ಷಾತ್ರತ್ಯಾಗುಣಕ್ಕನುಸಾರವಾಗಿ ಮನ್ನಿಸಬೇಕಾದುದಿತ್ತು. ಕರ್ಣನು ತನ್ನ ಹುಟ್ಟನ್ನೇ ತಿಳಿಯದೆ ತನ್ನನ್ನು ಬೆಳಸಿದವರ ಗುಣಕ್ಕನುಸಾರವಾಗಿ ಶಿಷ್ಯನ ಶಕ್ತಿಯನ್ನೂ, ವಿದ್ಯೆಯನ್ನೂ ತೆಗಳಿದನು. ಪಾಂಡವರ ಮೇಲೆ ಕರ್ಣನ ದ್ವೇಷವು ಇಲ್ಲಿಯೇ ಪ್ರಾರಂಭವಾಗುವುದು. ಅಷ್ಟೇ ಅಲ್ಲದೆ ಅರ್ಜುನನೂ, ಅವನ ಗುರುವೂ ಕರ್ಣನ ಕುಲವನ್ನೂ, ಜಾತಿಯನ್ನೂ, ಜನನವನ್ನೂ ಕುರಿತು ಆಡುವಾದ ಮಾತುಗಳನ್ನಾಡಲು ದುರ್ಯೋಧನನು ಹತ್ತಿರ ಬಂದು ಕರ್ಣನಿಗೆ ಆಶ್ರಯವನ್ನಿತ್ತನು. ಅವತ್ತನ್ನು ರಾಜನನ್ನಾಗಿ ಆಗಲೇ ಮಾಡಿಬಿಟ್ಟನು. ತಾನು ಚಕ್ರವರ್ತಿಯಾಗಿರುವಾಗ ಅವನನ್ನು ತನ್ನ ಸಮಾನತಾಪದಲ್ಲಿ ನಿಲ್ಲಿಸಿಕೊಂಡನು.

ಕರ್ಣನಾದರೋ ಸೂರ್ಯವಂಶ ಸಂಭೂತನು. ಪರಶುರಾಮವಧಿಯು. ಮಹಾ ಬ್ರಹ್ಮಚಾರಿಯು. ಉದಾರಾತ್ಮನೆ ಶೂರನು. ಛಲವಾದಿಯು. ಈ ವೇಳೆಗಾಗಲೇ ಕರ್ಣನಿಗೆ ತಾನು ಕುಂತಿಯ ಮಗನೂ, ಧರ್ಮರಾಯನ ಅಣ್ಣನೂ ಆಗಿರುವೆನೆಂದು ತಿಳಿದಿದ್ದರೆ ಅವನೂ ಪಾಂಡವರ ಪಕ್ಷ ವಹಿಸುತ್ತಿದ್ದನೋ ಏನೋ? ಧರ್ಮರಾಯನಿಗಾಗಲೀ ಅವನ ತಮ್ಮಂದಿರಲ್ಲಿ ಯಾರಿಗೇ ಆಗಲೀ ತಿಳಿದಿರುತ್ತಿದ್ದಲ್ಲಿ ಮಹಾ ಭಾರತದ ಕಥೆಯೇ ತಿರಲಿಲ್ಲ. ಕರ್ಣನೇ ಏಕ ಚಕ್ರಾಧಿಪತಿಯಾಗಿರುತ್ತಿದ್ದನು. ಆದರೆ ಕೃಷ್ಣನಿಗೆ ತಾನು ಕುಂತೀ ಪುತ್ರನೆಂಬುದೂ, ಪಾಂಡವರ ಅಜ್ಞಾತವಾಸವೂ ತಿಳಿಯಿತು. ಈ ಸಮಯಕ್ಕೆ ಕರ್ಣ ಮತ್ತು ದುರ್ಯೋಧನರ ಮೈತ್ರಿಯು ನಿರ್ಭೇದ್ಯವಾಗಿದ್ದಿತು. ಶ್ರೀ ಕೃಷ್ಣನು ಉಪಾಯದಿಂದ ಕರ್ಣನ ಪಕ್ಷವನ್ನು ಸೆಳೆಯಲು ಪ್ರಯತ್ನಪಟ್ಟನು. ಪಂಚ ಪಾಂಡವರಿಂದ ಸೇವಾವೃತನಾಗಿ ಭದ್ರಾಸನದ ಸಿಂಹಾಸನವನ್ನೇರಿ ಬೆಳ್ಗೊಡೆಯಲ್ಲಿ ಬೆಳಗಿ ದೇವತೆಗಳಿಗೂ ಮಿಗಿಲಾದ ಭೂಮಿಯನ್ನಾಳುವ ಸುಯೋಗವನ್ನು ದೊಡ್ಡದರೂ ಕರ್ಣನ ಮನಸ್ಸು ಎರಡಾಗಲಿಲ್ಲ. ಅವನು ಕುಂತೀ ಪುತ್ರನೆಂದು ಪರಿಚಯವನ್ನು ಇಷ್ಟು ತಡವಾಗಿ ಮಾಡಿಕೊಟ್ಟದೇ ಇದಕ್ಕೆ ಕಾರಣ. ಇದರಿಂದಲೇ "ಕರ್ಣ ಪಾಂಡವರ ಪಕ್ಷವನ್ನು ವಹಿಸಬಾರದು—ಆದರೂ ಅವನ ವಿಷಯದಲ್ಲಿ ಪಾಂಡವರ ಮೇಲೆ ವಾತ್ಸಲ್ಯವು ಹುಟ್ಟಿ ಅವರ ಕಾಲಿಗೆ ಅವನ ಕೈಯು ಹಿಂತಿಗೆಯುವಂತಾಗಬೇಕು" ಇಷ್ಟೇ ಕೃಷ್ಣನ ಆಶಯವಾಗಿತ್ತೆಂದು ತೋರುವುದು.

ಕರ್ಣನ ನಿಜತ್ವವು ಕೌರವನಿಗೆ ಗೊತ್ತಿದ್ದಿತೆಂಬುದಕ್ಕವಾಗಿದೆ. ಒಂದು ವೇಳೆ ಅವನಿಗೆ ತಿಳಿದಿದ್ದರೂ ಕರ್ಣನ ಸಹಾಯವನ್ನಪೇಕ್ಷಿಸಿ ದಾಯಾದ ಮಾತ್ಸರ್ಯದಿಂದ ನಿಜವನ್ನು ಮರೆಸಿದನೆಂದು ಬಾವಿಸಿದರೂ ತಪ್ಪಾಗದು. ಇನ್ನು ದುರ್ವಾಸನು ಕುಂತಿಗೆ ಪತ್ಯ ತಾಯಿಯಂದ ಕುಂತಿ. ಕೊನೆಯು ವರೆಗೂ ಕುಂತಿಯು ಕರ್ಣನನ್ನು ಮಹಾ ಶೂರನಾದ ಕರ್ಣನು ಇತರ ಮಕ್ಕಳೊಡನೆ ಹೋರಾಡುವನೆಂದು ಹೆದರಿ ಯಾ ಕಾಲದಲ್ಲಿ ಕರ್ಣನಿಗೆ ತಾನು ತಾಯಿಯೆಂದು ಹೇಳಿಕೊಳ್ಳಲು. ಅದು ವರೆಗೂ ತಾಯಿಯ ಹವ್ಯಾಸನ್ನರಿತ ಭಾರ್ಗವನು ತನ್ನ ಹಿಂದಿನ ಬವಣೆಗಳನ್ನು ನೆನೆದು ಶೋಕಿಸುವನು. ಕೌರವನು ಈ ಸಮಯದಲ್ಲಿ ತನ್ನನ್ನು ನಂಬಿ ವರನಾದನೆಂದು ಸಶಕ್ತ ತ್ಯಾಪಗೆಳ್ಳನವನು ಭಾಗ್ಯವಾನವೂ ಬೇರೂರಿದರೂ ಕೌರವನ ಮೇಲಿನ ಮೈತ್ರಿಯು—ಬದಲ್ಲಿಯೇ ಲೋಪಗೊಂಡ ಆ ಬಾಂಧವ್ಯವು ಅಸ್ಥಳಿಯದೆ ಕುಂತಿಯ ಪ್ರಾರ್ಥನೆಯನ್ನು ನಿರಾಕರಿಸಿದನು. ಅರ್ಜುನನೊಬ್ಬನನ್ನುಳಿದು ಇತರ ಪಾಂಡವರನ್ನು ಯುದ್ಧದಲ್ಲಿ ಕೊಲ್ಲೆನೆಂದನು. ತೊಟ್ಟ ಬಾಣವನ್ನು ತೆಗೆಯುವುದಿಲ್ಲವೆಂದನು. ಇಟ್ಟ ಗುರಿಯನ್ನು ಬದಲಾಯಿಸುವುದಿಲ್ಲವೆಂದು ಪಾಂಡವರಿಗಾಗಿ ಕವಚ ಕುಂಡಲಗಳನ್ನು ಕೊಟ್ಟು ಬಿಟ್ಟು ಕೊನೆಗೆ ತನ್ನ ಸರ್ವಸ್ವವನ್ನೂ ಪಾಂಡವರಿಗಾಗಿ ತೆತ್ತು ವನ್ನು ಮಾತ್ರ ಕೌರವ ರಕ್ಷಣೆಗಾಗಿ ಇಟ್ಟುಕೊಂಡನು.

ಹೀಗೆ ಕರ್ಣನಿಗೆ ಪಾಂಡವರಿಂದ ಯಾವ ಉಪಕಾರವೂ ಆಗದಿದ್ದರೂ ತಾನು ತನ್ನ ತೇಜಸ್ಸಿನ್ನೂ ಅವರಿಗೆ ಯೇರಿದ ಬರಡು ಬಿಲ್ಲನ್ನು ಕೈಯಲ್ಲಿ ಧರಿಸಿ ಕೌರವನಿಗಾಯುದ್ಧ ರಂಗದಲ್ಲಿ ನಿಂತಿದನು. ಹೀಗೆ ಮಾಡಿದುದು ತಪ್ಪಲ್ಲವೇ? ಅಪರಾಧವಲ್ಲವೇ. ಅಲ್ಲ. ದುರ್ಯೋಧನನು ಪಾಂಡವರ ಹಿರಿಯನಾಗಿದ್ದ ಕರ್ಣನಿಂದಲೇ ಪಾಂಡವ ವಂಶವನ್ನು ನಿರ್ಮೂಲ ಮಾಡಬೇಕೆಂದು ಆಸೆಪಟ್ಟನು. ದುರದೃಷ್ಟದಿಂದಲೇ ವಿಧಿಯು ಅವನನ್ನು ಈ ರೀತಿ ಪಂಚಿ ಕೊನೆಗೂ ಜೀವವಿರುವ ತನಕ ತನಗೆ ಉಪ್ಪನ್ನಿಕ್ಕಿ ಕ್ಷತ್ರಿಯನ್ನಾಗಿಸಿ ಪ್ರೀತಿಯನ್ನು ತೋರಿಸಿದ ಕೌರವನಿಗಾಗಿ ತರ್ವಸ್ವವನ್ನೂ ನೀಗಿ ದೇಹವಿಲಿಯನ್ನಿತ್ತ ಕರ್ಣನು ಇಲೋಕಮಾನ್ಯನಾಗಿರುವನು. ಇನ್ನು ಆ ಭರತನಂತೆ ಬರಕಕ್ಕ ರಾಜ ಲಕ್ಷ್ಮಿಯನ್ನು ಅತಿಸಿದೆ ತನ್ನನ್ನು ನಂಬಿದನ್ನು ಕೈಬಿಡದೆ ಸ್ವಾರ್ಥ ತ್ಯಾಗಿಯೊದ ಯೋಗಿಯೊದನು.

ಲಕ್ಷ್ಮೀ

ಕಾಮರ್ಪ್ಪನ ಪ್ರತಾಪ.

ನನ್ನ ಸೋದರ ವಂಚನೆಗಳೂ ಬೆಳ್ಳಿ ವಾದುಲ್ಲಿ ನಾವೆಲ್ಲರೂ ಎಂದರೆ ನಾನು, ಅಣ್ಣ, ಐಯ್ಯ, ಲ, ಡಾಲಿ, ಚುಬ್ಬಕ್ಕ ನುತ್ತು, ಕಾಳಯ್ಯ ಇವ ನಾವೋಕ್ತಿನಲ್ಲಿ ಸೇರಿದ್ದವು. ಮಂದುವೆಯೊಗಿ ರು ದಿವಸಗಳಾಗಿ ಹೋಯಿವು. ನೆಂಟರಿಷ್ಟರೆ ಟ್ಟಿ ಹೊಟ್ಟು ಹೋದರು. ಆದರೆ ನಾವಿನ್ನು ಕ್ಕ ಇನ್ನೆರಡು ದಿವಸಗಳು ತವೂಷಿಗಾಗಿ ಇದಣವೆಂದು ಮಾಡಿದೆವು. ಒಂದು ದಿನ ಸಾಯಂ ಗಂಟೆಯ ಹೊತ್ತಿಗೆ ಏನಾದರೂ ತಿಂಡಿ ಜಿಡಿದುಕೊಂಡು ಬರೋಣವೆಂದು ಹೊರಟೆವ

ನಮಗೆ ಮೂರು ಒಂಟಿ ನಲ್ಲಿಯ ಜೋಡು ನಲ್ಲಿಯ ಕೋವಿಗಳೂ ಸಿಕ್ಕಿ ಕೇರಿಯಿಂದ ಬರುವಾಗ ನಾಲ್ಕು ಜೆ. ಡು ಬಾ ಎಂದು ಹೇಳಿದ್ದೆ. ಅವನ ಅವು ಜೋಡಿ ನಲ್ಲಿ ಕೋವಿಗೆ ಲ ತೋಟಗಳು ಸರಿಹೋಗುವಂಥ ಎ ದುವು. ಅವುಗಳನ್ನೇ ಹೆಗಲಮೇಲೆ ವು ಊರಿನಿಂದ ಸುಮಾರು ಒಂದು ದೂರ ಹೋಗಿದ್ದೆವು. ಕತ್ತಲೆಯ ಕಾಣು ಕಾಣದ ಹಾಗಾಯಿತು. ನ ರುಗುತ್ತಿದ್ದೆವು. ಕಾಡಿನಲ್ಲಿ ನಿಡ ಒಂದು ತೊರೆ ಬಂದೆವು. ತಾಡಿನ ಬೀಮರವಿತ್ತು. ಹುಣ್ಣಾ

ಏನನ್ನೋ ಕೆಂಡ ಹಾಗಾಯಿತು. "ಕ್ಟ್ಟ್ಟಚಿ, ಪೆರ್ತ್ ನಲ್ಲ ಜಾತಿ ಕ್ಟ್ಟ್ಟಚಿ" ಎಂದು ಸರ್ರನೆ ಕೆಳಗೆ ಒಂದೆನು ಅಲ್ಲಿ ಸದ್ದು ಮಾಡದೆ ಬನ್ನಿ, ಒಂದು ತಮಾಷೆ ತೋರಿಸುತ್ತೇನೆ ಎಂದು ಹೇಳಿ ಒಂದು ಕೋವಿಯನ್ನು ಹಗಲಮೇಲೇರಿಸಿಕೊಂಡು 'ನೀವು ಯಾರೂ ಬೇಡ ಇವನೊಬ್ಬನಲ' ಎಂದು ನನ್ನನ್ನು ಧೂತ್ರ ಕರೆದುಕೊಂಡು ಹೋದನು. ಒಂದು ದೊಡ್ಡ ಹೊನ್ನೆ ಮರದಡಿಯಲ್ಲಿ ಒಂದು ಹೆಣ್ಣು ಹುಲ್ಲೇ ಕರವು ಮರಿಗೆ ಹಾಲು ಕೊಡುತ್ತಿತ್ತು. ಕಾರ್ಯಪ್ಪನು ಅದನ್ನು ತೋರಿಸಿದನು. ನನಗೆ ಅದನ್ನು ನೋಡಿ 'ಅಯ್ಯೋ ಪಾಪ' ಎಂದನ್ನಿಸಿತು. ಕಾರ್ಯಪ್ಪನು ಕೂಡಿಯೂಗಿ ಕುದುರೆಯನ್ನೆಳೆದು ಗುರಿಯಿಟ್ಟನು. ಆದರೆ ಅವನು ಕೋವಿಯನ್ನು ಹಿಡಿದುದನ್ನು ನೋಡಿ ಅದೇ ಆರವ ವೆಂದಲನೇ ಸಲ ಕೋವಿಯನ್ನು ಉಪಯೋಗಿಸುವುದು ಎಂದಂದುಕೊಂಡೆ. ಅದನ್ನು ನೋಡಿ ನಮ್ಮ ಹಿಂದೆಯೇ ಸದ್ದು ಮಾಡದೆ ಬಂದಿದ್ದ ಅಯ್ಯು ಗೊಳ್ಳೆಂದು ನಕ್ಕನು. 'ಹಾಗಲ್ಲವೊ, ಅದನ್ನು ಹಿಡಿದುಕೊಳ್ಳುವುದು ಎಲ್ಲಿ! ಇದನ್ನು ಕಂಕುಳಿಗೆ ಸರಿಯಾಗಿ .... ಢವ್' ಕಾರ್ಯಪ್ಪನು ಹಿಂಪಕ್ಕೆ ಬಿದ್ದನು ಹುಲ್ಲೆಯ ಕರುಗಳು ಓಡಿ ಹೋದುವು.

ಅಯ್ಯು—"ಕೋಣ, ನಾನು ಹೇಳಿಕೊಡುವುದಕ್ಕೆ ಮುಂಚೆಯೇ ಹೊಡೆದೆ. ಎದೆಗೆ ಏಟು ಬಿದ್ದಿತು. ಹಾಗಲ್ಲ ಹಿಡಿದುಕೊಳ್ಳುವುದು ಎಂದು ಹೇಳಲಿಲ್ಲವೇ?"

"ಹೋಗೋ ನನಗೂ ಗೊತ್ತು. ನೀನು ಬಂದು ಅವಸರ ಮಾಡಿದೆ. ಅವಕ್ಕೆ ನಾನು ಬೇಗ ಹೊಡೆದೆ. ನಡೆಯಿರಿ ಮನೆಗೆ ಹೋಗೋಣ.'

ನಾನು—'ಇನ್ನೇನು ನಿನ್ನನ್ನು ಕಟ್ಟಿಕೊಂಡು ಬಂದರೆ ಎಲ್ಲ ಬಾಯಲ್ಲೇ ಪ್ರತಾಪ ನಿನ್ನದು.'

ಎಲ್ಲರೂ ಮನೆಗೆ ಹೋದೆವು. ನಾವು ಬರೀ ಕೈಯಲ್ಲೇ ಬಂದದನ್ನು ನೋಡಿ ಹಿರಿಯರೆಲ್ಲಾ ಹಾಸ್ಯ ಮಾಡಿದರು. ನಾವು ಕಾರ್ಯಪ್ಪನ ಸಾಹಸವನ್ನು ವಿವರಿಸಿದೆವು. ಅವನಿಗೆ ಇನ್ನಷ್ಟು ಮಂಗಳಾರತಿಯಾಯಿತು.

ಬೊಳ್ಳಿ ತಂಗಿ ಪೊನ್ನಿ ಬಹಳ ಕುಂಟಿ ಅವಳು 'ಕಾರ್ಯಪ್ಪಂಣ ತೆಗದುಕೋ ಎಂದು ಹೇಳಿ ಕಾಗದದಲ್ಲಿ ಏನನ್ನೋ ಮುಚ್ಚಿ ತಂದು ಕೊಟ್ಟಳು. ಅದನ್ನು ಕಾರ್ಯಪ್ಪನು ಬಿಚ್ಚಿ ನೋಡಿ ನೆಲಕ್ಕೆ ಡಣ್ ಎಂದು ಎಸೆದನು. ಬಳಿಯು ಪುಡಿಪುಡಿಯಾಯಿತು. 'ನಿನಗೆ ಸರಿಯೂದ ಬಹುಮಾನವೆಂದು ನಾವು ಹೇಳಿದೆವು. ಕಾರ್ಯಪ್ಪನು ಎದೆ ನೋಯುವುದೆಂದು ಹೇಳಿ ಮಲಗುವುದಕ್ಕೆ ಹೋದನು. ನಾವು ಊಟ ಮಾಡಿದ ಮೇಲೆ ಸ್ವಲ್ಪ ಹೊತ್ತು ಹರಟುತ್ತಾ ಕುಳಿತೆವು. ಏನೇನೋ ಮಾತನಾಡುತ್ತಾ ದೆವ್ವಗಳ ಮಾತು ಬಂದಿತು. ಒಬ್ಬೊಬ್ಬರು ಅವರವರ ಅನುಭವಗಳನ್ನು ಹೇಳಿಕೊಳ್ಳುತ್ತಿದ್ದರು. ಸುಬ್ಬಕ್ಕಯ್ಯ ನಮ್ಮ ಹಿಂದೂ ಜನರ ಮೂಢ ನಂಬಿಕೆಯು ಬಹಳ ಅಸಹ್ಯವೆಂದು ಹೇಳಿದನು. ಡಾಲಿಯು ಆ ವಿಧವಾದ ನಂಬಿಕೆಯು ಹಿಂದೂಗಳಿಗೆ ಮಾತ್ರವಲ್ಲ ಬೇರೆ ಜನಾಂಗದವರಿಗೂ ಇದೆಯೆಂದು ಹೇಳಿದನು ಇದುವರೆಗೂ ಮುಸುಕು ಹಾಕಿಕೊಂಡು ಮಲಗಿದ್ದ ಕಾರ್ಯಪ್ಪನು ಎದ್ದನು. 'ನಾನು ಮಡಿಕೇರಿಯಲ್ಲಿ ಐ. ಟಿ. ಎಫ್. ಕ್ಯಾಂಪಿನಲ್ಲಿದ್ದಾಗ ಒಂದು ಸಲ ಅಮವಾಸ್ಯೆಯ ರಾತ್ರಿ ಹನ್ನೆರಡು ಗಂಟೆಯ ಹೊತ್ತಿನಲ್ಲಿ ದೇವಸ್ಥಾನದ ಸಂಪಿಗೆ ಮರದಡಿಯಲ್ಲಿ ಬರಬೇಕಾಯಿತು. ಅಲ್ಲಿ ಬ್ರಹ್ಮರಾಕ್ಷಸ ಇರುತ್ತದೆಂದು ಪ್ರತೀತಿಯಿದೆ. ನಾನು ಮರದಡಿಯಲ್ಲಿ ಹೋಗುತ್ತಿದ್ದಾಗ ಅಲ್ಲೇನೋ ಬೆಳ್ಳಗೆ ಕಂಡ ಹಾಗಾಯಿತು ನನಗೆ ಸ್ವಲ್ಪ ದಿಗಿಲಾದರೂ ಧೈರ್ಯಗೆಡದೆ ನೋಡುತ್ತಾ ನಿಂತುಕೊಂಡೇ ಇದ್ದೆ. ಆ ಬಿಳಿಯದು ಹಾಗೇ ಎಡಗಡೆಯಿಂದ ಬಲಗಡೆಗೆ ಬಂದ ಹಾಗಾಯಿತು. ಆ ಮೇಲೆ ಸ್ಪಷ್ಟವಾಗಿ ಅದೇನೆಂದು ತಿಳಿಯಿತು. ದೂರದಲ್ಲಿ ರಸ್ತೆಯಲ್ಲಿ ಯಾವನೋ ಒಬ್ಬನು ಕೈಯಲ್ಲಿ ಲಾಂದ್ರವನ್ನು ಹಿಡಿದುಕೊಂಡು ಹೋಗುತ್ತಿದ್ದನು. ಅದರ ಬೆಳಕು ದೇವರ ಹೊರ ಪ್ರಾಕಾರದ ಗೋಡೆಯ ಮೇಲೆ ಸ್ವಲ್ಪ ಬಿದ್ದು ಕಡೆದಂತೆ ಆ ಬೆಳಕು ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋದ ಹಾಗೆ ಕಂಡಿತು. ಇದರಂತೆಯೇ ಎಷ್ಟೋ ಬಾರಿ ಎಂದು ನಾವು ಭ್ರಾಂತಿಗೊಂಡರೂ ಅವನ್ನು ಪರಾಂಬರಿಸಿ ನೋಡಿದರೆ ಅವು ಯಾವುದೋ ಸಾಮಾನ್ಯ ಕಾರಣಗಳಿಂದ ಉಂಟಾಗುವ ಪರಿಣಾಮಗಳು ಎಂದು ತಿಳಿಯುವವು. ಆದ್ದರಿಂದ ಇಂದು ನಾನು ಖಂಡಿತವಾಗಿ ನಂಬಲಾರೆನು."

—'ಸಾಕು ಕೊಚ್ಚ ಬೇಡ. ಸಾಯಂಕಾಲ ಹಾಗೆಯೇ ತಾನೆ? ಸರಿಯಾಗಿ ಕೋವಿ ಹೊಡೆದಿಲ್ಲ. ಐ ಟಿ ಎಫ್. ನಲ್ಲಿದ್ದನಂತೆ!

ಸಾಕು. ಬೇಕಾದರೆ ಪರೀಕ್ಷೆ ಮಾಡೋಣ. ಕಳ' (ಸ್ಮಶಾನವು) ಇಲ್ಲಿಗೆ ಇದೆ. ಈ ಹೊತ್ತು ರಾತ್ರೆ ಹನ್ನೆರಡು ಗಂಟೆಗೆ ಹೋಗಿ ಬರುತ್ತೇನೆ. ಏನು ಕೊಡ್ತೀರಿ ನೋಡೋಣ?

ನೀನು ಹೋಗುವುದೂ ಬೇಡ, ನಾನೇನೂ ಇಲ್ಲ. ನೀನೆಲ್ಲಾದರೂ ಹೆದರಿಕೊಂಡು ಒಂದು ನೆಗೆದು ಬಿದ್ದು ಹೋಗು ಆ ಮೇಲೆ ನಿಜಹಾಗಾದು.

ಕೊಡುವುದು ಬೇಡ. ಮುಚ್ಚಿಸಿ,

"ನೀನು ಅಲ್ಲಿಗೆ ಹೋಗಿರುವೆಯೆಂದು ಗೊತ್ತಾಗುವುದು ಹೇಗೆ'?

—'ನೀನೇ ಏನಾದರೂ ಒಂದು ಉಪಾಯವನ್ನು ಸೂಚಿಸು.'

"ಹಾಗಾದರೆ ಇಲ್ಲಿಂದ ಒಂದು ಬೆಳೆಯನ್ನು ತೆಗೆದುಕೊಂಡು ಹೋಗು. ಅಲ್ಲೊಂದು ಬಿಟಿಯ ಮರದಿನೆ ಆ ಮರಕ್ಕೆ ಮೊಳೆಯನ್ನು ಹೊಡೆದು ಬರೆಯಬೇಕು. ಬೇಗ ನಾವು ಅದನ್ನು ಪರೀಕ್ಷೆ ಮಾಡುತ್ತೇವೆ."

ಅಯ್ಯು—"ಬಾಯಿ ವೇಳೆ ಅವನ್ನು ಯಾವುದಾದರೂ ಭೂತ ಹಿಡಿದುಕೊಂಡು ಅವನು ಹಿಂದುಗಡೆಯೇ ಇದ್ದರೆ?

ಕಾರ್ಯಪ್ಪ—ಹೋಗೋ 'ಭೂಯಂತೆ'

ಜುಬ್ಬಕ್ಕಿ—"ಅದಕ್ಕೆ ಒಂದು ಕ್ರಮ ಅದಕ್ಕೆ ಹೀಗೆ ಮಾಡೋಣ ನೀನು ಇಲ್ಲಿಂದ ಹನ್ನೆರಡು ಗಂಟೆಗೆ ಸರಿಯಾಗಿ ಹೊರಡಬೇಕು. ಒಂದು ಗಂಟೆಗೆಹಿಂದಿರುಗಬೇಕು. 1 ಗಂಟೆಯ ಒಳಗೆ ಹಿಂದಿರುಗದಿದ್ದರೆ ನಾವು ಅಲ್ಲಿಗೆ ಬಂದು ನೋಡುತ್ತೇವೆ. ನಿನಗೇನಾದರೂ ಹೆದ್ದು ಕಡಿಮೆಯಾದರೆ ನಾವು ಜವಾಬ್ದಾರರಲ್ಲ. ಆ ರೀತಿಯಲ್ಲಿ ಒಂದು ಕಾಗದ ಬರೆದುಕೊಡಬೇಕು."

ಕಾರ್ಯಪ್ಪನು ಜೋರಾಗಿ ಒಂದು ಕಾಗದವನ್ನು ಬರೆದು ನನಗೆ ಕೊಟ್ಟು ಒಂದು ರಗ್ಗನ್ನು ಎದೆದುಕೊಂಡು ಒಂದು ಮೊಳೆಯನ್ನೂ, ಅದನ್ನು ಹೊಡೆಯುವುದಕ್ಕೆ ಒಂದು ಕಲ್ಲನ್ನೂ, ಸದ್ದು ಮಾಡಲಿಕ್ಕಾಗಿ ಎಂದು ಒಂದು ಮುಳ್ಳು ಕೋಲನ್ನೂ ತೆಗೆದುಕೊಂಡು ಹೊರಟನು. ಹೊಡ್ಡರೆಲ್ಲರೂ ಹನ್ನೆರಡು ಗಂಟೆಯ ಹೊತ್ತಿಗೆ ಮಲಗಿದ್ದು. ಆದ್ದರಿಂದ ಕಾರ್ಯಪ್ಪನನ್ನು ತಡೆಯುವವರು ಯಾರೂ ಇರಲಿಲ್ಲ.

ಆಕಾಶದಲ್ಲಿ ಸಾವಿರಾರು ನಕ್ಷತ್ರಗಳು ಮಿನುಗುಟ್ಟುತ್ತಿದ್ದವು. ಹೊರಗಡೆ ಕಗ್ಗತ್ತಲೆ 'ಗಾ' ಎನ್ನುತ್ತಿತ್ತು. ಅಲ್ಲಲ್ಲಿ ಗುಳ್ಳಿಲಕ್ಕಿಗಳು ಅರಚುತ್ತಿದ್ದವು ದೂಂದಲ್ಲಿ ಗೂಬೆಗಳ 'ಹೂಂ' ಗುಟ್ಟುವಿಕೆ ಲಕ್ಷಾಂತರ ಮಿಂಚು ಹುಳಗಳ ಮಿಣುಕುಗಳು. ಅಲ್ಲದೆ ಮರಗಳ ಮಧ್ಯದಲ್ಲಿ ಕಾಡು ಹುಲ್ಲುಗಳ 'ವೀರ್ ವೀರ್' ಎಂಬ ಕೂಗು. ಇವು ರಾತ್ರೆಯನ್ನು ಮತ್ತೂ ಭಯಂಕರವಾಗಿ ಮಾಡಿದ್ದುವು.

ಕಾರ್ಯಪ್ಪನಾತೂ ತನ್ನ ಎದೆಯನ್ನ ಗಟ್ಟಿಮಾಡಿಕೊಂಡು ಹೊರಟೇ ಹೋದನು ನಾವು ನಮ್ಮ ನಮ್ಮಲ್ಲೇ ಅವನ ಸಹಾಸಗಳನ್ನು ಕುರಿತು ಟೀಕಿಸುತ್ತಿದ್ದೆವು. ಹನ್ನೆರಡು ಮುಕ್ಕಾಲುಗಂಟೆಯಾಯಿತು ಆದರೂ ಅವನು ಹಿಂದಿರುಗಲಿಲ್ಲ.

ಜುಬ್ಬಕ್ಕಿ—'ಅವನು ಹೋಗಿಯೇ ಇಲ್ಲವೆಂದು ತೋರುವುದು ಸ್ವಲ್ಪ ದೂರ ಹೋದ ಹಾಗೆ ಮಾಡಿ ಹಿಂದಿನಿಂದ ಬಾಗಿಲಿಂದ ಮನೆಗೆ ಬಂದು ಎಲ್ಲಾದರೂ ಬಿದ್ದುಕೊಂಡಿರಬಹುದು.'

ಹಾಗಾದರೆ ಹುಡುಕಿ ನೋಡೋಣವೆಂದು ನಾವು ಮನೆಯಲ್ಲೆಲ್ಲಾ ನೋಡಿದೆವು. ಜಗಲಿಯ ಮೇಲೆ ಕಾರ್ಯಪ್ಪನಂತೆಯೋ ಯಾರೋ ಮಲಗಿದ್ದರು. ಅವನ ಪೆರಟು, ಪೈಜಾವೆಗಳಂಥವನ್ನೇ ಹಾಕಿಕೊಂಡಿದ್ದುದರಿಂದ ಡಾಲಿಯು ಅವನೇ ಕಾರ್ಯಪ್ಪನೆಂದು ನಿರ್ಧರಿಸಿ ಅವನುಮುಸುಕನ್ನು ಮೆಲ್ಲಗೆ ಎಳೆದನು. ನೋಡಿದರೆ ಕಾರ್ಯಪ್ಪ ಅಣ್ಣ, ನಾವು ಸದ್ದು ಮಾಡದೆ ಅಲ್ಲಿಂದ ಕಂಬಿ ಕಿತ್ತೆವು.

ಅಷ್ಟು ಹೊತ್ತಿಗೆ ಒಂದು ಗಂಟೆಯಾಯಿತು. ಒಂದು ಲಾಂದ್ರವನ್ನು ಹಿಡಿದುಕೊಂಡು ನಾವೆಲ್ಲರೂ ಸ್ಮಶಾನಕ್ಕೆ ಹೋಗಿ ನೋಡಬೇಕೆಂದು ನಿರ್ಧರಿಸಿದೆವು ಲಾಂದ್ರವನ್ನು ಹಚ್ಚಿ ಎಲ್ಲರೂ ಒಂದೊಂದು ದೊಣ್ಣೆಯನ್ನು ತೆಗೆದುಕೊಂಡು ಹೊರಟೆವು. ಅಣ್ಣಿ ಒಂದು ಚೊಂಬು ನೀರನ್ನು ತೆಗೆದುಕೊಂಡನು. ಅಯ್ಯು ಮತ್ತಾವುದೋ ಕೋವಿಯನ್ನೂ, ಉಳಿದ ಮೂರು ತೋಟಗಳನ್ನೂ ತೆಗೆದು ಕೊಂಡನು. ಸ್ಮಶಾನಕ್ಕೆ ಎರಡು ದಾರಿಗಳಿದ್ದವು. ಒಂದು ಕಾಲುದಾರಿ ಇನ್ನೊಂದು ಗಾಡಿಗಳು ಹೋಗುವಂಥಾದ್ದು ಗಾಡಿ ರಸ್ತೆಯಲ್ಲೇ ಅವನು ಹೋಗಿರಬಹುದೆಂದು ನಾವು ಆ ದಾರಿಯನ್ನೇ ಹಿಡಿದು ಹೋದೆವು. ಸ್ಮಶಾನವು ಇನ್ನು ಇಪ್ಪತ್ತು ಗಜವಿರಬಹುದೆನ್ನುವಾಗ ರಸ್ತೆಯಲ್ಲಿ ಏನೋಬಿದ್ದಿದ್ದ ಹಾಗೆ ಕಂಡಿತು ನಾವು ಹತ್ತಿರ ಹೋದೆವು. ಕಾರ್ಯಪ್ಪನು ಮುಖವಡಿಯಾಗಿ ಬಿದ್ದಿದ್ದನು. ಅವನಿಗೆ ಜ್ಞಾನವಿಲ್ಲ. ಸ್ವಲ್ಪ ನೀರನ್ನು ಅವನ ಹೆಣೆಗೆ ಚಿಮುಕಿಸಿದೆವು ಮತ್ತಲ್ಲಿ ಸ್ವಲ್ಪ ಗಾಳಿಬೀಸಿದವು. ಸ್ವಲ್ಪ ಹೊತ್ತಿನ ಮೇಲೆ ಜ್ಞಾನ ಬಂದಿತು. ಗಾಬರಿಯಿಂದ ಎದ್ದು, 'ದೆವ್ವ, ದೆವ್ವ' ಎಂದು ಕೂಗುತ್ತಾ ಓಡಲು ಪ್ರಯತ್ನಿಸಿದನು ನಾವು ಅವನನ್ನು ಹಿಡಿದುಕೊಂಡೆವು ಸ್ವಲ್ಪ ಹೊತ್ತು ಎಲ್ಲರ ಮುಖವನ್ನೂ ದೃಷ್ಟಿಸಿ ನೋಡಿ ಸ್ಮಶಾನದಲ್ಲಿ ತನ್ನನ್ನು ಯಾವುದೋ ಹಿಡಿದು ಎಳೆಯಿತೆಂದೂ ತನಗೆ ಹೆದರಿಕೆಯಾಗಿ ಓಡಿ ಬಂದೆನೆಂದುಹೇಳುತ್ತಾ ಕಲ್ಲನ್ನು ಎಡವಿ ಬಿದ್ದೆನೆಂದೂ ಆ ಮೇಲೆ ಏನಾಯಿತೆಂದು ಗೊತ್ತಾಗಲಿಲ್ಲವೆಂದೂ ಹೇಳಿದನು. ನೀನು ಹೊರಡಿದ್ದಾಗ ರಗ್ಗೆಲ್ಲಿ ಎಂದು ಕೇಳಿದೆನು. 'ನನಗೆ ಗೊತ್ತಿಲ್ಲ. ದೆವ್ವ ಎಳೆದುಕೊಂಡ ಹಾಗಾಯಿತು, ಎಂದು ಹೇಳಿದನು. 'ಹೇಗಲಿ ಮನೆಗೆ ಹೋಗೋಣವೆಂದು ಮನೆಗೆ ಒಂದು ಬಿಟ್ಟೆವು.

ನವುಗೆಲ್ಲರಿಗೂ ಕಾರ್ಯಪ್ಪನನ್ನು ನೋಡಿ ಕನಿಕರವಾಯಿತು. ಆದ್ದರಿಂದ ನಾವು ಯಾರೂ ಅವನನ್ನು ಅಪಹಾಸ್ಯವೂಡಲಿಲ್ಲ. ಮನೆಗೆ ಹೋದ ಕೂಡಲೇ ನಾವೆಲ್ಲರೂ ಮಲಗಿದೆವು.

ಬೆಳಗಾಯಿತು ನಾವೆಲ್ಲರೂ ಎದ್ದೆವು; ರಾತ್ರೆಯ ಘಟ್ಟಲವು ನಮ್ಮಲ್ಲೇ ಅಡಗಿತ್ತು. ಮನೆಯಲ್ಲಿ ಗರಬಿ ಊಟಕ್ಕೆ ತಯಾರಾಗುತ್ತಿರುವಾಗ ಹೊತ್ತಿಗೆ ಹೊರಗಡೆ ಹೋಗಿ ಮುಖ ತೊಳೆದುಕೊಂಡು ಬರೋಣವೆಂದು ನಾವೆಲ್ಲರೂ ಹೊರಟೆವು ಕಾರ್ಯಪ್ಪನು ಕಾಲುನೋವೆಯಾವುದೆಂದೂ ತಾನು ಬರುವುದಿಲ್ಲವೆಂದೂ ಹೇಳಿದನು. ನಾವು ಬಿಡಲಿಲ್ಲ; ಬೆಳಗಿನ ತಂಗಾಳಿಯಲ್ಲಿ ಹೊರಗಡೆ ತಿರುಗಾಡಿಕೊಂಡು ಬಂದರೆ ಕಾಲುನೋವು ಹಾರಿಹೋಗುವುದೆಂದೂ, ರಗ್ಗೆಲ್ಲಿ ಹೋಯಿತು ನೋಡಬೇಕೆಂದೂ, ರಾತ್ರೆಯ ಅವನ ಸಾಹಸವನ್ನು ಪರೀಕ್ಷಿಸಬೇಕೆಂದೂ ಹೇಳಿ ಅವನನ್ನೂ ಎಳೆದುಕೊಂಡು ಹೋದೆವು. ರಸ್ತೆಯಲ್ಲಿ ಹೋಗುವಾಗ ಒಬ್ಬೊಬ್ಬನೂ ಅವನನ್ನು ಗೇಲಿ ಎಬ್ಬಿಸಿ ಕೊಂಡು ಹಾಕಿದನು.

ಒಂದು ತೋಡಿನ ಹತ್ತಿರ ಹೋಗಿ ಮುಖ ತೊಳೆದುಕೊಂಡ ಮೇಲೆ ಸ್ಮಶಾನ ಕಟ್ಟೆಗೆ ಹೋದೆವು. ಅಲ್ಲೊಂದು ಮರದ ಹತ್ತಿರ ರಗ್ಗು ಬಿದ್ದಿದ ಹಾಗೆ ಕಾಣುತ್ತಿತ್ತು. ನಾವು ಹತ್ತಿರ ಹೋಗಿ ನೋಡಿದೆವು ರಗ್ಗನ್ನು ಸೇರಿಸಿ ಮುಚ್ಚಕ್ಕೆ ಮೊಳೆ ಹೊಡೆದಿತ್ತು.

ರಾತ್ರೆ ಆದ ಸಂಗತಿಯೆಲ್ಲಾ ನನಗೆ ಚೆನ್ನಾಗಿ ಅರ್ಥವಾಯಿತು. ಕಾರ್ಯಪ್ಪನು ಬಾಯಲ್ಲಿ ಬೇಕಾದಷ್ಟು ಜಂಭ ಹೊಡೆಯುತ್ತಿದ್ದರೂ ಮನಸ್ಸಿನಲ್ಲಿ ಅವನಿಗೆ ದಿಗಿಲು ಇದ್ದೇ ಇತ್ತು. ಆದಷ್ಟು ಬೇಗ ಮೊಳೆ ಹೊಡೆದು ಹೋಗೋಣವೆಂದು ಅವಸರದಲ್ಲಿ ರಗ್ಗನ್ನು ಸೇರಿಸಿ ಮೊಳೆ ಹೊಡೆದಿದ್ದನು. ಆದರೆ ಹಿಂದಿನವಸಿಗೆ ಹೊರಟ ಕೂಡಲೆ ರಗ್ಗು ಮೊಳೆಗೆ ಸಿಕ್ಕಿದ್ದರಿಂದ ಅವನನ್ನು ಯಾರೋ ಎಳೆದ ಹಾಗಾಯಿತು. ಮೊದಲೇ ಹೆದರಿದ್ದ ಕಾರ್ಯಪ್ಪನು ಮತ್ತಷ್ಟು ಹೆದರಿ ರಗ್ಗನ್ನು ಬಿಟ್ಟು ಒಂದೇ ಉಸಿರಿಗೆ ಓಡುತ್ತಾ ಬಂದು ಎಡವಿಬಿದ್ದನು; ಜ್ಞಾನವು ಹೋಯಿತು.

ನಡೆದುದನ್ನೆಲ್ಲಾ ಕಾರ್ಯಪ್ಪನಿಗೆ ಚೆನ್ನಾಗಿ ವಿವರಿಸಿ ಹೇಳಿದ ಮೇಲೆ ಅವನಿಗೆ ಸ್ವಲ್ಪ ಧೈರ್ಯಬಂದಿತು. ಅಡಗೆ ಬಿದ್ದರೂ ವಿಾಸಿ ಮಂಣಾಗಲಿಲ್ಲವೆಂಬ ಹಾಗೆ ಪುನಃ ತನ್ನ ಸ್ವತಾಸವನ್ನು ಕೊಚ್ಚಲು ಕಾರ್ಯಪ್ಪನು ಹಿಂತೆಗೆಯಲಿಲ್ಲ.

'ನೋಡಿದಿರಾ! ನಾನು ನಿನ್ನೆ ಹೇಳಲಿಲ್ಲವೆ? ಎಲ್ಲಾ ದೆವ್ವದ ಕಥೆಗಳೂ ಹೀಗೆಯೆ ಸಾಮಾನ್ಯ ಕಾರಣದಿಂದ ಏನಾದರೂ ಒಂದು ಅನಾಹುತವಾಗುವುದು. ಅದಕ್ಕೆ ನಾವು ಹೆದರಿಕೊಳ್ಳುತ್ತೇವೆ. ಪರೀಕ್ಷೆಮಾಡಿ ನೋಡಿದರೆ ದೆವ್ವವೂ ಇಲ್ಲ, ಏನೂ ಇಲ್ಲ. 'ಇದರಿಂದಲೇ ಅಮಾಯಕನನ್ನಿಗೆ ಏಳು ದೆವ್ವ ಎಂದು ಹೇಳುವುದು'

ಜುಬ್ಬಕ್ಕಿ—'ನಮ್ಮನ್ನೆಲ್ಲಾ ನೋಡಿ ದೆವ್ವ! ದೆವ್ವ! ಎಂದು ಕೂಗುತಾ, ಓಡಲು ಹೊರಟಿದ್ದೆ, ಉತ್ತರನ ಪಂಥ ಒಲೇ ಮುಂದೆ.' ಗೊತ್ತೇ ಇದೆ. ಪೊನ್ನು ಇನ್ನೆನ್ನೊಂದು ಸಲ ಬಳೆ ಕೊಡುತ್ತಾಳೆ ಮನೆಗೆ ಬಾ.'

[ಈ ಕಥೆಯು ಊಹಾ ಪ್ರಪಂಚಕ್ಕೆ ಸೇರಿದುದು. ಜೀವಂತ ವ್ಯಕ್ತಿಗಳಿಗೆ ಸಂಬಂಧವಿಲ್ಲ]

'ಘಾಟಿ.'

ಸೂರ್ಯೋದ್ಗ.

ನೆತ್ತರನ ಕಡಲುಕ್ಕಿ ಮೇಲೇಳುತಿಹ ನೋಡು
ಕಿಕ್ಕೊಗೆದು ಬೆಳ್ಪಗಳ ಆಕಾಶ ರಂಗದಲಿ
ನೆತ್ತರ ತರಂಗಗಳು ನೇಸರನು ನುಂಗುತಿವೆ
ಶಕ್ತಿಯನು ಬೀರುತ್ತಿವೆ ರೋಷವನೆ ತಾಳುತ್ತಿವೆ
ಮೂಡಣ ದಿಗಂಗನೆಯ ಕೈವಿತಿದ ರವಿರಾಯ
ನೆಂಬಾಗಿ ನೋಡುತಿಹಳನ್ಯಳನ್ನು ಮುಳುಗುತಲಿ.

ಈಸುತೀ ಕಡಲನ್ನು ನಾಳೆಯುವೆನು ಗೆದ್ದು
ಭೂಸಯೂಗದಿಂದು ಹೇಳುತಿಹನವಳೊಡನೆ
ಚಿನ್ನದಡಗೆಯ ತೊಡಿಸಿ ಬೆಟ್ಟಗಳ ಸಾಲಿನವಲ
ಆಕಾಶವನೆ ತಿಕ್ಕಿ ನೋಡುವ ಪ್ರಸಂಡವನು
ಹಗಲೆಲ್ಲ ತಿರುತಿರುಗಿ ಬಾಯೂರಿ ಬೆಂಡಾಗಿ
ಪರ್ವತಾಗ್ರವ ನಿಂತು ಶ್ರಮವಾರಿ ಸುತ್ತಿಹನು.

ಮತ್ತೆ ಮತ್ತೇರುತಿಹ ರುಧಿರ ವಾರಿಧಿಯಲ್ಲಿ
ನೆತ್ತರನು ಕೈಯಿಕ್ಕಿ ಕುಡಿಕುಡಿದು ಕುಸಿಗುತಿಹ ಮಲಿನನಿವ
ನೊಲಿದು ಹನನವನೀಗ ಪಶ್ಚಿಮ ಸಮುದ್ರದಲಿ
ಊರಾಳುತಿಹ ಶಿಖರದಿಂದವನೀಗ ಕಾಲ್ದಪ್ಪಿ
ಪೂರ್ವ ಕಾಂತೆಯ ನೋಡಿ ತಾವರೆಯ ಮುಖತೀಡಿ
ಕೆರಳಿ ಕೆನ್ನೀರಿನಲಿ ಮುಳುಗುತಿಹನವನೀಗ.

ಈ ಸಮುದ್ರದಲಿ ನೋಡು ಏನೊಂದು ಪ್ರಭೆಯು
ಹುದು
ಬಹು ನಿಧಾನವೊಳವನು ತನಗಿಷ್ಟವಿಲ್ಲದೆಯೆ
ಇಳಿಯುತಿಹನಸ್ತಾದ್ರಿ ತನ್ನ ಹೆಂಳವನೆಲ್ಲ
ತೋರುತಿಹನವನೀಗ ನಗುತಿರುವ ಲೋಕವಿದ್ದು
ಅದೋ ನೋಡು ಪಶ್ಚಿಮದಿ ಭಯವಿಷ್ಟು ತೋರುತಿಹ
ಕಾಳ ರಾತ್ರಿಯ ಬಾವು ಭೀತಿಯನೆ ತರುತಿಹುದು.

ಪೂರ್ವನಾರಿಯ ಮೊಗವು ಕವ್ಯವನ್ನು ನೋಡಲ್ಲಿ
ತಾವರೆಗೆ ದಿಕ್ಕಿಲ್ಲವೆಂದೆರೆದ ಬಾಹುದಳ.
ಪಶ್ಚಿಮ ರಣಾಂಗಣದಿ ರಕ್ತಮಯವಾರಿಧಿಯು
ಅಸ್ತಾದ್ರಿ ಕಳೆಗೆಬ್ಬ ಕಂಬನಿಯು ಸುರಿಸುತಿದೆ
ಪೂರ್ವದ್ರಿ ಕಾಯುತಿದೆ ವರುದಿನದ ಉಷೆಯನ್ನು
ಮುಳುಗಿದನು ಅನೊ ನೋಡು ಪಡುವೆಲ್ಲವನ್ನಳಿದು.

ವಸುಮತಿ.

ಅಲ್ಲಲ್ಲೇ ಬಿದ್ದ ಹಾಗೆ ಸುಡುತ್ತ ಅಭಿಸ್ರಾವ ಅಧಿಕಾರಿಗಳು ಮೂಡುತ್ತಿರುವರೆಂಬ ಸುದ್ದಿ ಹೊರಟು ಕರಾಚಿ, ಪಂಜಾಬು ಮೊದಲಾದ ಕಡೆಗಳಿಂದ ಹಾಗೆ ಸುಡುವಾರದು, ಹೆಣಗಳನ್ನು ಎಳೆದು ತೆಗೆದೇ ಸುಡಬೇಕೆಂಬ. ಕೋರಿಕೆಗಳು ಪಬ್ಲಿಕಿನವರಿಂದ ಸರ್ಕಾರಕ್ಕೆ ಕಳುಹಿಸಲ್ಪಟ್ಟಿವೆ.

ನಿರಾಶ್ರಿತರಿಗೆ ಸಹಾಯ.

ಅನಿರೀಕ್ಷಿತ ಕಷ್ಟಕ್ಕೊಳಗಾಗಿರುವ ಬಲುಚಿಸ್ತಾನದ ನಿವಾಸಿಗಳಿಗೆ ಸಹಾಯ ಮೂಡಬೇಕೆಂದು ಇಂಡಿಯೂಡ ವೈಸರಾಯರೂ, ಇಂಡಿಯನ್ ನೇಶನಲ್ ಕಾಂಗ್ರೆಸ್ಸಿನ ಅಧ್ಯಕ್ಷರೂ, ಕೆಲವು ಗವರ್ನರುಗಳೂ ದೇಶದವರಲ್ಲಿ ವಿಜ್ಞಾಪಿಸಿ ಕೊಂಡಿರುವರು. ಈಗಾಗಲೇ ಉದಾರಿಗಳು ಕೊಡುಗೈಯ್ಯನ್ನೀಡಿರುವರು.

ಸುತ್ತಮುತ್ತಲಿನ ಪ್ರಾಂತ್ಯಗಳಿಂದ ಔಷಧಗಳ ಸಮೇತ ಹಲವು ಡಾಕ್ಟರುಗಳೂ, ನರ್ಸ್‌ಗಳೂ, ಇತರ ಸಹಾಯಕರೂ ಅಲ್ಲಿಗೆ ಹೋಗುತ್ತಿದ್ದಾರೆ. ಸಾವಿರ ಗಟ್ಟಲೆ ಜನರು ಚಿಕಿತ್ಸೆ ಹೊಂದುತ್ತಿದ್ದಾರೆ, ಮಕ್ಕಳಿಗೆ ಹಾಲಿನ ಸರಬರಾಯವೂ, ದೊಡ್ಡವರಿಗೆ ಹಾಲು ಡಬ್ಬಿಗಳೂ, ಟಿನ್ನ್ ಮಾಂಸ, ಹಣ್ಣು ಹಂಪಲಗಳೂ, ಇತರ ಆಹಾರ ಪದಾರ್ಥಗಳೂ ಅಲ್ಲಿಗೆ ಟ್ರೈನುಗಳಲ್ಲಿಯೂ ಮತ್ತು ವಿಮಾನಗಳಲ್ಲಿಯೂ ಸಾಗಿಸಲ್ಪಡುತ್ತಿದೆ. ಅಲ್ಲಿ ಈಗ 6,000 ಬ್ರಿಟಿಷ್ ಸೈನ್ಯದವರುಗಳೂ, 30,000 ಇಂಡಿಯನ್ ಸಿವಾಯಿಗಳೂ ಇರುವರು ಹೊರಗಿನ ಹಲವು ದೇಶಗಳ ಮುಖ್ಯ ಅಧಿಕಾರಿಗಳಿಂದ ಸಹಾನುಭೂತಿಯ ತುಂತೀ ವಾರ್ತೆಗಳು ಬಂದಿವೆ

ವರ್ತಮಾನ ಸಂಗ್ರಹ.

ಒಳದೇಶ.

ಮೈ. ಬಿದ್ದಾಟಂಡ ಯಂ ತಿಮ್ಮಯ್ಯನವರು ಮೈಸೂರು ಸರ್ಕಾರದ ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಿರುವರೆಂದು ತಿಳಿದು ಅವರನ್ನು ಅಭಿನಂದಿಸುತ್ತೇವೆ.

ನಾಲ್ಕುನಾಡು ನಾಲಡಿ ಗ್ರಾಮದ ಪೈಸ್ನ್‌ದಾರರಾದ ಮು ರಾ. ಕೋಡಿಮಣಿಯಂಡ ಪೊಣಪ್ಪನವರು ಈ ತಾ. 4ರಲ್ಲಿ ಶಿವಾಧೀನರಾದರೆಂದು ತಿಳಿಯಲು ವಿಷಾದಿಸುತ್ತೇವೆ.

ಪೊಳೆಬೆಟ್ಟ ಮೇಕೂರು ಹೊಸಕೇರಿ ಗ್ರಾಮದ ಮು. ರಾ. ಕುಟ್ಟಂಡ ಅಚ್ಚಪ್ಪನವರು ಕಳೆದ ತಾ. 23ರಲ್ಲಿ ಸುಮಾರು 10 ಅಡಿ ಉದ್ದದ ಒಂದು ಹುಲಿಯನ್ನು ಗುಂಡು ಹೊಡೆದು ಕೊಂದರೆಂದು ತಿಳಿಯಬರುತ್ತದೆ.

ಕೊಡಗು ಸಹಕಾರಿ ಸೆಂಟ್ರಲ್ ಬ್ಯಾಂಕಿನ ಸುಪರ್‌ವಿಜನ್ ಬೋರ್ಡಿನ ಡೈರೆಕ್ಟರುಗಳ ವಿಟಿಂಗು ಈ ತಾ. 8ರಲ್ಲಿ ಬೆಳಿಗ್ಗೆ 10—30 ಗಂಟೆಗೂ ಮತ್ತು ಡೆಟ್ ಕನ್‌ಸಿಲಿಯೇಶನ್ ಬೋರ್ಡಿನ ಡೈರೆಕ್ಟರುಗಳ ವಿಟಿಂಗು ಮಧ್ಯಾಹ್ನ 1½ ಗಂಟೆಗೂ ನಡೆಯಲಿರುವುದು.

ಡೆರಾಡೆನ್ನಿನ ಇಂಡಿಯನ್ ಮಿಲಿಟರಿ ಎಕಾಡಮಿಗೂ ಮತ್ತು ರಾಯಲ್ ಇಂಡಿಯನ್ ನೇವಿಗೂ ಪ್ರವೇಶಕ್ಕಾಗಿ 1935ನೇ ಅಕ್ಟೋಬರು 21 ರಲ್ಲಿ ಡೆಲ್ಲಿಯಲ್ಲಿ ಒಂದು ಸ್ಪರ್ಧೆಯ ಪರೀಕ್ಷೆ ಪ್ರಾರಂಭವಾಗುವದೆಂದೂ, ಹೆಚ್ಚಿನ ವಿವರವನ್ನು ಕೊಡಗು ಕಮಿಷನರವರ ಆಫೀಸಿನಿಂದ ಪಡೆಯಬಹುದೆಂದೂ ಪ್ರಕಟವಾಗಿದೆ.

ಬೆಸಗೂರು ಗ್ರಾಮದ ಮು. ರಾ. ಹೆಚ್. ಆರ್. ಕೃಷ್ಣಯ್ಯನವರ ಹೆಂಡತಿಯ ತಮ್ಮನಾದ ನಾರಾಯಣನಿಗೆ ಸುಮಾರು 2 ತಿಂಗಳಿಂದ ಮೂಗಿನಿಂದ ರಕ್ತ ಸುರಿಯಲು ಪ್ರಾರಂಭಿಸಿ ಬಹು ಜೋರು ಕಾಯಿಲೆಯಂಗಿ ಮೈಸೂರು ಆಸ್ಪತ್ರೆಗೆ ಸಾಗಿಸಿದಲ್ಲಿ ಮೆ. ಕೃಷ್ಣಯ್ಯನವರು ತನ್ನ ಶರೀರದಿಂದ ಆರು ಬಾಟ್ಲಿ ರಕ್ತ ಕೊಟ್ಟದನ್ನು ಕಾಯಿಲೆಸ್ಥನ ಶರೀರಕ್ಕೆ ಇಂಜೆಕ್ಟ್ ಮಾಡಿದ ಕಾರಣ ಅವನು ವಾಸಿಯಾಗುತ್ತಿರುವನೆಂದು ವರ್ತಮಾನವಿದೆ.

ಸೋಮವಾರಪೇಟೆ ಬಾಳುಗುಂದ ತೋಟದಲ್ಲಿ ರೈಟರಾಗಿರುವ ಮೆ. ಪಟ್ಟಮಾಡ ಅಪ್ಪಯ್ಯನವರು ಈ ತಾ 3ರಲ್ಲಿ ಆಳುಗಳಿಗೆ ಸಂಬಳ ಕೊಡುತ್ತಿದ್ದಾಗ್ಗೆ ಒಬ್ಬ ಪಾಲೆಯವನು ಸಿಟ್ಟಿಗೆದ್ದು ಅಪ್ಪಯ್ಯನವರ ಹೊಟ್ಟೆಗೆ ಒಂದು ಕತ್ತಿಯಿಂದ ಕಡಿದು ಓಡಿ ಹೋದನೆಂದೂ, ಘಾಯಪಟ್ಟ ಅಪ್ಪಯ್ಯನವರು ಸೋಮವಾರಪೇಟೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ, ಪೊಲೀಸು ಪತ್ತೆ ನಡೆಯುತ್ತಿದೆಯೆಂಗಿಯೂ ವರ್ತಮಾನ.

ನಾಪೋಕ್ಲು ಬೆಂಚ್ ಮೇಜಿಸ್ಟ್ರೇಟರುಗಳಾದ ಮು. ರಾ. ಗಳಾದ ಬಿದ್ದಾಟಂಡ ಮೊದಪ್ಪನವರು ಮತ್ತು ಉದಿಯಂಡ ಮಾಚಯ್ಯನವರು (ಇಬ್ಬರೂ ಅಧ್ಯಕ್ಷರುಗಳು) ನಾಪನೆರವಂಡ ಪೊಣಪ್ಪನವರು, ಪನಾತಂಡ ಪೊಣ್ಣಮ್ಮ ಬೆಳ್ಯಪ್ಪಯವರು ಮತ್ತು ಐಯ್ಯೆಟ್ಟಿರ ನಂಜಪ್ಪನವರುಗಳ ಅವಧಿಯನ್ನು 1935ನೇ ಏಪ್ರಿಲ್ 24ನಿಂದ ಐದು ವರ್ಷಗಳ ವರೆಗೆ ಮುಂದರಿಸಲಾಗಿದೆ. ಇಬ್ಬರು ಅಧ್ಯಕ್ಷರುಗಳಲ್ಲಿ ಒಬ್ಬೊಬ್ಬರು ಒಂದೊಂದು ವಿಟಿಂಗಿನಲ್ಲಿ ಅಧ್ಯಕ್ಷರಾಗಿರುವರು.

ಮದ್ರಾಸು ಯುನಿವರ್ಸಿಟಿಯ ಬಿ. ಎ. ಪರೀಕ್ಷೆಯಲ್ಲಿ ಕುಕ್ಕೂರು ಗ್ರಾಮದ ಮೆ ಆರ್. ಶ್ರೀನಿವಾಸನ್‌ರವರು ಪೂರ್ತಿಯಾಗಿಯೂ, ಮೆ ಕೆ. ಯಸ್. ಪದ್ಮನಾಭನವರು ಸಂಸ್ಕೃತ ಮತ್ತು ಚರಿತ್ರೆಯಲ್ಲಿಯೂ, ಮೆ. ಕಾಡ್ಯಡಂಡ ಪಿ. ಚಂಗಪ್ಪನವರು ಕನ್ನಡದಲ್ಲಿಯೂ ಮತ್ತು ಎಸ್ ಜೋನಿರ ಬ್ಯೆಪನವರು 3ನೇ ಭಾಷೆಯಲ್ಲಿಯೂ, ಮಿಸ್ ಜೋಯಂಡ ಎ. ಕಾಮವ್ವನವರ ಬಿ. ಯಸ್ ಸಿ (ಆನರ್ಸ್) ಕೋರ್ಸಿನ ಪ್ರಥಮ ವರ್ಷದ ಪರೀಕ್ಷೆಯಲ್ಲಿಯೂ, ಮತ್ತು ಮಿಸ್ ಜೇಂದಂಡ ಯಂ. ಪೊನ್ನಮ್ಮನವರು ಇಂಟರ್ ಎಂಡಿಯೇಟ್ ಪರೀಕ್ಷೆಯಲ್ಲಿ ಪೂರ್ತಿಯಾಯೂ, ಮಿಸ್ ಕೋದಂಡ ಡಬ್ಬ್ಯು. ಸೀತಮ್ಮನವರು 1ನೆಯ ಮತ್ತು 2 ನೇ ಭಾಗಗಳಲ್ಲಿಯೂ ತೇರ್ಗಡೆಯಾಗಿರುವರೆಂದು ತಿಳಿಯುತ್ತೇವೆ. ಇವರಿಗೆಲ್ಲ ನಮ್ಮ ಅಭಿನಂದನೆಗಳಿವೆ.

ವಿದೇಶ.

ಕಾಶೀ ವಿಶ್ವವಿದ್ಯಾಲಯದಲ್ಲಿ 50 ಸಾವಿರ ರುಪಾಯಿಗಳ ಲೆಕ್ಕ ಪತ್ರಗಳಲ್ಲಿ ಗೋಜಿನ ನಡೆದಿದೆ. ಒಂದು ದಸ್ತಗಿರಿಯೂ ಆಗಿದೆ.

ಫೋಲ್ಸನ್ ಐಸ್‌ಕ್ರೀಮಿನವರು ತಮ್ಮ ಬೆಣ್ಣೆಯಲ್ಲಿ ಕ್ರಿಮಿ ತಪ್ಪಿ ನೀರು ಸೇರಿರುವರೆಂದು ಆ ಕಂಪೆನಿಯ ಮೇಲೆ ಸೈನಿ ತಾಲಿನಲ್ಲಿ ವ್ಯಾಜ್ಯ ಹೂಡಲಾಗಿದೆ.

ಸಿಂಧದ ಮಿರಾಯಿಯನ್ನು ವಿಶಾಯತಿಗೆ ಕಳುಹಿಸುವ ಏರ್ಪಾಡು ಮೂಡಲಗಿದೆ. ಈ ಕೆಲಸವು ಕರಾಚಿಯ ಒಂದು ಇಂಡಸ್ಟ್ರಿಯಲ್ ಕೋಮಿನವರಿಗೆ ಒಪ್ಪಿಸಲ್ಪಟ್ಟಿದೆ.

ದಕ್ಷಿಣ ಇಡಿಯದ ಪ್ಲಾಂಟರರ ಸಂಘವು ಅಧಿವೇಶನವು ಕುನ್ನೂರಿನ ಯುನೈಟೆಡ್ ಪ್ಲಾಂಟರರ ಸಂಘದ ಮುಖ್ಯ ಕಾರ್ಯಾಲಯದಲ್ಲಿ ಅಗೋಸ್ತು 13 ರಲ್ಲಿ ಜರುಗಲಿದೆ.

ವೈಸೂರೆ ವರ್ಧಂತಿ ಸಮಯದಲ್ಲಿ ಶ್ರೀಮಚ್ಛೃಷ್ಣ ರಾಜೇಂದ್ರ ಧನಶಾಲೆಯಲ್ಲಿ ನಡೆಯುವ ಪಸ್ತುಪ್ರದರ್ಶನವನ್ನು ಶ್ರೀ. ಭುಲ್ಲಾಯಿ ದೇಸಾಯಿಯವರು ತೆರೆಯಲಿರುವರು

ಆಗ್ರಾ ಸೆಂಟ್ರಲ್ ಜೈಲಿನ ಒಬ್ಬ ಡಾಕ್ಟರನು ಒಬ್ಬ ಖೈದಿಯು ಕಠಿನ ರೋಗದಿಂದ ನರಳುತ್ತಿದ್ದಾಗಲೂ ಆತನಿಗೆ ಕಿತ್ತಿ ಮೂಡದೆ ಆತನ್ನು ಧಿಕ್ಕರಿಸಿದನೆಂದು ಡಾಕ್ಟರರಿಗೆ ಸಸ್ಪೆಂಡ್ ಆಗಿದೆ

ಡೆಪ್ಯುಟಿ ಗವರ್ನರ್ ನವಾಬ್ ಸರ್ ಸಿಕಂದರ್ ಹೂತ್‌ಖಾನರವರು ಇಂಡಿಯೂ ರಿಜರ್ವ್ ಬ್ಯಾಂಕಿನ ಲಂಡನ್ನಿನ ಖಯ ಕಾರ್ಯನಿರ್ವಹಣೆಗಳನ್ನು ಬರುವ ತಿಂಗಳಲ್ಲಿ ನಿರ್ವಹಿಲಿರುವರು.

ಏಪ್ರಿಲ್ ತಿಂಗಳಲ್ಲಿ ರಾಜದ್ರೋಹಕರ ಭಾಷಣ ಮಾಡಿದರೆಂಬ ತಪ್ಪಿತಕ್ಕಾಗಿ ಬಾಂಬಯಿಯ ಕಮ್ಯುನಿಸ್ಟ್ ನಾಯಕರಾದ ಶ್ರಿ ಜಿ. ಕೆಕುಲಕರಣಿಯವರಿಗೆ 2 ವರ್ಷಗಳ ಕಾರಾವಾಸಕ್ಕೆ ವಿಧಿಸಲಾಯಿತು.

ಬೆಜವಾಡ ಗುಂಟೂರು ಈ ಪ್ರಾಂತ್ಯದಲ್ಲಿ ಉಗ್ರಾಣಿಕ್ಯದಿಂದ ಅನೇಕ ಮಂದಿ ಸಾಯುತ್ತಿದ್ದಾರೆ. ಜತೆಗೆ ಮನೆಗಳಿಗೆ ಬಿದ್ದ ಅವಾರ ನಷ್ಟವಾಗುತ್ತಿದೆ. ಪ್ರಾಣನಷ್ಟವೂ ದ್ರವ್ಯನಷ್ಟವೂ ಸಂಭವಿಸಿದೆ.

ಅಸ್ಸಾಮಿನ ಕಾಡುಗಳಲ್ಲಿ, ಭೂಮಿಯನ್ನು ಅನೇಂದ ಊಳಿಸುವ ಪೀಕ್ಷೆಯು ನಡೆಯುತ್ತು. ಇದು ಅಕಾರಿಯಂತೆ! ಇದೆ ಕ್ರಮವನ್ನೆ ಸುಸರಿಸಿ, ಕಾಡುಗಳನ್ನು ಕುತ್ತು ಟೀ ಇತ್ಯಾದಿ ಬೆಳೆಗಳನ್ನು ವ್ಯವಸಾಯಮಾಡುವರಂತೆ.

ಇಟೆಲಿ ಪತ್ರಿಕೆಯ ಅಬಸೀನಿಯದ ಲಡಾಯಿ ರಾಜಿಂದ ತೀರುವ ಹಾಗೆ. ಇದರಲ್ಲಿ ಬ್ರಿಟಿಶ ಸಲಹೆಗಳೆ ಎಲ್ಲವೂ ಪರ್ವಾಡುಗೊಡನೆ, ಸ್ವೀಕೃತವಾಗಲಿವೆ ಎಂದು ದ್ದಿ. ಇದರಿಂದ ಯುರೋಪಿನ ರಾಷ್ಟ್ರಗಳಿಗೆ ತುಂಬ ಸಂತೋಷವಾಗಿದೆ.

ಬೊಂಗೂರಿನಲ್ಲಿ ಒಬ್ಬ ಕರುಣಾ, ಸೈಕಲ್ ಏರಿಸವನ ನುಗುಡಿ ಗಾಂಧಿ ಬಜಾರಿನಲ್ಲಿರುವ ನಿವೃತ್ತ ಇನಸ್ಪೆಕ್ಟರ್ ರಂಗಸ್ವಾಮಿ ಅಯ್ಯಂಗಾರ್ ಎಂಬವರ ಮನೆಗೆ ನುಗ್ಗಿಳು. ಮೇಜಿನ ಮೇಲಿದ್ದ ಹಣವ ಚೀಲವನ್ನು ಅಪಹರಿಸುವಷ್ಟರಲ್ಲಿ ಸಿಕ್ಕಿ ಬಿದ್ದಳು: ವಿಚಾರವಾಗುತ್ತಿದೆ.

ಜಿಂಜೀದ ನವಾಬ್ ಸೈಹೇಬರು ಸಿಲ್ವರ್ ಜುಬಿಲಿಯ ಬಂಧ ಚಾಲಿ ವರ್ಷದಲ್ಲಿ ರವಿನ್ಯೂ ಬಾಬತಿನಲ್ಲಿ 2 ಸಾವಿರ ರೂಪಾಯಿಗಳ ಸೂಫಿ ಬಿಟ್ಟಿರುವರಲ್ಲದೆ, ಹಳೇ ಬಾಗಳು, ರುಸ್ಸಿ ಮತ್ತು ಹೊಸ ಬಾವಿಗಳ ನಿರ್ಮಾಣಕ್ಕಾಗಿ 3 ಸಾವಿರ ರೂಪಾಯಿಗಳನ್ನು ಬೇರೆ ದಯಪಾಲಿಸಿರುವರು

ಕೇರಳ ಪ್ರಾಂತೀಯ ಸಮ್ಮೇಳನವು ಮೇ 28ನೆಯ ದಿನ ಕಲ್ಲಿಕೋಟೆಯಲ್ಲಿ ಸೇರಿತು. ಮುಂಬಯಿಯಲ್ಲಿ ಸಮಯದ ಅಬ್ದುಲ್ಲಾ ಬೈಲ್ವಿಯವರೇ ಅಧ್ಯಕ್ಷರು. ಧ್ಯದೇಶದ ಪ್ರಮುಖ ಕಾಂಗ್ರೆಸ್ ನಾಯಕರಾದ ಶ್ರೀ ಟಿ ಪ್ರಕಾಶಂ ರವರು ಸಮ್ಮೇಳನದ ಆರಂಭೋತ್ಸವನ್ನು ನೆರವೇರಿಸಿದರು.

ಕಲ್ಲಿಕೋಟೆಯ ಗವರ್ನಮೆಂಟ್ ಕೇರಳ ಸೆಪ್ ಇನ್ಸ್‌ಟ್ಯೂಟ್‌ನಲ್ಲಿ ತಯಾರಾದ ಸಾಬೂನುಗಳನ್ನೇ ಪ್ರಯೋಪ [illegible] ಗವರ್ನರ್ ಅವರ ಪತ್ನಿಯವರೂ ಅಪ್ಪಣೆಕೊಡಿಸಿದ್ದಾರೆ. ಅಲ್ಲಿ ಸಧ್ಯಲ್ಲೇ ಸಿಲ್ವರ್ ಜುಬಿಲಿ ನಾಮಕರಣದ ಹೊಸ ಸಾಬೂನುಗಳು ತಯಾರಾಗಲಿವೆ.

ಬೊಬಾಯಿಯಲ್ಲಿ ಒಬ್ಬ ಚೀನದವನು ಕೆಲವಾಲದಿಂದ ಏನೋ ಒಂದು ಕಠಿನ ವ್ಯಾಧಿಯಿಂದ ನರಳುತ್ತಿದ್ದ. ಇದಕ್ಕೆ ಚೀನದಲ್ಲಿ ಹಳೆಯ ನುಬಿಕೆಯಂತೆ, ಜೀವಿನಕಷಾಯವೇ ಸರಿಯಾದ ಹಲವು ಜೀಳುಗಳನ್ನು ಬೇಯಿಸಿ ರಸದ ಕಷಾಯವನ್ನು ಕುಡಿದ. ಬೆಳಗ್ಗೆ ಕುಡಿದ ಸಂಜೆ ಸತ್ತ ರೋಗ ಗುಣವಾಯಿತು!

ಶಾಂತಿನಿಕೇತನದ ಒಂದು ಪುಸ್ತಕಾಲಯಕ್ಕೆ ಸುಮಾರು 10 ಸಾವಿರದ ಚೀನಾ ಡಾಲರಿನ ಸಂತಿಗೆ ದೆ. ಈ ವರ್ಷ 50 ಸಾವಿರ ಚೀನಾ ಡಾಲರಿನ ಸಂತಿಗೆ ಶಾಂತಿನಿಕೇತನಕ್ಕೆ ಬ್ಲಾದೆ. ಇದರಲ್ಲಿ 30 ಸಾವಿರ ಡಾಲರುಗಳು ಶಾಂತಿನಿಕೇತನಲ್ಲಿ ಒಂದು ಚೀನಿಯರ ಹಾಲ್ ಕಟ್ಟಲಿಕ್ಕೆ. ಮಿಕ್ಕ 20 ಸಾವಿರ ಅದೇ ಆ ಪುಸ್ತಕಾಲಯಕ್ಕೆ.

ಬೆಂಗಳೂರಿನಲ್ಲಿ ಒಬ್ಬ ಯುವಕನು ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣನಾಗಲಿಲ್ಲವೆಂದು ಸೋಮವಾರ ಪತ್ರಿಕಾಲಯ ರೈಲು ಕಂಬಿಯ ಮೇಲೆ ಪ್ರಾಣ ತೆಗೆದುಕೊಳ್ಳಲು ಬಿದ್ದ. ರೈಲು ನಡೆಸುವವನು ಸಾಹಸಪಟ್ಟು ಗಾಡಿಯ ವೇಗವನ್ನು ತಡೆದು ನಿಲ್ಲಿಸಿ, ಆ ವಿದ್ಯಾರ್ಥಿಯನ್ನು ಕರೆತಂದು ಪೋಲೀಸರ ವಶಪಡಿಸಿದ.

ಶೀಲ ಕುಮಾರ ಡೇ ಎಂಬವನು—ಬಂಗಾಳಿ ಯುವಕ ನೊಬ್ಬನು—ಪ್ರಪಂಚದ ಸಂಚಾರಕನು, ಆಗಲೇ ಇಂಡಿಯದಲ್ಲಿ ಕಾಲ್ನಡಿಗೆಯಿಂದಲೇ 25 ಸಾವಿರ ಮೈಲುಗಳಷ್ಟು ಪ್ರಯಾಣ ಮಾಡಿ ಮುಗಿಸಿ ಮುಂದೆ, ಅಫಘಾನಿಸ್ತಾನ, ತುರ್ಕಿ, ಇಟಲಿ, ಜರ್ಮನಿ ಮೊದಲಾದ ಕಡೆಗಳಿಗೂ ತೆಳಲಿರುವನು. ಈತನ ನ ಅಂಬೂರಿನಲ್ಲಿ ಸಂಶಯದ ಮೇಲೆ ಕೈದು ಮಾಡಿ ವೆಲ್ಲೂರ ಜೈಲಿನಲ್ಲಿ 3 ತಿಂಗಳು ಇಟ್ಟವನನ್ನು ಈಗ ಬಿಟ್ಟಿರುವರು.

ಸ್ಕೂಲ್ ಓಟರುಗಳಿಗೆ ಸಂಬಂಧಪಟ್ಟ ವಿಶೇಷ ಸವಲತ್ತುಗಳನ್ನು ವಿಮರ್ಶೆಮಾಡಿ, ತಮ್ಮ ವರದಿಯನ್ನು ಕ್ಷೇತ್ರನಿರ್ಧಾರಣ ಸಮಿತಿಗೆ ಕಳುಹಿಸಿಕೊಡಲು ಒಂದು ಉಪಸಮಿತಿಯನ್ನು ರಚಿಸಲು ಸರಕಾರದವರು ನಿರ್ಧರಿಸಿದ್ದಾರೆ. ಈ ಸಮಿತಿಗೆ ಸೇರಬೇಕೆಂದು ಮದರಾಸು ನ್ಯಾಯವಿಧಾಯಕ ಸಭೆಗೆ ಸದಸ್ಯರಾಗಿ ಆರಿಸಲ್ಪಟ್ಟಿರುವ ಶ್ರೀಮತಿ ರುಕ್ಮಿಣಿ ಲಕ್ಷ್ಮೀಪತಿಯವರಿಗೆ ಸರಕಾರದವರು ಆಹ್ವಾನವಿತ್ತರು. ಶ್ರೀಮತಿಯವರು ಆ ಆಹ್ವಾನವನ್ನು ತಿರಸ್ಕರಿಸಿಬಿಟ್ಟರು.

ಮೇ 18ನೇ ತಾರೀಕಿನಲ್ಲಿ, ಅಖಿಲಾಂ ಸೋಶಿಯಲಿಸ್ಟರ ಕಾನ್ಫರೆನ್ಸನ್ನು ಶ್ರೀಮತಿ ಕಮಲಾ ದೇವಿಯವರ ಅಧ್ಯಕ್ಷತೆಯಲ್ಲಿ ಜರುಗಬೇಕಾಗಿದ್ದಿತು. ಆದರೆ ಆ ಕಾನ್ಫರೆನ್ಸಿನ ಅಧಿವೇಶನವನ್ನು ಮುಂದಿಗಿಡಲಾಗಿದೆ ಎಂದು ಪೊಲೀಸಿನಿಂದ ಅವರಿಗೆ ತಂತಿ ಬಂದುದರಿಂದ ಅವರು ಹೋಗಲಿಲ್ಲ. ಈಗ ಆ ತಂತಿ ಸುಳ್ಳೆಂದೂ, ಕಾನ್ಫರೆನ್ಸಿನ ತಾರೀಕನ್ನು ಬದಲಿಸಿಲ್ಲವೆಂದೂ, ಡೆಲಿಗೇಟರು ಬಂದು, ಅಧ್ಯಕ್ಷರನ್ನು ಕಾಯುತ್ತಿರುವರೆಂದೂ ಮತ್ತೊಂದು ತಂತಿ. ನಿಜಾಂಶವು ತಿಳಿದು ಬಂದಿಲ್ಲ.

ಪ್ರಕಟಣೆ.

ಅಮ್ಮತ್ತಿ ಸಿದ್ದಾಪುರನಾಡು ಸಿದ್ದಾಪುರ ಪೇಟೆಯಲ್ಲಿರುವ ಲೇಟ್ ಟಿ. ಎ ದೊರೆಸಾಮಿ ಪಿಳ್ಳೆಯವರ ಮಗ ಮುರುಗೇಶ ಪಿಳ್ಳೆಯ ಹೆಂಡತಿ ಧನಲಕ್ಷ್ಮಿಯಮ್ಮನು ತನಗಾಗಿಯೂ ತನ್ನ ಪೋಷಣೆಯಲ್ಲಿರುವ ತನ್ನ ಮೈನರು ಮಗು ಜೆಲುವರಾಜುಗೆ ಗಾರ್ಡಿಯನ್ ಆಗಿ ಈ ಮೂಲಕ ಸಮಸ್ತ ಜನರಿಗೂ ತಿಳಿಸುವುದೇನಂದರೆ—

ನನ್ನ ಗಂಡ ಮೆ. ಟಿ ಡಿ. ಮುರುಗೇಶ ಪಿಳ್ಳೆಯನವರು ಲೇಟ್ ಟಿ ಎ. ದೊರೆಸಾಮಿ ಪಿಳ್ಳೆಯವರು ಮತ್ತು ಇವರ ತಂದೆಯವರು ಮಾಡಿದ ಜರ ಸ್ಥಿರ ಸೊತ್ತುಗಳನ್ನು ನ್ಯಾಯವಾದ ಯಾ ಕುಟುಂಬಕ್ಕೆ ಅಗತ್ಯ ಯಾ ಪ್ರಯೋಜನವಿಲ್ಲದ ಅನಾವಶ್ಯವಾದ ದುಂದುಗಾರಿಕೆ ಬಗ್ಗೆ ಸಾಲವಾಡಿ ಕಲಿತಾಲು ವಡುತ್ತಿದ್ದಾರೆ. ಸದರಿ ಸೊತ್ತುಗಳು ಪಿತ್ರಾರ್ಜಿತವಾದ್ದರಿಂದಲೂ, ಇವರಲ್ಲು ನನಗೂ ನನ್ನ ಮೈನರು ಮಗನಿಗೂ ಹಕ್ಕಿರುವುದರಿಂದ ಸದರಿ ಮುರುಗೇಶ ಪಿಳ್ಳೆಯವರಿಗೆ ಮೂರಾಟಕ್ಕಾಗಲೀ, ಗಿರಿ-ಕೊಡ್ಡುವುದಾಗಲೀ ಯಾ ಯಾವ ವಿಧದ ಪರಾಧೀನಮಾಡಲು ಹಕ್ಕಿರುವುದಿಲ್ಲ. ಈ ವರೆಗೆ ಅವರು ಮೇಲ್ಕಂಡ ರೀತಿ ಕಲಾಲುಮಾಡಿದ್ದ ಪಕ್ಷ ಸದರಿ ಪರಾಧೀನಗಳು ಯಾ ಸಾಲಗಳು ಸಿಂಧುವಲ್ಲ. ಇವುಗಳ ರದ್ದಾಯತಿಗೆ ದಾವೆ ದಾಖಲುಮಾಡಲಾಗುತ್ತೆ. ಮುಂದೆ ಮಾಡಬಹುದಾದ ಪರಾಧೀನಗಳು ಯಾ ಸಾಲಗಳು ಸಹ ಸಿಂಧುವಾಗಲಾರವು. ಇವರಲ್ಲು ಲೇವಾದೇವಿಮಾಡುವವರು ಈ ಸುಗತಿಗಳಿಗೆ ಎಚ್ಚರವಿರತಕ್ಕದ್ದು ಎಂಬದನ್ನು ಈ ಮೂಲಕ ಸಮಸ್ತ ಜನರಿಗೂ ತಿಳಿಸಿದೆ.

ಆರ್. ಎಸ್. ಸಂಜೀವರಾವ್,
ಬಿ. ಎ, ಬಿ. ಎಲ್.,
ಎಸ್. ಎಸ್. ರಾಮಮೂರ್ತಿ,
ಬಿ. ಎ., ಬಿ. ಎಲ್.,
ಧನಲಕ್ಷ್ಮಿಯಮ್ಮನ ಕಡೆ ವಕೀಲರು.

ಡಾಕ್ಟರ್ ಮೋತ್ಯುಸ್ ಎಬ್ರಹಾಮ್.
ದಂತ ವೈದ್ಯರು.
ಗೀತಾಂಜಲಿ ಬಂಗ್ಲೆ.
(ಪೋಸ್ಟಾಫೀಸು ಎದುರುಗಡೆ)
ಸಕಲ ಹಲ್ಲು ನೋವುಗಳನ್ನು ಶೀಘ್ರವಾಗಿ ಗುಣಪಡಿಸುವದಲ್ಲದೆ, ಸುಂದರವಾದ ಕೃತ್ರಿಮ ಹಲ್ಲುಗಳನ್ನು ಮನ ಟ್ಟು ವರು. ಒಮ್ಮೆ ಪರೀಕ್ಷೆ ಮಾಡಿಸಲ್ಲು ತಿಳಿಸು

ಕನ್ನಡ ತರುಣರಿಗೆ ಸಮಾಚಾರ.

ಹಿಂದೀ ಶಿಕ್ಷಕರಾಗಿರಿ!

ಅಖಿಲ ಕರ್ನಾಟಕದಲ್ಲಿ ವಿಶೇಷವಾಗಿ ಮೈಸೂರು ಸಂಸ್ಥಾನದ ಅನೇಕ ಹೈಸ್ಕೂಲುಗಳಲ್ಲಿ ಮತ್ತು ಸ್ವತಂತ್ರ ಕೇಂದ್ರಗಳಲ್ಲಿ ಹಿಂದೀಭಾಷೆಯು ಐಚ್ಛಿಕವಾಗಿ ಅಥವಾ ಅನಿವಾರ್ಯವಾಗಿ ಕಲಿಸಲ್ಪಡುವ ವಿಷಯವು ಸರ್ವವಿದಿತವಾಗಿದೆ. ಈ ವರ್ಷ ಮೈಸೂರು ಸಂಸ್ಥಾನದಲ್ಲಿ 50ಕ್ಕೆ ಮೇಲ್ಪಟ್ಟ ಮಿಡಲ್ ಸ್ಕೂಲ್‌ಗಳ ವ್ಯವಸ್ಥಾಪಕರು ತಮ್ಮಲ್ಲಿ ಹಿಂದೀಭಾಷೆಯನ್ನು ಕಲಿಸಲು ಬಹಳ ಉತ್ಸಕರಾಗಿದ್ದಾರೆಂದು ಕೇಳ್ಪಟ್ಟಿವೆ. ಇಷ್ಟಲ್ಲದೆ ಎಷ್ಟೋ ಕಡೆಗಳಲ್ಲಿ ನವೀನ ಕೇಂದ್ರಗಳು ಸ್ಥಾಪನೆಗೊಳ್ಳಬೇಕಾಗಿದೆ. ಆದರೆ ಈ ಕಾರ್ಯವು ಯೋಗ್ಯರಾದ ಹಿಂದೀ ಪ್ರಚಾರಕರು ದೊರೆಯದ ಕಾರಣ ಅಧಮರ್ಧವಾಗಿ ನಿಂತು ಹೋಗಿದೆ

ಬೆಂಗಳೂರು ಹಿಂದೀ ಪ್ರಚಾರ ಸಂಘದವರು ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಶೀಘ್ರದಲ್ಲೇ ತಮ್ಮ ಕರ್ನಾಟಕ ಹಿಂದೀ ಮಹಾ ವಿದ್ಯಾಲಯವನ್ನು ತೆರೆಯಬೇಕೆಂದು ಶ್ರಮಿಸುತ್ತಿದ್ದಾರೆ. ಈ ವಿದ್ಯಾಲಯವು ಹಿಂದೀ ಪ್ರಚಾರಕರಾಗಿ ಕೆಲಸ ಮಾಡಲು ಸಿದ್ಧರಾಗಿರುವವರ ಸಲುವಾಗಿ ತೆರೆಯಲ್ಪಡುತ್ತೆ

ಆದ್ದರಿಂದ ಉತ್ತರ ಹಿಂದೂಸ್ಥಾನದಲ್ಲಿ ಅಧ್ಯಯನ ಮಾಡಿರುವ ಹಿಂದೀ ವಿದ್ವಾಂಸರೇ ವಿದ್ಯಾಲಯದಲ್ಲಿ ಪಾಠ ಪ್ರವಚನಗಳನ್ನು ನಡೆಸುವರು. ವಿದ್ಯಾರ್ಥಿಗಳಿಗೆ 'ರಾಷ್ಟ್ರಭಾಷಾ ವಿಶಾರದ' ಕೋರ್ಸಿನ ಜೊತೆಗೆ ಹಿಂದೀ ಮತ್ತು ಕನ್ನಡ ಸಾಹಿತ್ಯಗಳ ತುಲನಾತ್ಮಕ ಜ್ಞಾನ, ಭರತಖಂಡದ ರಾಷ್ಟ್ರೀಯ ಇತಿಹಾಸ, ಪ್ರಚಾರ ಕಾರ್ಯ, ಪ್ರಣಾಳಿ ಮತ್ತು ಶಿಕ್ಷಣ ಪದ್ಧತಿಗಳು ಬೋಧಿಸಲ್ಪಡುತ್ತದೆ. ವಿದ್ಯಾಲಯವು ಜೂನ್ ತಿಂಗಳ ಮೂರನೇ ವಾರದಲ್ಲಿ ಪ್ರಾರಂಭವಾಗುವುದು. ಸೇರತಕ್ಕವರು ಕನಿಷ್ಠ ಪಕ್ಷ ಇಂಗ್ಲೀಷ್ ಎಸ್. ಎಸ್. ಎಲ್. ಸಿ. ವರೆಗೆ ಮತ್ತು ಹಿಂದಿಯಲ್ಲಿ ರಾಷ್ಟ್ರಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದವರು ಆಗಿರಬೇಕು.

ಯೋಗ್ಯರಾದ ಬಡ ವಿದ್ಯಾರ್ಥಿಗಳಿಗೆ (ಕೆಲವರಿಗೆ ಮಾತ್ರ) ಧರ್ಮಾರ್ಥ ಊಟ ಮತ್ತು ವಸತಿಗಳ ವ್ಯವಸ್ಥೆಯನ್ನು ಮಾಡಲಾಗುವುದು. ಜೂನ್ ತಾರೀಕು 12ರ ವರೆಗೆ ಅರ್ಜಿಗಳು ಸ್ವೀಕರಿಸಲ್ಪಡುತ್ತವೆ ಅರ್ಜಿಯ ಜೊತೆಗೆ ಸ್ಥಳೀಯ ಹಿಂದೀ ಪ್ರಚಾರಕರ ಮತ್ತು ಹೈಸ್ಕೂಲು ಮುಖ್ಯೋಪಾಧ್ಯಾಯರ ಅಥವಾ ಸ್ಥಳೀಯ ಅಧಿಕಾರಿಗಳ ಶಿಫಾರಸ್ಸು ಪತ್ರಗಳನ್ನು ಕಳುಹಿಸತಕ್ಕದ್ದು. ವಿದ್ಯಾರ್ಥಿಗಳು ತಮ್ಮ ಅರ್ಜಿಗಳಲ್ಲಿ 1. ಹೆಸರು ವಿಳಾಸ 2. ವಯಸ್ಸು 3 ಯೋಗ್ಯತೆ 4. ವಾರ್ಷಿಕ ಆದಾಯ 5 ಸಂಸ್ಕೃತ ಗೊತ್ತಿದೆಯೆ? ಯಾವ ಯಾವ ಭಾಷೆಗಳ ಜ್ಞಾನವಿದೆ? ಎಂಬ ಅಂಶಗಳನ್ನು ಸಮೂಹಿಸಿ ನಾಲ್ಕಣೆ ಟಪಾಲು ಚೀಟಿ ಸಹಿತ ಕೆಳಗಿನ ವಿಳಾಸಕ್ಕೆ ಕಳುಹಿಸಬೇಕೆಂದು ಪಂಡಿತ ಸಿದ್ಧನಾಥ ಪಂತರು ತಿಳಿಸಿರುತ್ತಾರೆ.

ಗೌ. ಕಾರ್ಯದರ್ಶಿ,
ಹಿಂದೀ ಪ್ರಚಾರಕ ಸಂಘ,
ನ್ಯಾಷನಲ್ ಹೈಸ್ಕೂಲ್, ಬಸವನಗುಡಿ.
ಬೆಂಗಳೂರು ಸಿಟಿ.

ಸೆಲ್ಫ್ ಇಂಗ್ಲಿಷ್ ಸ್ವಡಿ.

ಕನ್ನಡ ಓದಲು ತಿಳಿದವನು ಒಬ್ಬರ ಸಹಾಯವಿಲ್ಲದೆ ಇಂಗ್ಲಿಷ್ ಓದುವುದನ್ನೂ ಬರೆಯುವುದನ್ನೂ ಮಾತಾಡುವುದನ್ನೂ ಇಂಗ್ಲಿಷಿನಲ್ಲಿ ಪತ್ರವ್ಯವಹಾರ ಮಾಡುವುದನ್ನೂ 2 ತಿಂಗಳಲ್ಲಿ ಕಲಿತುಕೊಳ್ಳಬಹುದು. 880 ಪೇಜುಗಳ ದೊಡ್ಡ ಪುಸ್ತಕ. ಇಂಥ ಪುಸ್ತಕವನ್ನು ಇದುವರೆಗೆ ಯಾರೂ ತಯಾರಿಸಲಿಲ್ಲ. ಬೇಗನೆ ಬರೆಯಿರಿ.

ಕ್ರಯ ಪುಸ್ತಕ 1ಕ್ಕೆ ರೂ. 2.

ವಜ್ರದ ಉಂಗುರಗಳು ೧ಕ್ಕೆ ಆಣೆ ೧೨.

ಈ ಉಂಗುರಗಳನ್ನು ಇಮಿಟೇಷನ್ ವಜ್ರದ ಕಲ್ಲುಗಳನ್ನು ಇಟ್ಟು ರೊಲ್ಡ್ ಗೋಲ್ಡ್ ಭಂಗಾರದಿಂದ ಕಟ್ಟಡ ಕಟ್ಟಿದೆ. ಇದರ ಬಣ್ಣವು ಎಂದಿಗೂ ಕೆಡದಂತೆ ಇಲೆಕ್ಟ್ರಿಕ್ ಪವನಿನಿಂದ ಒಣ್ಣಕೊಟ್ಟಿದೆ. 1ಕ್ಕೆ 12 ಆಣೆ. 3 ಉಂಗುರಗಳಿಗೆ 1 ಟೈಂಪೀಸನ್ನೂ, 6 ಉಂಗುರಗಳಿಗೆ 1 ಪಾಕೆಟ್ ವಾಚನ್ನೂ, 12 ಉಂಗುರಗಳಿಗೆ 1 ರೋಲ್ಡ್ ಗೋಲ್ಡ್ ಭಂಗಾರದ ರಿಸ್ಟ್ ವಾಚನ್ನೂ ಇನಾಮಾಗಿ ಕೊಡುವೆನು.



ವಿಳಾಸ—ನೇಥಾ ಎಂಡ್ ಕಂಪೆನಿ,
11. ಪೆರಿಯನಾಯಕರನ್ ಸ್ಟ್ರೀಟ್,
ಸೌಕ್ಕಾರ್‌ಪೇಟೆ, ಮದ್ರಾಸು.

ಮಲೆರಿನ್ ಬಿಲ್ಲೆಗಳು—

ಮಲೆ ಜ್ವರ, ಥಳ ಜ್ವರ, ಮತ್ತು ಪಿತ್ತಜ್ವರಗಳನ್ನು ಖಾತ್ರಿ ಗುಣಪಡಿಸುತ್ತದೆ. 60, 100 500, 100 ಬಿಲ್ಲೆಗಳಿಗೆ ರೂ. 1, 1/8, 7, 13/3.

ರಿಂಗ್ ವರ್ಮ್ ಬಾವು ಗಜಕರ್ಣ ಹುಳಕಡಿ, ಹುಳ ಮೇಯುವುದು, ಇತ್ಯಾದಿಗಳಿಗೆ ಸಿದ್ಧೌಷಧ. ಡಬ್ಬಿಗೆ ಆಣೆ 5,

ಕಂಪೌಂಡ್ ಸಿರಪ್ ಕಾಡೆಫ್ಸ್—ಪಿತ್ತ—ಕಾಮಲೆ, ತಲೆತಿರುಗುವುದು, ಅರಸಿನ ಮುಂಗಾಗೆ, ಬಾಯಿಕೆ, ರುಚಿ ತಪ್ಪುವುದು ಅಜೀರ್ಣತೆ, ಮಲಬದ್ಧತೆ, ಎಸೆಸುಡುವುದು, ಸ್ತ್ರೀ ಭಂಗ, ಹಳದಿ ಮೂತ್ರ ಈ ಮೊದಲಾದ ಪಿತ್ತದ ಲಕ್ಷಣಗಳನ್ನು ಗುಣಪಡಿಸುತ್ತದೆ. ಸೀಸೆಗೆ ರೂ. 3—8—0 ಮತ್ತು 1—14—0.

ಸಿರಪ್ ಬ್ಲಟ್—ಉಬ್ಬಸ, ವೇವಸ, ಕೆಮ್ಮು, ಕಫ, ದಮ್ಮು ರೋಗಕ್ಕೆ ಖಾತ್ರಿ. ಸೀಸೆಗೆ ರೂ 3—8—0 ಮತ್ತು 1—14—0.

ಈಯರ್ ಆಯಿಲ್—ಕಿವಿ ಸೋರುವುದು, ದುರ್ವಾಸನೆ ಬರುವುದು, ಕಿವುಡುತನ, ಕಿವಿಯ ಒಳಗೆ ಕಜ್ಜಿಹೋಗಿ ಇತ್ಯಾದಿ ಅಸ್ವಸ್ಥಿಗಳನ್ನು ಗುಣಪಡಿಸುತ್ತದೆ ½ ಔನ್ಸಿಗೆ ಆಣೆ8.

ಶುದ್ಧ ಟಿಶ್ಯೂ ಮದ್ದುಗಳೂ, ಹೊಸಪಥಿ ಔಷಧಗಳೂ ವಿವಿಧ ರೋಗಗಳಿಗಾಗುವ ಇತರ ಮದ್ದುಗಳನ್ನೂ ನಮ್ಮಲ್ಲಿ ದೊರಕುತ್ತವೆ.

ವಾರ್ಮ್ ಎಫೆಕ್ಟ್‌ಲರ್ ಬಿಲ್ಲೆಗಳು—ಸಕಲ ಪ್ರಕಾರದ ಹೊಟ್ಟೆ ಹುಳಗಳನ್ನು ನಿಶ್ಚಯವಾಗಿ ಜಾಡಿಸುವುದರಲ್ಲಿ ಮುಖ್ಯ ಔಷಧಿ. ದೊಡ್ಡವರಿಗೆ ಆಣೆ 5. 100ಕ್ಕೆ ರೂ. 2.

ಸಿರಪ್ ಸೆಬೀನ ಸೆಪಿಯೆ—ಕ್ರಮ ತಪ್ಪಿ ಮುಟ್ಟಾಗುವುದು ಅತಿರೇಕಸ್ರಾವ, ಹುಳು ಸೂಲ್ಮೆ ಹೊಟ್ಟೆ ನೋವು, ಸೊಂಟ ವೆನ್ನು ನೋವು, ಬಿಳಿ ಸೆರೆಗು ಮೊದಲಾದವುಗಳಿಗೆ ಸಿದ್ಧೌಷದಿ. ಸೀಸೆಗೆ ರೂ 3—೫—0 ಮತ್ತು 1—14—0

ಪಿತ್ತ ಕಮನ ತೈಲ—ಪಿತ್ತ ಉದ್ರೇಕದಿಂದ ತಲೆತಿರುಗುವುದು, ನೆತ್ತಿ ಸುಡುವಗು, ತಲೆ ಸಿಡಿತ, ಕಂಣು ಉರಿ ನಿದ್ರಾಭಂಗ, -ಭಯಂಕರವಾದ ಕನಸು ಇವುಗಳಿಗೆ ಅಮೂಲ್ಯ ಸೀಸೆಗೆ ರೂ. 1—8—0,

ಸಿರಪ್ ಸಾಲಿಸವನಾ—ಇದು ಇಂದ್ರಿಯ ಪತನ ರೋಗದ ಬುಡವನ್ನು ಕಿತ್ತು ಬಿಸಾಡುವದಲ್ಲದೆ ಧಾತು ಪೌಷ್ಟಿಕ ರಸಾಯನವಾಗಿರುತ್ತದೆ. ಸೀಸೆಗೆ ರೂ, 3—8—0 ಮತ್ತು 1—14—0.

ಸಿರಪ್ ಸರ್ಸನೆ ಇಗ—ರಕ್ತ ಕೆಟ್ಟು ಶುದ್ಧರಕ್ತಗುವ ಬೊಕ್ಕೆ, ಕಜ್ಜಿ, ಹುಳ ಮೇಯುವದು, ಲೂತಿ, ನಿದ್ರಾ ಭಂಗ, ಪಿತ್ತ ಉದ್ರೇಕದಿಂದ ಬರುವ ಪಡಿಕೆ, ಜೀರ್ಣದ ಬಲಹೀನತೆ, ಮಲಬದ್ಧತೆ, ಬಿಳಿವ ಕಪ್ಪು ಕಲೆಗಳು ಇತ್ಯಾದಿಗಳನ್ನು ಗುಣ ಪಡಿಸಿ ರಕ್ತವನ್ನು ಶುದ್ಧೀಕರಿಸುತ್ತದೆ. ಸೀಸೆಗೆ ರೂ. 3—೫—0 ಮತ್ತು 1—14—0.

ಕೆಟಲಾಗು ಧರ್ಮಾರ್ಥ. ಬರೆಯಿರಿ:—

The Malaiana Co., No. 14, Mangalore.

ಮಲೇರಿಯೊನ ಕಂಪನಿ, ಹಂಪನಕಟ್ಟೆ, ನಂಬ್ರ 14, ಮಂಗಳೂರು, ದ. ಕ.

52—48

---

501 ಸ್ಪೆಷಲ್ ಸಾಬೂನು ಬಂದಿದೆ.

52—5

ಮೇಲ್ತರಗತಿಯ ಜೆನ್ನಾಗಿ ಒಗೆಯುವ ಸಾಬೂನು ಬೇಕೆಂದು ಗಿರಾಕಿಗಳು ಹೆಚ್ಚಾದ್ದರಿಂದ 501 ಸ್ಪೆಷಲ್ ಒಗೆಯುವ ಸಾಬೂನನ್ನು ತಯಾರಿಸಿದೆ ಹೆಸರುವಾಸಿಯಾದ ಟಾಮ್‌ಕೋ 501 ಒಗೆಯುವ ಸಾಬೂನಿಂದ ಸ್ಪೆಷಲಾಗಿ ತಯಾರಿಸಿದೆ. ಇದು ಸ್ವಚ್ಛವಾಗಿಯೂ, ಮೃದುವಾಗಿಯೂ ಇದೆ. ಬಹಳ ನಾಜೂಕಾದ ಬಟ್ಟೆಗಳನ್ನು ಜೊಕ್ಕಟವಾಗಿ ಒಗೆಯಬಹುದು.

TOMCo

ಇತರ ವಿಷಯಗಳಿಗೆ ಬರೆಯಿರಿ—
ಟಾಮ್‌ಕೋ ವೊರಾಟದ ಮಳಿಗೆ,
೧, ಸೆಂಟ್ರಲ್ ಸ್ಟ್ರೀಟ್
ಬೆಂಗಳೂರು ದಡು.

ಮಾರಿಸುವವರು.—
ತಾತಾ ಆಯಿಲ್ ಮಿಲ್, ಕಂಪೆನಿ, ಲಿಮಿಟೆಡ್, ಬೊಂಬಾಯಿ ಮತ್ತು ತಾತಾಪುರಂ.
ಕೊಡಗಿನ ಡಿಸ್ಟ್ರಿಬ್ಯೂಟರ್—ಬಿ. ಎಸ್ ಸುಬ್ಬಣ್ಣ, ಸಂತೆಪೇಟೆ, ಮೈಸೂರು.

ಪ್ರಸಿದ್ಧ ಔಷಧಗಳು.

ನವರತ್ನ
ಅಶೋಕಾರಿಷ್ಟ.

ಸ್ತ್ರೀಯರು ಕ್ರಮವಾಗಿ ಮಟ್ಟಾಗದಿರುವಿಕೆ ಮುಟ್ಟಾಗುವಾಗ ಬರುವ ಹೊಟ್ಟೆನೋವು, ಸೊಂಟನೋವು, ಗರ್ಭಕೋಶ, ಬೆನ್ನು ಮೂಳೆನೋವು, ಅಧಿಕಶ್ರಾವ, ಸೋಸು ರೋಗ ಇಗ್ಗೆರೆ ಪರಿಹರಿಸಿ ಸ್ತ್ರೀಯರ ಆರೋಗ್ಯವನ್ನು ಸಂರಕ್ಷಿಸುವ ಗರ್ಭ ರಕ್ಷಿಣಿಯು,

ದೊಡ್ಡ ಕುಪ್ಪಿ 2—8—0, ಅರ್ಧ ಕುಪ್ಪಿ 1—6—0.

ನವರತ್ನ
ದ್ರಾಕ್ಷಾರಿಷ್ಟ.

ಅಜೀರ್ಣ, ಅಗ್ನಿಮಾಂದ್ಯ, ಅರುಚಿ ನಿವಾರಣೆ ಮಾಡಿ ಪರಿಹರಿಸಿ, ಜೀರ್ಣಶಕ್ತಿಯನ್ನೂ, ನರಶಕ್ತಿಗೆ ತಾಣವನ್ನೂ, ಮಾಂಸದಲ್ಲಿ ಕಾಂತಿಯನ್ನೂ, ವೀರ್ಯಕ್ಕೆ ಉತ್ಸಾಹವನ್ನೂ ಕೊಡುವ ಪ್ರಸಿದ್ಧವಾದ ಔಷಧಿ.

ದೊಡ್ಡ ಕುಪ್ಪಿ 1—8—0, ಅರ್ಧ ಕುಪ್ಪಿ 0—13—0.

ಸ್ವರ್ಣಮಿಶ್ರಿತ
ನವರತ್ನಾವೃತ.

ನಿರ್ಬಲವಾದ ನಿಮ್ಮ ಶರೀರವನ್ನು ಶಕ್ತ್ಯಭಿವೃದ್ಧಿಯಿಂದ ದೇಹಪುಷ್ಟಿಯನ್ನೂ, ವೀರ್ಯವೃದ್ಧಿಯನ್ನೂ, ಖಂಡಪುಷ್ಟಿಯನ್ನು ಉಂಟುಮಾಡಿ, ನಿಮ್ಮನ್ನು ದೃಢಕಾಯರನ್ನಾಗಿಯೂ, ಆರೋಗ್ಯವಂತರನ್ನಾಗಿಯೂ ಮಾಡುವ ಭಂಗಾರ ಮಿಶ್ರಿತ ಅಮೋಘವಾದ ಟಾನಿಕ್ಕು.

ದೊಡ್ಡ ಕುಪ್ಪಿ 3—8—0, ಅರ್ಧ ಕುಪ್ಪಿ 1—14—0.

ನವರತ್ನ
ಚ್ಯವನಪ್ರಾಶ.

ಉಬ್ಬಸ, ಖಾಸ, ಕೆಮ್ಮು, ದಮ್ಮು, ಕ್ಷಯ, ಕಫದ [illegible] ಪರಿಹರಿಸಿ ಎನರ್ಜಿಗೆ ಶಕ್ತಿಯನ್ನು ಕೊಡುವ ಆಯುರ್ವೇದದಲ್ಲಿನ ಪ್ರಸಿದ್ಧವಾದ ಲೇಹ್ಯವು.

¼ lb. 1—8—0, ⅛ lb. 0—13—0.

ಹೆಚ್ಚಿನ ಮಾಹಿತಿಗೆ ಬೆದುಕೊಳ್ಳಿರಿ—

ಏಜೆಂಟರು—ಎ. ಎಸ್. ಮಾಚಯ್ಯ, ಜವುಳಿ ಅಂಗಡಿ, ಗೋಣಿಕೊಪ್ಪ. } ಸ್ಟೋರಿಸ್ಟ್—ವಿ. ಬಿ ಕಾಮತ್, ಮಹದೇವಪೇಟೆ, ಮಡಿಕೇರಿ.

52—5

ವರ್ಷ ೨೦ ಸಂಚಿಕೆ, [illegible]

For Sale.

KODAGARAHALLI ESTATE.

Kodagarahalli Estate adjoining Coorghally Estates Ltd., near 11th mile Stone Mercara-Farzerpet road Sunticoppa.

For particulars apply to:—

K. Narsimha Murti.
Brahmin Valley,
Mercara.

ಮಾರಾಟಕ್ಕಿದೆ.

ಮಡಿಕೇರಿಯಿಂದ ಫೈರ್‌ಪೇಟೆಗೆ ಹೋಗುವ 11 ನೇ ಮೈಲು ಕಲ್ಲಿನ ಬಳಿ ಇರುವ ಕೊಡಗಳ್ಳಿ, ಕಾಪಿನ ಎಸ್ಟೇಟ ಕಾಫಿ ಹೊಟ್ಟೆಕ್ಕೆ ಮಟ್ಟಿ [illegible] ಪ್ರದೇಶವು ತೋಟವು ವಿಕ್ರಯಕ್ಕೆ ಸಿದ್ಧವಾಗಿದೆ. [illegible] ಅಪೇಕ್ಷಿಸುವವರು ಹೆಚ್ಚಿನ ವಿಷಯಕ್ಕೆ [illegible] ತಿಳಿದುಕೊಳ್ಳಬಹುದು.

ಕೆ. ನರಸಿಂಹ ಮೂರ್ತಿ,
ಬ್ರಾಹ್ಮಣ ಕೇರಿ,
ಮಡಿಕೇರಿ.

8—6

[illegible] ಪ್ರಜಾತಿ [illegible]

ಕರ್ಕಕಂಪೆನಿ

ಸ್ಥಾಪಿತ : ೧೮೫೩ ಇ.

ಹತ್ತಿಬಟ್ಟೆ, ಚಾಪುಡೆ ಜಮಖಾನೆ, ಬಿಸಿಬಟ್ಟೆ, ಬರ್ಲಾಪ್ಪಿ, ಸುಲೇರಿಯೂ ಬಟ್ಟೆ ಇತ್ಯಾದಿ [illegible] ರಮ್ಯ ಬಾಣದಂತೆ ಇವೆ. ಬಾಟ್ಲಿಗೆ ಬೂ. ಗಿ. ಟು. ಮಿ. ಒ ಆಸೆ. ಬದಲಾಗಿ ತರಿಸಿಕೊಳ್ಳಿ.

[illegible] ಬರೆಯಿರಿ ಕರ್ಕ.

(52—38) ಮುಂಬಯಿ ಕಂಪನಿ,
ಸರ್ಕಾರಿ ಮುದ್ರಣಾಲಯ.

ಭಾರತದ ಮುಂದಿನ ಜನಾಂಗದ ಆರೋಗ್ಯ ಮತ್ತು ಕ್ಷೇಮ ವರ್ಧನೆಯು ಇಂದಿನ ಅನೇಕ ರಾಜಕೀಯ ಮತ್ತು ಸಾಮಾಜಿಕ ಮುಂದಾಳುಗಳ ದೃಷ್ಟಿಯಲ್ಲಿರುವ ಒಂದು ದೊಡ್ಡ ಸಮಸ್ಯೆಯಾಗಿರುತ್ತದೆ. ತಮ್ಮ ಮಕ್ಕಳ ದೇಹವು ಪುಷ್ಟಿಯಾಗಿಯೂ ಸುದೃಢವಾಗಿಯೂ ಇರಲಿಕ್ಕೆ ಬೇಕಾದ ಒಂದು ಅಪೂರ್ವವಾದ ಸಂಜೀವಿನಿಯನ್ನು ಎಲ್ಲರೂ ತಿಳಿದಿದ್ದಾಗಿದ್ದರೆ ಈ ವಿಚಾರವು ಇಷ್ಟು ಕಠಿಣತರವಾದ್ದಾಗಿರುತ್ತಿರಲಿಲ್ಲ. ಈ ಸಂಜೀವಿನಿಯಲ್ಲಿರುವ ಔಷಧವನ್ನು ಹೆಚ್ಚು ಸಫಲತೆಯಿಂದ ಅನೇಕರು ಭಾರತದ ಸುದ್ದಗಲಕ್ಕೂ ಕಳೆದ 50 ವರ್ಷಗಳಿಂದ ಉಪಯೋಗಿಸುತ್ತಲಿದ್ದಾರೆ. ಮಗುವು ಹೆಚ್ಚು ಕೃಶವಾಗಿ, ನಿರ್ಬಲತೆಯಿಂದ ಕೂಡಿ ಹಾಲನ್ನು ಸಹ ಜೀರ್ಣಿಸಿಕೊಳ್ಳಲಶಕ್ತವಾಗಿ, ಆಗಿಂದಾಗ್ಗೆ ಶೀತ, ಕೆಮ್ಮು ಮೊದಲಾದ ರೋಗಗಳಿಗೀಡಾಗಿರುವುದಾದರೆ ಒಡನೆ ಪ್ರಸಿದ್ಧಿ ಹೊಂದಿರುವ

ಡೋಂಗರೆ ಬಾಲಾಮೃತವನ್ನು

ಕೊಡಬೇಕು. ಡೋಂಗರೆ ಬಾಲಾಮೃತವು ಒಂದು ಟಾನಿಕ್. ಎಲ್ಲೆಡೆಯಲ್ಲೂ ದೊರೆಯುವುದು.

ಡೋಂಗರೆ ಕಂಪೆನಿ,
[illegible], ಬೊಂಬಾಯಿ.

All kinds of World Famous Guns, Rifles, Revolvers, Pistols, Hunting and Fishing requisites at Lowest Competitive prices.



ARMS & AMMUNITION.

HUNTING & FISHING REQUISITES.

CURRENT CATALOGUE FREE

The Bombay Armoury,

329-331, Abdul Rehman Street,

12—2 BOMBAY, 3.

GOVERNMENT SOAP FACTORY,

Bangalore.

ವಿಶ್ವಾಸಾರ್ಹತೆ.

ಅತ್ಯುತ್ತಮವಾದ ಟಾಯಿಲೆಟ್ ಸಾಬೂನಿನಲ್ಲಿ ಯಾವ ಯಾವ ಗುಣಗಳು ಅವಶ್ಯಕವೆಂದು ನೀವು ತಿಳಿದಿರುತ್ತೀರೋ ಆ ಗುಣಗಳೆಲ್ಲಾ

ಮೈಸೂರು ಸ್ಯಾಂಡಲ್ ಸಾಬೂನಿನಲ್ಲಿವೆ.

ಸಾವು ನಿಮಗೆ ಭರವಸೆಯನ್ನೀಯುತ್ತೇವೆ.

ಎಲ್ಲಾ ಕಡೆಯಲ್ಲಿಯೂ ದೊರೆಯುತ್ತವೆ.

ಗವರ್ನ್‌ಮೆಂಟ್ ಸೋಪ್ ಫ್ಯಾಕ್ಟರಿ.

52—15 ಬೆಂಗಳೂರು.

ಪ್ರಕಟಣೆ.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ.
(ಸ್ಥಾಪನೆಯಾದದ್ದು 1922ರಲ್ಲಿ)

		ರೂ
ಶೇರ್ ಬಂಡವಾಳ	—	50,000— 0—0
ವಸೂಲಾದ ಶೇರ್‌ಮೊಬಲಗು	—	31,390— 0—0
ಜಮೂಬಂದ ಠೇವಣಾತಿ	—	21,0196—13—7
ವಸೂಲಾದ ಕ್ಷೇಮನಿಧಿ	—	75,248— 12—0

ಈ ಬ್ಯಾಂಕಿನಿಂದ ಕೊಡಗು ದೇಶದ ಸಹಕಾರಿ ಸಂಘಗಳಿಗೇನೇ ಹೆಚ್ಚಾಗಿ ಸಾಲಕೊಡಕ್ಕಧ್ದು.

ಒಂದು ವರ್ಷ ವಾಯಿದೆ ಅಥವ ಹೆಚ್ಚಿನ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ ರೂ 4-8-0ರ ದರದಲ್ಲಿ ಬಡ್ಡಿ ದೊರೆಯುತ್ತೆ. ಕಡಿಮೆ ವಾಯಿದೆಯ ಠೇವಣಾತಿಗಳಿಗೆ ಶೇಕಡ ಸಾಲಿಯಾನ 4ರ ಬಡ್ಡಿ ದೊರೆಯುತ್ತೆ.

ವರ್ಷಕ್ಕೊಂದಾವರ್ತಿ ಕೋ ಆಪರೇಟಿವ್ ರಿಜಿಸ್ಟ್ರಾರವರು ನೆಕ್ಕ ಆಜಮಾಯಿಸಿಕೆ ಮಾಡುತ್ತಾರೆ.

ಪ್ರೆಸಿಡೆಂಟರು,	ಮ್ಯಾನೇಜರ್
ಕೆ. ಎನ್. ಸುಬ್ರಾಯ,	ರಾ. ಸಾ. ಪಾಂಡಂಡ
(ಆನರರಿ ರಿಜಿಸ್ಟ್ರಾರ್.)	ಚಂಗಪ್ಪನವರು,

ಸೆಕ್ರೆಟರಿ:
ಮನೆಯಪ್ಪಂಡ ಬೆಳ್ಯಪ್ಪನವರು.

ತಾರೀಕು 1—7—1934.

ನೋಟೀಸು.

ಈ ಕೆಳಗಿನ ಸನ್ಮಾನೀಯರು "ಕೊಡಗು" ಪತ್ರಿಕೆಯ ಚಂದಾ ಹಣವನ್ನು ವಸೂಲ್ಮಾಡಲು ಒಪ್ಪಿಕೊಂಡಿದ್ದರಿಂದ, ಅವರನ್ನು ಏಜೆಂಟರುಗಳಾಗಿ ನೇಮಿಸಿ ಅವರಿಗೆ ನಮ್ಮ ರಶೀತಿ ಪುಸ್ತಕಗಳು ಕೊಡಲಾಗಿವೆ. ಕೆಳಗಿನ ಸಬ್ ಏಜೆಂಟರುಗಳಿಗೆ ಏಜೆಂಟ್‌ರವರ ಜವಾಬ್ದಾರಿಕೆ ಮೇಲೆ ರಶೀತಿ ಪುಸ್ತಕಗಳು ಕೊಡಲಾಗಿವೆ. ದಯವಿಟ್ಟು ಚಂದಾದಾರರೆಲ್ಲರೂ ಅವರಿಗೆ ಅನುಕೂಲವಿರುವ ಸ್ಥಳದಲ್ಲಿ ತಮ್ಮ ಚಂದಾವನ್ನು ಪಾವತಿ ಮಾಡಿ ರಶೀತಿ ಪಡೆಯಬೇಕಾಗಿ ಕೋರಿಕೆ.

ಏಜಂಟರುಗಳು.

ಉತ್ತರ ಕೊಡಗಿಗೆ:—ಮೆ. ವಿ. ಆರ್. ತಮ್ಮಯ್ಯನವರು.

ದಕ್ಷಿಣ ಕೊಡಗಿಗೆ:—ಮೆ. ಮೂದೇಟಿರ ಪೂವಯ್ಯನವರು.

ಸಬ್ ಏಜೆಂಟರುಗಳು.

ವಿರಾಜಪೇಟೆ—ಮೆ. ಮುಂಡೇಪಂಡ ಸೋಮೆಯ್ಯನವರು, (ಖಾದಿಭಂಡಾರ.)

ಅಮ್ಮತ್ತಿ—ಸಿದ್ದಾಪುರ—ಮೆ. ಐನಂಡ ಮೊದಪ್ಪನವರು,

ಪೊನ್ನಂಪೇಟೆನಾಡು—ಮೆ. ಪಿ. ಜಿ. ಮುದ್ದಯ್ಯನವರು,

ಮತ್ತು ಅರಮಣಮಾಡ ಪಿ. ಕಾರ್ಯಪ್ಪನವರು,

ಹುದಿಕೇರಿ & ತಿತಿಮತ್ತಿ—ಮೆ. ಜಿ. ಮೊದಯ್ಯನವರು,

ಸುಂಟಿಕೊಪ್ಪ—ಮೆ. ಅಪ್ಪಚಟ್ಟೋಳಂಡ ಮಾಚಯ್ಯನವರು,

ಸೂಚನೆ:—ಪ್ರಿಂಟು ಆದ ರಶೀತಿ ಹೊಂದಿಕೊಳ್ಳದೆ ಯಾರೂ ಚಂದಾ ಕೊಡಬಾರದಾಗಿ ಈ ಮೂಲಕ ತಿಳಿಸಲಾಗಿದೆ.

ಮೇನೇಜರ್,
"ಕೊಡಗು" ಲಿಮಿಟೆಡ್
ಮಡಿಕೇರಿ,

ಸಂತೋಷಕ್ಕೆ ಸಿದ್ಧವಾಗಿವೆ.

ಸಹಕಾರ ಸಂಘಗಳ ಮತ್ತು ದವಸ ಭಂಡಾರಗಳ ಪ್ರತಿಯೊಬ್ಬ ಮೆಂಬರನ್ನೆಯೂ ಇರಬೇಕಾದ ಅಮಿತ ಜವಾಬ್ದಾರಿಕೆಗಳನ್ನರಿತ್ತು ಸಹಾಯಕ ಸಂಘದ ಮತ್ತು ದವಸ ಭಂಡಾರದ ಸಾಮಾನುಸರಿ ಪದ್ಧತಿಗಳೂ, ಪಾಸ್ ಬುಕ್ಕುಗಳೂ, ಎಲ್ಲಾ ಸಹಕಾರಿ ಸಂಘಗಳ ಮತ್ತು ದವಸ ಭಂಡಾರಗಳ ಕೆಲಸಗಳನ್ನು ಕ್ರಮಬದ್ಧಕರ ನಡಿಸಲು ಅತ್ಯಾವಶ್ಯಕವಾಗಿರುವ, ರೂಲ್ಸಿಗನುಸಾರವಾಗಿ ತಯಾರಿಸಲ್ಪಟ್ಟಿರುವ ದಾವಾ ಫಾರಮುಗಳೂ, ಖರಾರು ಫಾರಮುಗಳೂ, ಜಮ್ಮ ಮಂಜೂರಾತಿ ಫಾರಮುಗಳೂ, ಕುಟುಂಬಸ್ಥರ ಒಪ್ಪಿಗೆ ಫಾರಮುಗಳೂ, ಜಾವಿನು ಖರಾರು ಫಾರಮುಗಳೂ, ಸೆಕ್ಯೂರ್ ಕೀಪರ್ ಖರಾರು ಫಾರಮುಗಳೂ ಫಾರಮುಗಳೂ, ಮೆಜರ್ ಪುಸ್ತಕಗಳೂ, ರಶೀತಿ ಪುಸ್ತಕಗಳೂ, ಜಮಾ ಖರ್ಚಿನ ಇಸ್ಟರ್ ಪುಸ್ತಕಗಳೂ, ಮತ್ತು ಚೆಕ್ ಪುಸ್ತಕಗಳೂ ನಮ್ಮ ಕಡಿಮೆ ಕ್ರಯದಲ್ಲಿ ದೊರೆಯುತ್ತವೆ. ಮುದ್ದು ಬರಲಿಕ್ಕೆ ಆಗದವರು ಆರ್ಡರು ಕೊಟ್ಟಲ್ಲಿ ವಿ. ಪಿ. ಮೂಲಕ ಕಳುಹಿಸಲಾಗುವುದು.

ಮೇನೇಜರ್
"ಕೊಡಗು, ಲಿಮಿಟೆಡ್,
ಮಡಿಕೇರಿ.

THE EMPIRE OF INDIA LIFE ASSURANCE COMPANY, LIMITED.

Established 19[illegible] Head Office:—BOMBAY.

SUMMARY OF RESULTS:—

(Present rates of Interim Bonus)

Rs. 16/— on Whole Life Policies } Per Rs, 1000 Sum Assured.
Rs. 14/— on Endowment Policies }

Policies in force	Rs, 11,16,64,000.
Assets	Rs. 4 37 51,000.
Claims paid	Rs. 4,17,00,000.
Income	Rs, 73,37,000.

The PREMIUM RATES charged by this Company are REMARKABLY LOW and hence the above resultsare all the MORE CREDITABLE We therefore, recommend an "EMPIRE OF INDIA POLICY" to you and your friends.

WANTED INFLUENTIAL AGENTS IN ALL IMPORTANT PLACES.

For particulrs please apply to :— Branch Secretary :—

52—31 152/3, COMMERCIAL STREET, Bangalore.

ಓರಿಯಂಟಲ್ ಗವರ್ನಮೆಂಟ್ ಸೆಕ್ಯೂರಿಟಿ ಜೀವ ವಿಮೆ ಕಂಪೆನಿ ಲಿಮಿಟೆಡ್.

(೧೮೭೪ರಲ್ಲಿ ಇಂಡಿಯಾದಲ್ಲಿ ಸ್ಥಾಪನೆಯಾದ್ದು) (ಹೆಡ್ ಆಫೀಸು—ಬೊಂಬಾಯಿ.

1934ನೇ ಇಸವಿಯ ಕಂಪೆನಿಯ ಕೆಲಸದ ಫಲಿತಾಂಶ—

ಹೊಸ ವಾಲಿಗಳ ಪ್ರೀಮಿಯಂ	....	....	ರೂ. 7,62,42,761
ವಾರ್ಷಿಕ ಆಪ್ಪತ್ತಿ	....	....	ರೂ. 3,14,01,970
ಚಾಲ್ತಿಯಲ್ಲಿರುವ ಒಟ್ಟು ವಾಲಿಸಿಗಳು	....		ರೂ. 54,20,38,518
ಪ್ಲೇಯಿಮ್ಸ್‌ಗಳಿಗೆ ಕೊಟ್ಟ ಒಟ್ಟು ಹಣ	....		ರೂ 16,29,88,814
ಫಂಡ್ಸ್ ಹೆಚ್ಚಿದ್ದು	....	....	.... ರೂ. 15,53,48,843

ಈ ಮೇಲಿನ ಫಲಿತಾಂಶಗಳು 'ಓರಿಯಂಟಲ್' ಕಂಪೆನಿಯ ಸುಸಂಘಟನೆಯನ್ನೂ ಮತ್ತು ಪ್ರಸಿದ್ಧಿಯನ್ನೂ ವಿಷದಗೊಳಿಸುತ್ತವೆ

ಈ ಪ್ರಸಿದ್ಧಿಗೊಂಡಿರುವ ಪತ್ತು ಅಭಿವೃದ್ಧಿಯಲ್ಲಿರುವ ಇಂಡಿಯನ್ ಜೀವ ವಿಮೆ ಕಂಪೆನಿಯಲ್ಲಿ ವಿಮೆ ಇಳಿಸಲು ಸಾವಕಾಶ ಮಾಡಬೇಡಿ.

ಹೆಚ್ಚಿನ ಮಾಹಿತಿಗೆ ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳತಕ್ಕದ್ದು:—

ಮೇನೇಜರ್, ಓರಿಯಂಟಲ್ ಬಿಲ್ಡಿಂಗ್ಸ್, ಬೊಂಬಾಯಿ.

ಅಥವಾ ಕಂಪೆಯ ಈ ಕೆಳಗಿನ ಯಾವ ಆಫೀಸಿಗಾದರೂ ಬರೆಯಬಹುದು.

ಆಗ್ರ	ಕಲ್ಲಿಕೋಟೆ	ಕರಾಚಿ	ಮೊಂಬಾಸ	ರಂಗೂನು
ಅಹ್ಮದಾಬಾದು	ಕಲ್ಕತ್ತಾ	ಕೊಲಾಲಂಪೂರು	ನಾಗಪುರ	ರಾವಲ್‌ಪಿಂಡಿ
ಅಜ್ಮೀರ್	ಕೊಲಂಬೊ	ಲಾಹೋರ್	ಪಾಟ್ನೆ	ಸಿಂಗಪುರ
ಅಲ್ಲಾಹಾಬಾದು	ಡಕ್ಕಾ	ಲಕ್ನೊ	ಪೂನ	ಸುಕ್ಕೂರು
ಅಂಬಾಲಾ	ಡೆಲ್ಲಿ	ಮದ್ರಾಸು	ರಾಯಪುರ	ತಿರುಚಿನಾಪಳ್ಳಿ
ಒಳ್ಳಾರಿ	ಗೌಹತಿ	ಮಂಡಲೆ	ರಾಜಶಾಹಿ	ತಿರುವೆಂಡ್ರಮ್
ಬರೇಲಿ	ಜಲಗಾಂ	ಮಡಿಕೇರಿ	ರಾಂಚಿ	ವಿಶಾಖಪಟ್ಟಣ
ಕೊಯಂಬುತ್ತೂರು	ಗುಂಟೂರು	ಜಲ್‌ಪೈಗುರಿ	ಜಬ್ಬಲ್‌ಪುರ	ಮಧುರೆ

ಓರಿಯಂಟಲ್ ಬಿಲ್ಡಿಂಗ್ಸ್, ಸೌತ್ ಪೇರೇಡ್, ಬೆಂಗಳೂರು, } 52—23

ಯಂ. ವಿ. ಮುತ್ತಕೃಷ್ಣ ನಾಯುಡು,
(ಬ್ರಾಂಚ್ ಸೆಕ್ರೆಟರಿ.)

ಕಟುಕಷಾಯ ಮಲೆ ಜ್ವರಕ್ಕೆ—ಇದು ಇಂಜಕ್ಷನ್ ಮತ್ತು ಕ್ವಿನೀನು ಸೇವಿಸಿಯೂ ಗುಣವಾಗದಿರುವ ಮಲೆ ಜ್ವರ ದಿನಬಿಟ್ಟು ಬರುವ ಜ್ವರ, 3—4 ದಿವಸಕ್ಕೊಂದು ಸಾರಿ ಬರುವ ಜ್ವರ, ನಡುಗಿ ಬರುವ ಜ್ವರ ಮತ್ತು ಜ್ವರಗೆಟ್ಟ ದೋಷದಿಂದ ಬರುವ ಜ್ವರಗಳಿಗೆ ಖಾತ್ರಿ ಗುಣ ಕೊಡುತ್ತದೆ. ಸೀಸೆ ಒಂದಕ್ಕೆ ರೂ. 1—6—0. 1½ಕ್ಕೆ 4—0—0. 6ಕ್ಕೆ 7—8—0. 12ಕ್ಕೆ 14—0—0.

ಚಂದ್ರಪ್ರಾಶ—ಇದು ಪ್ರಮೇಹ ಮೂತ್ರ ಕೃಚ್ಛ, ಮೂತ್ರ ಹನಿಹನಿಯಾಗಿ ಹೋಗುವುದ, ಮೂತ್ರಕೋಶದ ಉರಿ, ಮೂತ್ರ ಸ್ರಾವಗಳ ಉರಿ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ಹೊಯ್ಯುವಾಗ ಉರಿಯುವುದು, ಮೂತ್ರನಾಳದಿಂದ ಕೀವು ಬರುವುದು, ಮೂತ್ರದ ಧಾತು, ಹುಡಿ ಹೋಗುವುದು, ಆಗಾಗ್ಗೆ ಮೂತ್ರ ಬರುವುದು, ಮೂತ್ರ ತಡೆಯಲಕ್ಕೆ ಸಾಮರ್ಥ್ಯವಿಲ್ಲದಿರುವುದು, ದೇಹದಲ್ಲಿ ಉರಿ, ಬಾಯಾರಿಕೆ, ಸ್ವಪ್ನಾವಸ್ಥೆ, ಮೂತ್ರನಾಳದಲ್ಲಿ ಚುಚ್ಚುವ ನೋವು ಇವುಗಳಿಗೆ ಪರಮ ಔಷಧಿ. ಬಾಟ್ಲಿ 1ಕ್ಕೆ ರೂ 1—4—0, 3ಕ್ಕೆ 3—8—0, 6ಕ್ಕೆ 6—12—0.

ರೋಮನಾಶಿನಿ—ಈ ಹುಡಿಯನ್ನು ನೀರಿನಲ್ಲಿ ಕಲಸಿ ಮೈಯಲ್ಲಿ ರೋಮವಿರುವ ಭಾಗಕ್ಕೆ ಹಚ್ಚಲು ರೋಮವು ಉದುರಿ ಬೀಳುವುದು. ಡಬ್ಬಿ 1ಕ್ಕೆ ಅಣೆ 3 ಡಬ್ಬಿಗಳಿಗೆ ರೂ. 1, 1 ಡಜನಿಗೆ 3—8—0.

ಮುನೋಲ್ಲೆಸಿನಿ ತೈಲ—ತಲೆನೋವು, ತಲೆ ತಿರುಗುವುದು, ತಲೆಭಾರಿ, ಕಂಜುರಿ, ಕಿವಿಯಿಂದ ಕೀವು ಸೋರುವುದು, ಕಿವುಡತನ, ಕಂಜು ನೋವು, ಅವಸ್ಮಾರ, ನಿದ್ದೆಬಾರದಿರುವುದು, ನೆನಪು ಶಕ್ತಿ ಕುಂದಿಕೋಗುವುದು ಇವುಗಳನ್ನೆಲ್ಲಾ ಖಂಡಿತ ಗುಣಮಾಡುತ್ತದೆ. ಉದುರುವ ಕೂದಲನ್ನು ಸಿಲ್ಲಿಸಿ, ಗಿಡ್ಡವಾಗಿರುವ ಕೂದಲನ್ನು ಬೆಳೆಯಿಸಿ ಕೂದಲಿಗ ಸೌಂದರ್ಯವನ್ನೂ, ಹೊಳಪನ್ನೂ ಕೊಟ್ಟು ಅಕಾಲಕ್ಕೆ ಹಣ್ಣಾಗುವ ಕೂದಲನ್ನು ತಗೆದು ಕೂದಲು ಇಲ್ಲದ ಸ್ಥಳದಲ್ಲಿ ಹೊಸ ಕೂದಲನ್ನು ಹುಟ್ಟಿಸುತ್ತದೆ. ಸೀಸೆ 1ಕ್ಕೆ ರೂ. 1,/ಕ್ಕೆ 2—10—0, ಒಂದು ದೊಡ್ಡ ಸೀಸೆಗೆ 2—8—0 3ಕ್ಕೆ 5—8—0.

ವಿಲಾಸ—ಮುನೋಲ್ಲಾಸಿನಿ ಕಂಪೆನಿ,
9 ಮಂಗಳೂರು.

52—16 ಕಟಲಾಗು ತರಿಸಿ ನೋಡಿರಿ.

Printed & pudlished by P. I. Belliappa, at "Kodagu" Press for "Kodagu" Ltd.